ಹೆಸರುಘಟ್ಟದ ಹೊನ್ನಪ್ಪನವರ

ವ್ಯಾಕರಣ ಸಂಗ್ರಹಂ

(ಪ್ರಶ್ನೋತ್ತರ ರೂಪ)

ಸಂಪಾದಕರು
ಪ್ರೊ. ಜಿ. ಅಶ್ವತ್ಥನಾರಾಯಣ



[illegible]

ವ್ಯಾಕರಣ ಸಂಗ್ರಹಂ

([illegible] ಸಂಸ್ಕೃತ ವ್ಯಾಕರಣ)

[illegible]

[illegible]

([illegible])

[illegible]

[illegible]

[illegible]

[illegible]–560 004

ಹೆಸರುಘಟ್ಟದ ಹೊನ್ನಪ್ಪನವರ

ವ್ಯಾಕರಣ ಸಂಗ್ರಹಂ

(ಪ್ರಶ್ನೋತ್ತರ ರೂಪದ ಹಳಗನ್ನಡ ವ್ಯಾಕರಣ)

ಸಂಪಾದಕರು

ಪ್ರೊ.ಜಿ. ಅಶ್ವತ್ಥನಾರಾಯಣ

(ನಿವೃತ್ತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು)

ಪ್ರಕಾಶಕರು

ಪ್ರಿಯದರ್ಶಿನಿ ಪ್ರಕಾಶನ

ನಂ. 138, 7ನೇ 'ಸಿ' ಮುಖ್ಯರಸ್ತೆ

ಹಂಪಿನಗರ, ಬೆಂಗಳೂರು–560 104.

ಹೆಸರುಘಟ್ಟದ ಹೊನ್ನಪ್ಪನವರ
ವ್ಯಾಕರಣ ಸಂಗ್ರಹಂ
(ಪ್ರಶ್ನೋತ್ತರ ರೂಪ)

ಸಂಪಾದಕರು
ಪ್ರೊ. ಜಿ. ಅಶ್ವತ್ಥನಾರಾಯಣ
(ನಿವೃತ್ತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು)

ಪ್ರಕಾಶಕರು
ಪ್ರಿಯದರ್ಶಿನಿ ಪ್ರಕಾಶನ
ನಂ. 138, 7ನೇ 'ಸಿ' ಮುಖ್ಯರಸ್ತೆ
ಹಂಪಿನಗರ, ಬೆಂಗಳೂರು-560 104.

ಮೊದಲ ಮುದ್ರಣ : 2025

ಪುಟ : xvi + 104 = 120

ಬೆಲೆ : ರೂ. 120/-

ಕಾಗದ : 70 GSM Maplitho Paper

ರಕ್ಷಾಪುಟ ವಿನ್ಯಾಸ : ನಾರಾಯಣ

ಛಾಯಾಕ್ಷರ ಜೋಡಣೆ : ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು-40.

ಮುದ್ರಕರು
ಸ್ನೇಹಾ ಪ್ರಿಂಟರ್ಸ್
ನಂ. 16, 1ನೇ ಬಿ ಮುಖ್ಯರಸ್ತೆ, ಶ್ರೀ ರಾಘವೇಂದ್ರ ಮಠದ ರಸ್ತೆ
ಪಾಪರೆಡ್ಡಿಪಾಳ್ಯ 11ನೇ ಬ್ಲಾಕ್, ನಾಗರಬಾವಿ 2ನೇ ಹಂತ, ಬೆಂಗಳೂರು-72.
ದೂ : 080 23212814, ಮೊ : 9845062549

ಪ್ರಕಾಶಕರ ನುಡಿ

ಕನ್ನಡದಲ್ಲಿ ಇಂದು ಪ್ರತಿದಿನ ಹತ್ತಾರು ವರ್ಷದಲ್ಲಿ ಸಾವಿರಾರು ಪುಸ್ತಕಗಳು ಪ್ರಕಟವಾಗುತ್ತಿವೆ. ಆದರೆ ಹಿಂದಿನ ತಲೆಮಾರುಗಳ ವಿದ್ವಾಂಸರು, ಸಾಹಿತಿಗಳು ರಚಿಸಿದ ಅಪೂರ್ವ ಕೃತಿಗಳತ್ತ ಇಂದಿನ ಪ್ರಕಾಶಕರು ಕಣ್ಣೆತ್ತಿ ನೋಡದಿರುವುದರಿಂದ ಕನ್ನಡಕ್ಕೆ ಆಕರಗ್ರಂಥಗಳಾಗಿರುವ ಎಲ್ಲಾ ಕಾಲದಲ್ಲೂ ಎಲ್ಲರಿಗೂ ಉಪಯುಕ್ತವಾದ ಅನೇಕ ವಿದ್ವತ್ಪೂರ್ಣ ಗ್ರಂಥಗಳು ಕಣ್ಮರೆಯಾಗುತ್ತಿವೆ. ಎಷ್ಟೋ ಸಾಹಿತಿ ವಿದ್ವಾಂಸರಿಗೆ ಇಂಥ ಗಣ್ಯ ವಿದ್ವಾಂಸರಿದ್ದರು ಅವರು ಇಂಥಿಂಥ ಅಪರೂಪದ ಗ್ರಂಥಗಳನ್ನು ರಚಿಸಿದ್ದಾರೆ ಎಂಬುದೇ ತಿಳಿದಿಲ್ಲ.

ಆದಕಾರಣ ಕಣ್ಮರೆಯಾದ ಕಣ್ಮಣಿ ವಿದ್ವಾಂಸರ ಅಲಭ್ಯ ಕನ್ನಡ ಗ್ರಂಥಗಳನ್ನು ಬೆಳಕಿಗೆ ತರಬೇಕು. ಎಂದು ಯೋಚಿಸುತ್ತಿದ್ದಾಗ ಖ್ಯಾತವೈದ್ಯರೂ ಸಂಶೋಧಕರೂ ಸಾಹಿತಿಗಳೂ ಆದ ಡಾ. ಬಿ. ನಂಜುಂಡಸ್ವಾಮಿ ಅವರು ಸಂಶೋಧನ ಕಾರ್ಯಮಾಡಿ ಹೆಸರಘಟ್ಟದ ಹೊನ್ನಪ್ಪನವರ ಗ್ರಂಥಗಳನ್ನು ಅವರ ಬಗ್ಗೆ ಮಾಹಿತಿಗಳನ್ನು ಕಷ್ಟಪಟ್ಟು ಸಂಗ್ರಹಿಸಿದರು. ಅವರು ಇಂದಿಗೂ ವಿದ್ಯಾರ್ಥಿಗಳಿಗೆ ವಿದ್ವಜ್ಜನರಿಗೆ ಉಪಯುಕ್ತವಾದ ಹೆಸರಘಟ್ಟದ ಹೊನ್ನಪ್ಪನವರ ವ್ಯಾಕರಣ ಸಂಗ್ರಹವನ್ನು ಪ್ರಕಟನೆಗೆ ದೊರಕಿಸಿಕೊಟ್ಟರು. ಅದನ್ನು ಪರಿಷ್ಕರಿಸಿ ಸೂಕ್ತ ಸುಧಾರಣೆಗಳೊಂದಿಗೆ ವಿದ್ವಾಂಸರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಸಂಪಾದಿಸಿ ಪ್ರಕಟನೆಗೆ ಸಿದ್ಧಪಡಿಸಿಕೊಟ್ಟಿದ್ದಾರೆ. ಈ ಇಬ್ಬರು ಮಹನೀಯರಿಗೆ ನಾನು ಕೃತಜ್ಞನಾಗಿದ್ದೇನೆ. ಗಣಕ ಪರಿಷತ್ತಿನ ಜಿ.ಎನ್. ನರಸಿಂಹಮೂರ್ತಿ ಅವರು ನಾಡಿನ ವಿದ್ವಜ್ಜನರು ಶಿಕ್ಷಕರು ವಿದ್ಯಾರ್ಥಿಗಳಿಗಾಗಿ ತಪ್ಪಿಲ್ಲದೆ ಸೊಗಸಾಗಿ ಡಿ ಟಿ ಪಿ ಮಾಡಿಕೊಟ್ಟಿದ್ದಾರೆ. ಅವರಿಗೆ ನಾವು ಆಭಾರಿಗಳಾಗಿದ್ದೇವೆ. ವ್ಯಾಕರಣಪ್ರಿಯರು ಈ ಗ್ರಂಥವನ್ನು ಕೊಂಡು ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ.

ಪ್ರಕಾಶಕರ ಸಂಸ್ಥೆ.

ಸಂಪಾದಕರ ಮಾತು

ಒಂದು ಭಾಷೆಯನ್ನು ಪೂರ್ಣವಾಗಿ ಅರಿಯಬೇಕಾದರೆ ಆ ಭಾಷೆಯ ವ್ಯಾಕರಣದ ಜ್ಞಾನ ಅತ್ಯಗತ್ಯ. ಪ್ರತಿಭಾಷೆಯೂ ಗದ್ಯರೂಪ ಪದ್ಯರೂಪ ನಾಟಕರೂಪ (ಸಂಭಾಷಣರೂಪ)ದಲ್ಲಿರುವ ಕೃತಿಗಳನ್ನು ಅಪಾರವಾಗಿ ಹೊಂದಿರುತ್ತದೆ. ಭಾಷೆಯಲ್ಲಿರುವ ಗದ್ಯಕೃತಿಗಳನ್ನು ಅರ್ಥಮಾಡಿಕೊಳ್ಳಲು ವ್ಯಾಕರಣಗ್ರಂಥಗಳು ನೆರವಾಗುತ್ತವೆ. ಕಾವ್ಯಕೃತಿಗಳನ್ನು ಅರಿಯಲು ಛಂದಸ್ಸು, ಅಲಂಕಾರ ಗ್ರಂಥಗಳು ನೆರವಾಗುತ್ತವೆ. ಗದ್ಯಪದ್ಯಗಳೆರಡನ್ನು ತಿಳಿಯಲು ಆಡುನುಡಿಯ ರಹಸ್ಯವನ್ನು ತಿಳಿದಿರಬೇಕಾಗುತ್ತದೆ.

ಕನ್ನಡ ಭಾಷೆಯನ್ನು ಕಲಿಯಲು ಮೂರು ಬಗೆಯ ಭಾಷಾಮಟ್ಟದ ವ್ಯಾಕರಣಗ್ರಂಥಗಳ ಅಗತ್ಯವಿದೆ. ಹಳಗನ್ನಡ ವ್ಯಾಕರಣ ಗ್ರಂಥಗಳು, ನಡುಗನ್ನಡ ವ್ಯಾಕರಣ ಗ್ರಂಥಗಳು, ಹೊಸಗನ್ನಡ ವ್ಯಾಕರಣ ಗ್ರಂಥಗಳು. ಇವುಗಳನ್ನು ತಿಳಿಯುವ ಮೊದಲು ಭಾಷಾಕಲಿಕೆಯ ಪಠ್ಯಗಳು (ಪ್ರಾಥಮಿಕ ಹಂತದವು ಮತ್ತು ಪ್ರೌಢ ಹಂತದವು ವಿದ್ಯಾರ್ಥಿಗಳಿಗೆ ಮತ್ತು ಪ್ರೌಢರಿಗೆ ಭಾಷಾಕಲಿಕೆಯ ಪ್ರಥಮ ಪಾಠಗಳ ಕಲಿಕಾ ಪಠ್ಯಗಳು ಅಗತ್ಯ. (ಬಾಲಬೋಧೆಗಳ ಅಗತ್ಯವಿದೆ.)

ಕನ್ನಡ ಭಾಷೆಯಲ್ಲಿ ರಚಿತವಾದ ವ್ಯಾಕರಣ ಗ್ರಂಥಗಳು ತಾಳೆಗರಿಗಳಲ್ಲಿ ಕಾಗದದ ಹಸ್ತಪ್ರತಿಗಳಲ್ಲಿ ಇದ್ದವು. ಬ್ರಿಟಿಷರ ಆಗಮನಾನಂತರ ಅಚ್ಚಿನ ಯುಗ (ಮುದ್ರಣಯಂತ್ರಗಳಿಂದ) ಪ್ರಾರಂಭವಾದಮೇಲೆ ಶಾಲಾ ಶಿಕ್ಷಣ ಪದ್ಧತಿ ಬಳಕೆಗೆ ಬಂದಿತು. ಮಠಮಾನ್ಯಗಳಲ್ಲಿ, ದೇವಸ್ಥಾನಗಳಲ್ಲಿ ಗುರುಹಿರಿಯರಿಂದ ಕಲಿಯುತ್ತಿದ್ದ ವಿದ್ಯಾಭ್ಯಾಸ ಪದ್ಧತಿ ಅರ್ಥಾತ್ ಗುರುಕುಲಪದ್ಧತಿಯ ಕಲಿಕಾ ವಿಧಾನಗಳ ಬದಲಿಗೆ ಪಠ್ಯಗಳ ಮೂಲಕ ಶಾಲಾಪದ್ಧತಿಯಲ್ಲಿ ಕಲಿಯುವುದನ್ನು ಬ್ರಿಟಿಷರು ಜಾರಿಗೆ ತಂದರು. ಆಡಳಿತಾಧಿಕಾರ ಅವರಿಗೆ ದೊರೆತಂತೆಲ್ಲಾ ಶಾಲಾಪದ್ಧತಿ ವ್ಯಾಪಕವಾಗಿ ಪ್ರಚುರವಾಯಿತು.

೧೯ನೇ ಶತಮಾನದ ವೇಳೆಗೆ ಬ್ರಿಟಿಷರು ಅಚ್ಚಿನಯಂತ್ರಗಳ ಮೂಲಕ ಪಠ್ಯಗ್ರಂಥಗಳನ್ನು ದೇಸೀ ಭಾಷೆಗಳಲ್ಲಿ ರಚಿಸಿ ಪ್ರಕಟಿಸತೊಡಗಿದರು. ಆಗ ಅವರಿಗೆ ಸಮಾನಾಂತರವಾಗಿ ದೇಸೀ ಪಂಡಿತರು ಕನ್ನಡ ಗ್ರಂಥಗಳನ್ನು ರಚಿಸಿ ಪ್ರಕಟಿಸ ತೊಡಗಿದರು.

ಬ್ರಿಟಿಷರು ಇಂಗ್ಲೀಷ್ ಭಾಷಾ ಪದ್ಧತಿಯ ಪ್ರಕಾರ ಕನ್ನಡ ವ್ಯಾಕರಣ ಗ್ರಂಥಗಳನ್ನು ಕನ್ನಡದಲ್ಲೂ ಇಂಗ್ಲಿಷಿನಲ್ಲೂ ಪ್ರಕಟಿಸತೊಡಗಿದರು. ೧೯ನೇ

ಶತಮಾನದಲ್ಲಿ ಕನ್ನಡ ವ್ಯಾಕರಣ ಗ್ರಂಥಗಳನ್ನೂ ಇಂಗ್ಲಿಷ್ ಮೂಲಕ ಕನ್ನಡ ಕಲಿಕಾ ಗ್ರಂಥಗಳನ್ನೂ ಮಿಷನರಿಗಳು ಧರ್ಮಪ್ರಚಾರದ ಹಿನ್ನೆಲೆಯಲ್ಲಿ ಪ್ರಕಟಿಸಿದರು. ಕನ್ನಡ ಭಾಷೆಯಲ್ಲಿ ಪ್ರಧಾನವಾಗಿ ಜನ ಬಳಸುತ್ತಿದ್ದ ಆಡುಮಾತಿನ ಹೊಸಗನ್ನಡ ವ್ಯಾಕರಣಗಳನ್ನು ಗ್ರಂಥಸ್ಥವಾಗಿದ್ದ ಹಳಗನ್ನಡ ವ್ಯಾಕರಣಗಳನ್ನು ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ · ಕನ್ನಡೇತರ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಕನ್ನಡ ವ್ಯಾಕರಣಗ್ರಂಥಗಳನ್ನು ಇತರ ವಿಷಯಗಳ ಗ್ರಂಥಗಳನ್ನು (ಕಾವ್ಯ, ಇತಿಹಾಸ, ಧರ್ಮ ಮುಂತಾದುವುಗಳಿಗೆ ಸಂಬಂಧಿಸಿದವುಗಳನ್ನು) ಪ್ರಕಟಿಸಿದರು. ೧೯ನೇ ಶತಮಾನ ದಲ್ಲಿ ಹೀಗೆ ಪ್ರಕಟವಾದ ಗ್ರಂಥಗಳಲ್ಲಿ ಮುಖ್ಯವಾದ ವ್ಯಾಕರಣಗ್ರಂಥಗಳು ಅಚ್ಚಾಗಿ ಬಳಕೆಯಲ್ಲಿದ್ದ ಗ್ರಂಥಗಳು ಶಾಲಾ ವಿದ್ಯಾರ್ಥಿಗಳಿಗಾಗಿ ಪ್ರಕಟವಾದವು. ಕೆಲವನ್ನು ಇಲ್ಲಿ ಗಮನಿಸಬಹುದು.

೧೯ನೇ ಶತಮಾನಕ್ಕೆ ಮುಂಚಿತವಾಗಿ ರಚಿತವಾದ ಹಳಗನ್ನಡ ವ್ಯಾಕರಣ ಗ್ರಂಥಗಳು.

೧)ಕವಿರಾಜಮಾರ್ಗ ಶ್ರೀವಿಜಯನಿಂದ (ರಚಿತವಾದುದು ಕಾಲ ಕ್ರಿ.ಶ.೮೧೪-೮೭೭) ಅಲಂಕಾರ ಗ್ರಂಥದ ನಡುವೆ ವ್ಯಾಕರಣಾಂಶಗಳು ಮೂಡಿ ಬಂದಿವೆ.

೨)ನಾಗವರ್ಮನು ರಚಿಸಿದ ಕರ್ಣಾಟಕ ಭಾಷಾಭೂಷಣ (ಕ್ರಿ.ಶ.೧೦೪೨) ಸಂಸ್ಕೃತ ಭಾಷೆಯಲ್ಲಿ ರಚಿತವಾದ ಹಳಗನ್ನಡ ವ್ಯಾಕರಣ.

೩)ನಾಗವರ್ಮ(೧೦೪೨ ಕ್ರಿ.ಶ.)ನ ಕಾವ್ಯಾವಲೋಕನವೆಂಬ ಅಲಂಕಾರ ಗ್ರಂಥದಲ್ಲಿ ಅಳವಟ್ಟಿರುವ ಶಬ್ದಸ್ಮೃತಿ ವ್ಯಾಕರಣ ಭಾಗ ಕನ್ನಡದಲ್ಲಿ ರಚಿತವಾದುದು.

೪)ಕೇಶಿರಾಜನಿಂದ ರಚಿತವಾದ (ಕ್ರಿ.ಶ. ೧೨೬೦) ಶಬ್ದಮಣಿದರ್ಪಣ. ಕರ್ನಾಟಕ ಲಕ್ಷಣ ಶಬ್ದಶಾಸ್ತ್ರವೆನಿಸಿದ ಅದ್ವಿತಿಯ ಹಳಗನ್ನಡ ವ್ಯಾಕರಣ ಕನ್ನಡದಲ್ಲಿ ರಚಿತವಾದುದು.

೫)ಭಟ್ಟಾಕಳಂಕನೆಂಬ ವ್ಯಾಕರಣ ಕರ್ತೃ ೧೬೦೪ರಲ್ಲಿ ಸಂಸ್ಕೃತದಲ್ಲಿ ರಚಿಸಿದ ಶಬ್ದಾನುಶಾಸನವೆಂಬ ಹಳಗನ್ನಡ ವ್ಯಾಕರಣ ಗ್ರಂಥ.

ಈ ಮೇಲ್ಕಂಡ ೫ ವ್ಯಾಕರಣ ಗ್ರಂಥಗಳೂ ಪ್ರಾಚೀನ ಪರಂಪರೆಯ ಕನ್ನಡ ವ್ಯಾಕರಣಗಳಾಗಿವೆ. ಎರಡು ಗ್ರಂಥಗಳು ಸಂಸ್ಕೃತದಲ್ಲಿ ರಚಿತವಾಗಿವೆ. ಮೂರು ಗ್ರಂಥಗಳು ಕನ್ನಡದಲ್ಲಿ ರಚಿತವಾಗಿವೆ. ಇವುಗಳಲ್ಲಿ ಎರಡು ಗ್ರಂಥಗಳು ಅಲಂಕಾರಶಾಸ್ತ್ರದ ಗ್ರಂಥದ ಮಧ್ಯೆ ಕಾಣಿಸಿಕೊಂಡ ಹಳಗನ್ನಡ ವ್ಯಾಕರಣಗಳಾಗಿವೆ. ಹಳಗನ್ನಡದ ವ್ಯಾಕರಣ ಕಲಿಕೆಗೆ ಆಕರಪ್ರಾಯ ಗ್ರಂಥಗಳಾಗಿವೆ.

೧೯ನೇ ಶತಮಾನದಲ್ಲಿ ಮುದ್ರಣಯಂತ್ರಗಳು ಚಾಲ್ತಿಗೆ ಬಂದವು ತಾಳೆಗರಿ ಕಾಗದದ ಹಸ್ತಪ್ರತಿಗಳ ಯುಗ ಮುಗಿದು ಅಚ್ಚಿನ ಗ್ರಂಥಗಳ ಪ್ರಕಟನಾಯುಗ ಪ್ರಾರಂಭವಾಯಿತು. ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಂಡು ಆಳುವುದಕ್ಕೆ ಪ್ರಾರಂಭಿಸಿ ಪ್ರಬಲರಾಗುತ್ತಿದ್ದ ಕಾಲವಾಗಿತ್ತು. ತಮ್ಮ ಆಡಳಿತದ ಪ್ರದೇಶಗಳಲ್ಲಿ ವಿದ್ಯಾಭ್ಯಾಸಕ್ಕಾಗಿ ಶಾಲೆಗಳನ್ನು ತೆರೆದರು. ಪಠ್ಯಗಳನ್ನು ನಿರ್ಮಿಸಿದರು. ಪರೀಕ್ಷೆಗಳನ್ನು ಪ್ರಾರಂಭಿಸಿದರು ಆ ಮೂಲಕ ಕನ್ನಡಕಲಿಕೆಯನ್ನು ತಮ್ಮದೇ ರೀತಿಯ ವಿಧಾನದಿಂದ ಮುಖ್ಯವಾಗಿ ಇಂಗ್ಲಿಷ್ ಭಾಷೆಯ ರಚನಾ ರೀತಿಯಲ್ಲಿ ಕನ್ನಡ ಕಲಿಸುವ ಪಠ್ಯಗಳು ಮತ್ತು ಕನ್ನಡ ವ್ಯಾಕರಣಗಳನ್ನು ರಚಿಸತೊಡಗಿದರು. ಶಾಲೆಗಳಲ್ಲಿ ಪಠ್ಯಗಳನ್ನಾಗಿ ಬಳಸಿದರು.

೧೯ನೇ ಶತಮಾನದಲ್ಲಿ ಬ್ರಿಟಿಷರು ರಚಿಸಿ ಪ್ರಕಟಿಸಿದ ಮುಖ್ಯ ವ್ಯಾಕರಣ ಗ್ರಂಥಗಳ ಜತೆಗೆ ದೇಶಿಯ ಪಂಡಿತರು ಹಳಗನ್ನಡ ವ್ಯಾಕರಣಗಳನ್ನು ಹೊಸಗನ್ನಡದಲ್ಲಿ ರಚಿಸಿದರು. ೧೬ನೇ ಶತಮಾನದವರೆಗೆ ರಚಿತವಾದ ಹಳಗನ್ನಡ ಗ್ರಂಥಗಳನ್ನು ಪ್ರಕಟಿಸಿದರು. ಅವುಗಳಲ್ಲಿ ಪ್ರಾಚೀನ ಪರಂಪರೆಯ ಪಂಚವ್ಯಾಕರಣ ಗ್ರಂಥಗಳು ಕವಿರಾಜಮಾರ್ಗ, ಶಬ್ದಸ್ಮೃತಿ, ಕರ್ನಾಟಕ ಭಾಷಭೂಷಣ, ಶಬ್ದಮಣಿದರ್ಪಣ ಮತ್ತು ಶಬ್ದಾನುಶಾಸನ ಗ್ರಂಥಗಳು/ ತಾಳೆಗರಿ/ಕಾಗದದ ಹಸ್ತಪ್ರತಿಗಳ ಆಧಾರದ ಮೇರೆ ಪ್ರಕಟವಾದವು. ಇದರೊಂದಿಗೆ ಮಿಷನರಿಗಳು ಹೊಸಗನ್ನಡದಲ್ಲಿ ರಚಿಸಿದ. ಹಳಗನ್ನಡ ವ್ಯಾಕರಣಗಳ ಮಾದರಿಯಲ್ಲಿ ದೇಶೀಯ ಪಂಡಿತರು, ಅಧ್ಯಾಪಕರು ೧೯ನೇ ಶತಮಾನದಲ್ಲಿ ವ್ಯಾಕರಣಗ್ರಂಥಗಳನ್ನು ರಚಿಸಿದರು.

ದೇಶೀಯ ಪಂಡಿತರ ಜತೆಗೆ ಕಿಟಲ್‌ನಂಥ ವಿದೇಶೀಯರು ವಿದ್ವತ್‌ಪೂರ್ಣವಾಗಿ ಹಳಗನ್ನಡ ಗ್ರಂಥಗಳನ್ನು ಹೊಸಗನ್ನಡದಲ್ಲಿ ಮತ್ತು ಇಂಗ್ಲಿಷಿನಲ್ಲಿ ಹೊರತಂದರು.

ಹೊಸಗನ್ನಡದಲ್ಲಿ ಹಳಗನ್ನಡ ಗ್ರಂಥಗಳನ್ನು ಕೆಲವು ಮಿಷನರಿಗಳು ಹೊಸವಿಧಾನದಲ್ಲಿ ಪ್ರಕಟಿಸತೊಡಗಿದಾಗ ದೇಶೀಯ ಪಂಡಿತರು ೧೯ನೇ ಶತಮಾನದಲ್ಲಿ ಮೊದಲಬಾರಿಗೆ ಇಬ್ಬರು ಕನ್ನಡ ವಿದ್ವಾಂಸರು ವಿನೂತನವಾಗಿ ಪ್ರಶ್ನೋತ್ತರ ರೂಪದಲ್ಲಿ ಕನ್ನಡ ವ್ಯಾಕರಣವನ್ನು ಶಾಲಾ ಅಧ್ಯಾಪಕರಿಗೆ ಹಾಗೂ ವಿದ್ಯಾರ್ಥಿಗಳಿಗಾಗಿ ರಚಿಸಿದರು.

೧) ಕೆ.ಕೃಷ್ಣಮಾಚಾರ್ಯರು ೧೮೩೮ರಲ್ಲಿ ರಚಿಸಿದ 'ಹೊಸಗನ್ನಡ ನುಡಿಗನ್ನಡಿ' ಎಂಬ ಹೊಸಗನ್ನಡದ ಪ್ರಶ್ನೋತ್ತರ ರೂಪದ ವ್ಯಾಕರಣ.

೨)ಹೆಸರಘಟ್ಟದ ಹೊನ್ನಪ್ಪ ೧೮೬೦ರಲ್ಲಿ 'ವ್ಯಾಕರಣಸಂಗ್ರಹಂ' ಎಂಬ ಪ್ರಶ್ನೋತ್ತರ ರೂಪವಾದ ಹಳಗನ್ನಡ ವ್ಯಾಕರಣ. ಇವುಗಳ ಪೈಕಿ ಕೃಷ್ಣಮಾಚಾರ್ಯರ ವ್ಯಾಕರಣಗ್ರಂಥ ಪುನರ್ಮುದ್ರಣವಾಗಿ ಸಾಕಷ್ಟು ಜನರಿಗೆ ತಿಳಿದಿದ್ದರೂ ಹೊನ್ನಪ್ಪನವರ ಗ್ರಂಥ ಪುನರ್ಮುದ್ರಣವಾಗದೆ ಜನಮಾನಸದಿಂದ ಕಣ್ಮರೆಯಾಯಿತು.

ಡಾ.ಬಿ.ನಂಜುಂಡಸ್ವಾಮಿ ಅವರು ವೃತ್ತಿಯಲ್ಲಿ ವೈದ್ಯರಾದರೂ ಪ್ರವೃತ್ತಿಯಲ್ಲಿ ಶಾಸನ ಸಾಹಿತ್ಯ, ವೀರಶೈವಸಾಹಿತ್ಯದ ವಿಷಯಗಳಲ್ಲಿ ನಿಷ್ಣಾತರು. ಅದಕ್ಕಿಂತ ಹೆಚ್ಚಾಗಿ ಪ್ರಾಚೀನ ಕನ್ನಡ ಗ್ರಂಥಗಳ ಹಸ್ತಪ್ರತಿಗಳ ಅನ್ವೇಷಕರು ಮತ್ತು ಸಂಶೋಧಕರು. ಇವರು ಹೆಸರಘಟ್ಟದ ಹೊನ್ನಪ್ಪನವರ ಗ್ರಂಥಗಳ ಹುಡುಕಾಟದಲ್ಲಿ ತೊಡಗಿದಾಗ ಬಹಳ ಪರಿಶ್ರಮದಿಂದ ಹೆಸರಘಟ್ಟದ ಹೊನ್ನಪ್ಪನವರ ವಂಶಸ್ಥರನ್ನು ಪತ್ತೆಹಾಕಿ ಅವರಿಂದ ಪಡೆದ ಅಲಭ್ಯ ಅಚ್ಚಿನ ಗ್ರಂಥವೇ 'ವ್ಯಾಕರಣಸಂಗ್ರಹಂ'. ಕನ್ನಡ ವ್ಯಾಕರಣಗಳ ಇತಿಹಾಸವನ್ನು ಬರೆದ ಬಹುತೇಕ ಎಲ್ಲಾ ಕನ್ನಡ ವಿದ್ವಾಂಸರ ಕಣ್ತಪ್ಪಿಸಿಕೊಂಡ ಗ್ರಂಥ ಇದು. ವ್ಯಾಕರಣ ಗ್ರಂಥಸೂಚಿಗಳಲ್ಲಿ, ಲೇಖನಗಳಲ್ಲಿ ಹೆಸರಘಟ್ಟದ ಹೊನ್ನಪ್ಪನವರ ಹೆಸರಾಗಲಿ, ಕೃತಿಗಳಾಗಲಿ ಕಂಡು ಬರುವುದಿಲ್ಲ. ಎಲ್ಲೋ ಒಂದೆರಡು ಕಡೆ ಟಿವಿವಿ, ಬಾರ್ನೆಟ್ ಗ್ರಂಥಗಳಲ್ಲಿ ಉಲ್ಲೇಖವಾಗಿದೆ.

ಅಜ್ಞಾತವಾಸದಲ್ಲಿದ್ದ ಈ ಕೃತಿಯನ್ನು ಪ್ರಕಟಮಾಡಲೇಬೇಕೆಂಬ ಹಠದಿಂದ ದ್ವಿತೀಯ ಮುದ್ರಣಕ್ಕೆ ಸಜ್ಜುಗೊಳಿಸಲು ನನ್ನ ಬಳಿಗೆ ತಂದರು. ಸುಮಾರು ೧೫೦ ವರ್ಷಗಳ ಹಿಂದಿನ ಈ ಅಮೂಲ್ಯ ಹಳಗನ್ನಡ ವ್ಯಾಕರಣವನ್ನು ಓದಿದಮೇಲೆ ನನಗೆ ಆಶ್ಚರ್ಯವಾಯಿತು. ಏಕೆಂದರೆ ಒಬ್ಬ ಪ್ರೈಮರಿಶಾಲಾ ಅಧ್ಯಾಪಕ, ವಿದ್ವಾಂಸರಿಗೆ, ಅಧ್ಯಾಪಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಎಲ್ಲರಿಗೂ ಉಪಯುಕ್ತವಾದ ವಿನೂತನವೂ ವಿಶಿಷ್ಟವೂ ಆಗಿರುವ ಪ್ರಶ್ನೋತ್ತರ ರೂಪವಾದ ವ್ಯಾಕರಣ ಸಂಗ್ರಹವನ್ನು ರಚಿಸಿದ್ದನ್ನು ಕಂಡು ಬೆರಗಾಗಿ ದ್ವಿತೀಯ ಮುದ್ರಣಕ್ಕೆ ಪರಿಷ್ಕರಿಸಿ ಯಥಾಮತಿ ಸಿದ್ಧಪಡಿಸಿದ್ದೇನೆ.

ಇನ್ನು ಈ ವಿದ್ವಾಂಸನ ಬಗ್ಗೆ ಮಾಹಿತಿಗಳನ್ನು ಕಲೆಹಾಕಿ ಬಿ.ನಂಜುಂಡಸ್ವಾಮಿ ಅವರು ರಚಿಸಿದ ಲೇಖನವನ್ನು ಗ್ರಂಥದ ಅನುಬಂಧ ವಿಭಾಗದಲ್ಲಿ ಸೇರಿಸಿದೆ. ಇವರ ಲೇಖನ ಬಿಟ್ಟರೆ ಹೆಸರಘಟ್ಟದ ಹೊನ್ನಪ್ಪನವರ ಬಗ್ಗೆ ಬಿ.ಶಿವಮೂರ್ತಿ ಶಾಸ್ತ್ರಿಗಳ ಲೇಖನದ ಹೊರತಾಗಿ ಮತ್ತಾರು ಇವರನ್ನು ಪ್ರಸ್ತಾಪಿಸಿಲ್ಲ. ಹಳೆಯ

ಕನ್ನಡ ಗ್ರಂಥಗಳ ಬಗ್ಗೆ ಮಾಹಿತಿ ನೀಡುವ ಶ್ರೀನಿವಾಸ ಹಾವನೂರರ ಹೊಸಗನ್ನಡ ಸಾಹಿತ್ಯದ ಅರುಣೋದಯ, ರಾ. ಯ. ಧಾರವಾಡಕರ ಅವರ ಹೊಸಗನ್ನಡದ ಉದಯ ಕಾಲ. ಕರ್ನಾಟಕ ಆರ್.ನರಸಿಂಹಾಚಾರ್ ಅವರ ಕರ್ನಾಟಕ ಕವಿಚರಿತೆ ಮೊದಲಾದ ಗ್ರಂಥಗಳಲ್ಲಿ ಹೊನ್ನಪ್ಪನವರ ಬಗ್ಗೆ ವಿವರಗಳು ಸಿಗುವುದಿಲ್ಲ. ಹೆಸರಘಟ್ಟದ ಹೊನ್ನಪ್ಪನವರ ವ್ಯಾಕರಣಸಂಗ್ರಹ ೧೮೯೦ರಲ್ಲಿ ಪ್ರಕಟವಾಯಿತು. ಆ ವೇಳೆಗೆ ಸಾಕಷ್ಟು ಹಳಗನ್ನಡ–ಹೊಸಗನ್ನಡ ವ್ಯಾಕರಣಗಳು ಕನ್ನಡದಲ್ಲಿ ಪ್ರಕಟವಾಗಿದ್ದವು. ಕನ್ನಡದಲ್ಲಿ ಅಚ್ಚಿನಯುಗ ಪ್ರಾರಂಭವಾದುದೇ ೧೯ನೇ ಶತಮಾನದಲ್ಲಿ ಎಂಬುದನ್ನು ನೆನಪಿಡಬೇಕು. ಕನ್ನಡ ಮುದ್ರಿತ ವ್ಯಾಕರಣಗಳ ಇತಿಹಾಸ ಪ್ರಾರಂಭವಾದುದು ೧೯ನೇ ಶತಮಾನದಿಂದಲೇ. ಶಾಲಾ ಶಿಕ್ಷಣ ಪದ್ಧತಿ ಬ್ರಿಟಿಷರಿಂದ ಪ್ರಾರಂಭವಾಗಿ ಪಠ್ಯಪುಸ್ತಕಗಳ ಮೂಲಕ ಶಿಕ್ಷಣ ನೀಡುವ ಪದ್ಧತಿ ಪ್ರಾರಂಭವಾದುದು ೧೯ನೇ ಶತಮಾನದಲ್ಲಿ ಎಂಬುದು ನೆನೆಯಬೇಕಾದ ಸಂಗತಿ.

೧೯ನೇ ಶತಮಾನದಲ್ಲಿ ನಾನಾ ಬಗೆಯ ಗ್ರಂಥಗಳು ಪ್ರಕಟವಾಗಿವೆ ವಿವರಗಳಿಗೆ ೧೯೧೦ರಲ್ಲಿ ಪ್ರಕಟವಾದ ಐ.ಆ ಬಾರ್ನೆಟ್ ಅವರ ಇಂಗ್ಲಿಷಿನಲ್ಲಿ ಪ್ರಕಟವಾದ ಕನ್ನಡ ಗ್ರಂಥ ಸೂಚಿಯನ್ನು ನೋಡಬಹುದು. ಈ ಪೈಕಿ ಮೊಟ್ಟಮೊದಲಿಗೆ ಅಚ್ಚಾದ ಕನ್ನಡ ವ್ಯಾಕರಣ ವಿಲಿಯಂ ಕೇರಿ ೧೮೧೭ರಲ್ಲಿ ರಚಿಸಿದ ಎ ಗ್ರಾಮರ್ ಆಫ್ ದಿ ಕರ್ನಾಟಕ ಲಾಂಗ್ವೇಜ್ ಎಂಬ ಗ್ರಂಥ. ಈತ ಕ್ರೈಸ್ತ ಪ್ರಚಾರಕ. ಬಿಡಿ ಕನ್ನಡದ ಅಚ್ಚುಮೊಳೆಗಳನ್ನು ಬಳಸಿ ಕೊಲ್ಕೊತ್ತದ ಹೊರವಲಯದ ಶ್ರೀರಾಂಪುರದ ಚಿಕ್ಕ ಮುದ್ರಣಾಲಯದಲ್ಲಿ ಪ್ರಕಟಿಸಿದ.

ಇದಾದನಂತರ ಪ್ರಕಟವಾದ ಎರಡನೇ ಗ್ರಂಥ ಜಾನ್ ಮೆಕೆರಲ್ ಬರೆದ ಎ ಗ್ರಾಮರ್ ಆಫ್ ದಿ ಕರ್ನಾಟಕ ಲಾಂಗ್ವೇಜ್ ೧೮೨೦ರಲ್ಲಿ ಪ್ರಕಟವಾಯಿತು.

ಇದೇ ಸಮಯದಲ್ಲಿ ಎಂದರೆ ೧೯೨೧ರಲ್ಲಿ ಕರ್ನಾಟಕದಲ್ಲಿ ಮೊದಲ ಮುದ್ರಣಯಂತ್ರ ಬಳ್ಳಾರಿಯಲ್ಲಿ ಲಂಡನ್ ಮಿಷನ್ ಪ್ರಿಂಟಿಂಗ್ ಪ್ರೆಸ್ ಲಂಡನ್ ಮಿಷನರಿಯ ನೆರವಿನಿಂದ ಬ್ರೂಸ್ ಪೇಟೆಯ ಮಿಷನ್ನಿನ ತೋಟದಲ್ಲಿ ಚಿಕ್ಕದಾಗಿ ಸ್ಥಾಪಿಸಲಾಯಿತು.

ಈ ಎಲ್ಲ ವ್ಯಾಕರಣಗಳನ್ನು ಗಮನಿಸಿದರೆ ೧೯ನೇ ಶತಮಾನದಲ್ಲಿ ಪ್ರಕಟವಾದಷ್ಟು ವ್ಯಾಕರಣ ಗ್ರಂಥಗಳು ೨೦ನೇ ಶತಮಾನದಲ್ಲಿ ಪ್ರಕಟವಾಗಿಲ್ಲ. ಈ ವ್ಯಾಕರಣಗಳಲ್ಲಿ ಕೆಲವು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟವಾಗಿದ್ದರೆ

ಮತ್ತೆ ಕೆಲವು ಕೇವಲ ಇಂಗ್ಲಿಷಿನಲ್ಲಿ ಅಥವಾ ಕನ್ನಡದಲ್ಲಿ ಪ್ರಕಟವಾಗಿವೆ ಈ ಪೈಕಿ ಹಳಗನ್ನಡ ಮತ್ತು ಹೊಸಗನ್ನಡ ವ್ಯಾಕರಣಗಳು ಪ್ರತ್ಯೇಕವಾಗಿ ಇಲ್ಲವೇ ಮಿಶ್ರಿತವಾಗಿ ಪ್ರಕಟವಾಗಿವೆ. ಹೊಸಗನ್ನಡದಲ್ಲಿ ಬರೆದ ಹಳಗನ್ನಡ ಗ್ರಂಥಗಳು ಈ ಪೈಕಿ ಸಾಕಷ್ಟಿವೆ. ಆ ಪೈಕಿ ೧೯ನೇ ಶತಮಾನದಲ್ಲಿ ರಚಿತವಾದ ಹಳಗನ್ನಡ ವ್ಯಾಕರಣ ಗ್ರಂಥಗಳಲ್ಲಿ ಹೊನ್ನಪ್ಪನವರ ಗ್ರಂಥ ವಿಶಿಷ್ಟವಾಗಿದೆ.

೧೯ನೇ ಶತಮಾನದಲ್ಲಿ ಪ್ರಕಟವಾದ ವ್ಯಾಕರಣ ಗ್ರಂಥಗಳ ಪಟ್ಟಿಯೊಂದನ್ನು (ಗಮನಕ್ಕೆ ಬಂದಿರುವ ಕೃತಿಗಳು ಮಾತ್ರ) ಅನುಬಂಧದಲ್ಲಿ ನೀಡಲಾಗಿದೆ. ಆ ಪಟ್ಟಿಯನ್ನು ನೋಡಿದರೆ ಹೆಸರ ಘಟ್ಟಿದ ಹೊನ್ನಪ್ಪನವರ ಕಾಲಕ್ಕೆ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಹಳಗನ್ನಡ ವ್ಯಾಕರಣಗಳು ದೇಶೀಯರಿಂದ ಹಾಗೂ ಮಿಷನರಿಗಳಿಂದ ರಚಿತವಾಗಿದ್ದವು. ಅವುಗಳಲ್ಲಿ ಆ ಪೈಕಿ ರಾಮಸ್ವಾಮಿ ಶಾಸ್ತ್ರಿ ಅವರ ವಾಗ್ವಿಧಾಯಿನಿ, ಕೃಷ್ಣಮಾಚಾರ್ಯ ಅವರ ಪ್ರಶ್ನೋತ್ತರ ರೂಪದಲ್ಲಿದ್ದ ವ್ಯಾಕರಣ ಗ್ರಂಥಗಳು ಹೊನ್ನಪ್ಪನವರ ಗಮನ ಸೆಳೆದಿದ್ದು, ಅದರಿಂದಾಗಿ ಅವರು ತಮ್ಮ ಗ್ರಂಥವನ್ನು ಪ್ರಶ್ನೋತ್ತರ ರೂಪದಲ್ಲಿ ರಚಿಸಿರಬೇಕು. ಹೊನ್ನಪ್ಪನವರು ತಮ್ಮ ವ್ಯಾಕರಣದಲ್ಲಿ ಒಂದು ವಿಶಿಷ್ಟಕ್ರಮವನ್ನು ಅನುಸರಿಸಿದ್ದಾರೆ. ಬಹುತೇಕ ವ್ಯಾಕರಣಗಳಲ್ಲಿ ಕಂಡುಬರುವ ಹಾಗೆಯೇ ಅಧ್ಯಾಯಗಳನ್ನು ರಚಿಸಿದ್ದಾರೆ.

I. ಸಂಜ್ಞಾ ಪ್ರಕರಣಂ
II. ಸಂಧಿ ಪ್ರಕರಣಂ
III. ಸಮಾಸ ಪ್ರಕರಣಂ
IV. ತದ್ಧಿತ ಪ್ರಕಣಂ
V. ಆಖ್ಯಾತ ಪ್ರಕರಣಂ
VI. ಅಪ್ರಭ್ರಂಶ ಪ್ರಕರಣಂ
VII. ಅನ್ವಯ ಪ್ರಕರಣಂ
VIII. ಪ್ರಯೋಗ ವಾಕ್ಯಾನ್ವಯ ಪ್ರಕರಣಂ

ಪರಿಷ್ಕರಣ

ಉಳಿದ ವ್ಯಾಕರಣ ಗ್ರಂಥಗಳು ಕನ್ನಡ ವಿದ್ಯಾರ್ಥಿಗಳಿಗೆ ಅಥವಾ ಕನ್ನಡ ಕಲಿಯುವ ಕನ್ನಡೇತರ ವಿದ್ಯಾರ್ಥಿಗಳಿಗಾಗಿ ರಚಿತವಾಗಿದ್ದರೆ ಬಹುಶಃ ಆಗತಾನೇ ಪ್ರಾರಂಭವಾಗಿದ್ದ ಶಾಲಾ ಉಪಾಧ್ಯಾಯರ ಟ್ರೈನಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಹೊನ್ನಪ್ಪನವರು ಈ ಗ್ರಂಥ ಬರೆದಿದ್ದಾರೆ. ೮೧ ಪ್ರಶ್ನೆಗಳನ್ನು ಅವುಗಳಿಗೆ ಉತ್ತರವಾಗಿ ನಿಯಮಗಳನ್ನು ವಿಪುಲವಾಗಿ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅಲ್ಲಲ್ಲಾ ಅಪವಾದದ ವಿಶೇಷವಾದ ಸಂಗತಿಗಳನ್ನು ವಿಚಾರ ಎಂಬ ಶೀರ್ಷಿಕೆಯಲ್ಲಿ ಕೊಟ್ಟಿದ್ದಾರೆ.

ತೌಲನಿಕವಾಗಿ ಅಧ್ಯಯನ ಮಾಡುವವರಿಗೆ ಗಮನ ಸೆಳೆಯಲು ೧೯ನೇ ಶತಮಾನದ ಹಳಗನ್ನಡ ವ್ಯಾಕರಣಕೃತಿಗಳ ಪಟ್ಟಿಯನ್ನು ಕೊಟ್ಟಿದೆ.

ವ್ಯಾಕರಣ ಸಂಗ್ರಹವೆಂಬ ಹಳಗನ್ನಡ ವ್ಯಾಕರಣ ಗ್ರಂಥವನ್ನು ೧೩೩ ವರ್ಷಗಳ ನಂತರ ಮರುಮುದ್ರಿಸುವ ಸಂದರ್ಭದಲ್ಲಿ ಸೂಕ್ತ ಪರಿಷ್ಕರಣ ಕಾರ್ಯವನ್ನು ಕೈಗೊಂಡಿದೆ. ಕೆಲವು ಸಂಗತಿಗಳನ್ನು ಇಲ್ಲಿ ತಿಳಿಸಿದೆ.

೧. ಪ್ರಶ್ನೆ ಉತ್ತರಗಳು ಒಂದೇ ಗಾತ್ರದ ಅಕ್ಷರಗಳಲ್ಲಿ ಅಚ್ಚಾಗಿದ್ದವು. ಈ ಮುದ್ರಣದಲ್ಲಿ ಬೇರೆ ಬೇರೆ ಗಾತ್ರದ ಅಕ್ಷರಗಳಲ್ಲಿ ಅಚ್ಚಿಸಿದೆ.

೨. ಉದಾಹರಣಂ, ಉದಹರಣಂ, ಉ ಎಂದು ಲೇಖಕರು ಮೂರು ರೂಪ ಬಳಸಿದ್ದಾರೆ. ಎಲ್ಲ ಕಡೆ ಏಕರೂಪದಲ್ಲಿ ಉದಾಹರಣಂ ಎಂದು ಬರೆಯಲಾಗಿದೆ.

೩. ಮುಖ್ಯವಾಗಿ ಕೇಶಿರಾಜನ ಶಬ್ದಮಣಿದರ್ಪಣವನ್ನು ಆಧಾರಗ್ರಂಥವನ್ನಾಗಿ ಇಟ್ಟುಕೊಂಡಿದ್ದರು ತಮ್ಮದೇ ಆದ ಉದಾಹರಣೆಯ ಪದಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಗಮನಿಸಲಾಗಿದೆ.

೪. ರಾಮಸ್ವಾಮಿ ಶಾಸ್ತ್ರಿಗಳ ವಾಗ್ವಿಧಾಯಿನಿ, ಕೃಷ್ಣಮಾಚಾರ್ಯರ ವ್ಯಾಕರಣ ಗ್ರಂಥಗಳು ಪ್ರಶ್ನೋತ್ತರ ರೂಪದಲ್ಲಿವೆ. ಅದೇ ಮಾದರಿಯನ್ನು ಇವರು ಅನುಸರಿಸಿದ್ದಾರೆ.

ಇವರು ನಿರ್ದುಷ್ಟವಾಗಿ ಪ್ರಶ್ನೆ – ವ್ಯಾಖ್ಯೆ – ಉದಾಹರಣೆ ಕ್ರಮವನ್ನು ಎಲ್ಲೆಡೆ ಅನುಸರಿಸಿದ್ದಾರೆ. ಇವುಗಳನ್ನು ಪ್ರತ್ಯೇಕಿಸಿ ಕೊಡಲಾಗಿದೆ.

೫. ಶಬ್ದಮಣಿದರ್ಪಣದ ೨೧ ತತ್ಸಮ ಶಬ್ದಗಳನ್ನು ಹಾಗೆಯೇ ಉಲ್ಲೇಖಿಸಿದ್ದರೂ ಗ್ರಂಥದುದ್ದಕ್ಕೂ ತಮ್ಮದೇ ಆದ ಉದಾಹರಣೆಯ ಪದಗಳನ್ನು ಕೊಟ್ಟಿದ್ದಾರೆ.

೬.ಉದಾಹರಣೆಯಾಗಿ ಕಂದ ವೃತ್ತಗಳ ಹಲವು ಪದ್ಯಗಳನ್ನು ಉದ್ದಕ್ಕೂ ಅಚ್ಚು ಮಾಡಿದ್ದಾರೆ. ಅವುಗಳನ್ನು ಆಯಾ ಛಂದದ ಪಾದಗಳಿಗನುಸಾರ ೪ ಸಾಲುಗಳಲ್ಲಿ ಬರೆದಿದೆ.

೭.ಸಂಧಿ, ಸಮಾಸಗಳ ಅಧ್ಯಾಯಗಳಲ್ಲಿ ಸಂಸ್ಕೃತ ವ್ಯಾಕರಣಗಳನ್ನು ಗಮನಿಸಿದ್ದಾರೆ ಎಂಬುದನ್ನು ಗುರುತಿಸಿದೆ. ಕನ್ನಡ ಸಂಧಿ-ಸಮಾಸಗಳು ಸಂಸ್ಕೃತ ಸಂಧಿ ಸಮಾಸಗಳು ಎಂದು ವರ್ಗೀಕರಿಸಿಕೊಟ್ಟಿದ್ದಾರೆ.

ಇದಕ್ಕೆ ಕಾರಣವನ್ನು ಪ್ರಶ್ನೆ ೧೬ರಲ್ಲಿ ಉತ್ತರವಾಗಿ ಹೀಗೆ ಹೇಳಿದ್ದಾರೆ ''ಕವಿಗಳು ಸಂಸ್ಕೃತ ಕರ್ಣಾಟ ಭಾಷಾ ಮಿಶ್ರದಿಂ ಕನ್ನಡ ಕಬ್ಬಗಳಲ್ಲಿ ಪೇಳಿರ್ಪಿದರಿಂ'' ಕನ್ನಡ ಸಂಸ್ಕೃತ ಸಂಧಿಗಳೆಂದು ವರ್ಗೀಕರಿಸಿದೆ.

ಕೃತಿಗಳ ಪರಿಚಯ

ಹೆಸರುಘಟ್ಟದ ಹೊನ್ನಪ್ಪನವರು (೧೮೫೪-೧೮೮೪) ೧೮೮೪ರಲ್ಲಿ ನಿಧನರಾದರು. ಅವರಿಗೆ ಸುಮಾರು ೫೦ ವರ್ಷಗಳಾಗಿರಬಹುದು ಇನ್ನೂ ಶಾಲಾ ವೃತ್ತಿಯಲ್ಲಿದ್ದಾಗಲೇ ನಿಧನರಾದರೆಂದು ಊಹೆಯಿದೆ. ಅವರು ಕೇವಲ ಶಾಲಾ ಉಪಾಧ್ಯಾಯರಾಗಿರಲಿಲ್ಲ, ಘನವಿದ್ವಾಂಸರಾಗಿದ್ದರು.

ಕಾವ್ಯಸಂಪಾದಕರಾಗಿ ಹರಿಹರನ ಗಿರಿಜಾ ಕಲ್ಯಾಣವನ್ನು ೧೮೮೦ರಲ್ಲಿ ಸಂಪಾದಿಸಿದ್ದಾರೆ. ಇದಕ್ಕೆ ಆಕರವಾದ ತಾಳೆ ಗ್ರಂಥಗಳು ಯಾವುದೆಂದು ತಿಳಿಸಿಲ್ಲ. ಆದರೆ ಹಲವಾರು ಹಸ್ತಪ್ರತಿಗಳನ್ನು ಪರಿಶೀಲಿಸಿ ಈ ಕಾವ್ಯವನ್ನು ಸಂಪಾದಿಸಿದ್ದಾರೆ. ಈ ಗ್ರಂಥದ ಪ್ರಾರಂಭದಲ್ಲಿ "ಸೂಚನೆ ಭಾಗದಲ್ಲಿ ೬೧ ಪುರಾತನ ಕರ್ಣಾಟ ಪ್ರಬಂಧಗಳೊಳುತ್ತಮವೆಂಬುದನರಿದು ಅತ್ಯಂತಾಸಕ್ತಿಯೊಳು ಅನೇಕ ಮೂಲ ಪ್ರತಿಗಳನ್ನು ಅತಿ ಪ್ರಯಾಸದಿಂದಾರ್ಜಿಸಿ ಮೂಲ ಪ್ರತಿಗೆ ವ್ಯತ್ಯಾಸವಾಗದಂತೆ ಪರಿಶೋಧಿಸಿದ್ದಾರೆ" ಎಂಬ ಮಾತಿನಿಂದ ಗ್ರಂಥ ಸಂಪಾದನೆ ಮಾಡಿ ಈ ಗ್ರಂಥವನ್ನು ಅಚ್ಚಿಗೆ ಸಿದ್ದಪಡಿಸಿದ್ದಾರೆ ಎಂದು ತಿಳಿಯುತ್ತದೆ. ಬಹಳ ಪ್ರಯಾಸದಿಂದ ಹಲವಾರು ಪ್ರತಿಗಳನ್ನು ಅಧ್ಯಯನ ಮಾಡಿ ಸಂಪಾದಿಸಿದ್ದಾರೆ. ಕೇವಲ ಒಂದು ಪ್ರತಿಯನ್ನು ಪ್ರತಿ ಮಾಡಿ ಪ್ರಕಟಿಸಿದ ಗ್ರಂಥ ಇದಲ್ಲ ಎಂದು ತಿಳಿದುಬರುತ್ತದೆ. ಮಳವಳ್ಳಿ ಚಿಕ್ಕ ಗಿರಿಯಪ್ಪ ಎಂಬುವರು ಇದನ್ನು ಪ್ರಕಟಿಸಿದ್ದಾರೆ.

ಪ್ರಾರಂಭದಲ್ಲಿ ವಿಷಯ ಸೂಚಿಯನ್ನು ಗಿರಿಜಾ ಕಲ್ಯಾಣದ ಕಥಾಗರ್ಭವೆಂದು ಸಂಕ್ಷಿಪ್ತವಾಗಿ ನೀಡಿದ್ದಾರೆ. ವೃತ್ತಸಂಕೇತಗಳನ್ನು ॥ಶಾ॥ ಪ॥ ಚಂ ॥ ಸ್ರ ॥ ಕಂ ॥ ಇತ್ಯಾದಿಯಾಗಿ ಸೂಚಿಸಿದ್ದಾರೆ. ಗ್ರಂಥ ಅಚ್ಚಾದ ಮೇಲೆ ಪರಿಶೋಧಿಸಿ ಗ್ರಂಥದ ಕೊನೆಯಲ್ಲಿ ಶುದ್ಧಾಶುದ್ಧ ಪತ್ರಿಕೆ ಕೊಟ್ಟಿದ್ದಾರೆ. ಶಾಲಾ ಮಾಸ್ತರರಾದರೂ

ಹೊನ್ನಪ್ಪನವರು ಹಳಗನ್ನಡ ಕಾವ್ಯಗಳನ್ನು ಪರಿಶೋಧಿಸಿ ಪ್ರಕಟಿಸಲು ಪ್ರಯತ್ನಿಸಿದ ವಿದ್ವಾಂಸರೆಂದು ಇದರಿಂದ ವಿದಿತವಾಗುತ್ತದೆ.

ವೈಯಾಕರಣರು

ಹೆಸರಘಟ್ಟದ ಹೊನ್ನಪ್ಪನವರ ಕಾಲದಲ್ಲಿ (ಆ ಶತಮಾನದಲ್ಲಿ) ರಚಿತವಾದ ಮುಕ್ಕಾಲು ಪಾಲು ವ್ಯಾಕರಣ ಗ್ರಂಥಗಳೆಲ್ಲಾ ಕನ್ನಡ ವಿದ್ಯಾರ್ಥಿಗಳಿಗೆ ಮತ್ತು ಕನ್ನಡ ಭಾಷೆಯನ್ನು ಕಲಿಯುವ ಕನ್ನಡೇತರರಿಗಾಗಿ ಬರೆದವು. ಹೊನ್ನಪ್ಪನವರು ಆವೇಳೆಗೆ ಪ್ರಾರಂಭವಾಗಿದ್ದ ಟ್ರೈನಿಂಗ್ ಕಾಲೇಜಿನ ಅಧ್ಯಾಪಕರುಗಳಿಗಾಗಿ ಮತ್ತು ವಿದ್ಯಾರ್ಥಿಗಳಿಗಾಗಿ ವ್ಯಾಕರಣ ಸಂಗ್ರಹವನ್ನು ರಚಿಸಿದ್ದಾರೆ. ಇವರೇ ರಚಿಸಿದ ಸಟೀಕ ರಾಜಶೇಖರ ವಿಳಾಸದ (ಭಾಗ–೧ ಆಶ್ವಾಸ ೧–೫) ಪೀಠಿಕೆಯಲ್ಲಿ ಹೇಳಿಕೊಂಡಿರುವ ಮಾಹಿತಿ– ''ಮೈಸೂರು ದೇಶೀಯ ಉಪಾಧ್ಯಾಯರ ಪರೀಕ್ಷೆಗಾಗಿ ಪಠ್ಯವಾಗಿದ್ದ ರಾಜಶೇಖರ ವಿಳಾಸಕ್ಕೆ ಟೀಕೆಯನ್ನೂ ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಕೇವಲಾನುಕೂಲವಾಗುವಂತೆ ವ್ಯಾಕರಣ ಸಂಗ್ರಹವೆಂಬುದನ್ನೂ ಬರೆದಿರುವೆನು" ಎಂದಿದ್ದಾರೆ. ಇದನ್ನು ಬರೆಯುವ ಕಾಲಕ್ಕೆ ೧೮೯೦ರಲ್ಲಿ ತ್ಯಾಮಗೊಂಡ್ಲು ತಾಲ್ಲೂಕು ಬ್ರಾಂಚ್ ಸ್ಕೂಲ್ ಹೆಡ್‌ಮಾಸ್ಟರ್ ಆಗಿದ್ದರು.

ಇದೇ ಮಾತನ್ನು ವ್ಯಾಕರಣ ಸಂಗ್ರಹದಲ್ಲಿ ಹೇಳಿದ್ದಾರೆ.

ಸೂಚನೆ : "ಮೈಸೂರು ದೇಶೀಯೋಪಾಧ್ಯಾಯ ವಿದ್ಯಾರ್ಥಿಗಳ ಪರೀಕ್ಷಾ ಪ್ರಾರಂಭವಾದಂದಿನಿಂ ಕರ್ಣಾಟಭಾಷೋಪಯೋಗಂತದಭ್ಯಾಸಿಗಳಿಗಾನಂದಕರ ಮಾಗಿರ್ಪುದದತ್ಯಂತಾನುಕೂಲಮಾಗಲನೇಕ ಪುರಾತನ ಗ್ರಂಥ ಪ್ರಯೋಗಾನುಸಾರಮಾಗಿ ವಿರಚಿತಮಪ್ಪ ವ್ಯಾಕರಣ ಸಂಗ್ರಹವೆಂಬ ಪುಸ್ತಕಂ ಭಾಷಾರ್ಣವೋಪಮವಾಗಿ ರಾಜಿಪುದಿದನರ್ಥಿಜನಮೀಕ್ಷಿಸುಗೆ"

ವೃತ್ತಿಯಲ್ಲಿ ವೈದ್ಯರಾದರೂ ಪ್ರವೃತ್ತಿಯಲ್ಲಿ ಸಂಶೋಧಕರಾಗಿರುವ ತುಮಕೂರಿನ ಪಂಡಿತ ತಾರಾನಾಥ ಚಿಕಿತ್ಸಾಲಯದ ಡಾ. ಬಿ. ನಂಜುಂಡಸ್ವಾಮಿ ಅವರು ಲೇಖಕರ ವಂಶಸ್ಥರನ್ನು ಪತ್ತೆಹಾಕಿ ಅವರಿಂದ ವ್ಯಾಕರಣ ಸಂಗ್ರಹ ಪಡೆದು ಪ್ರತಿಮಾಡಿಕೊಂಡರು.

ಆನಂತರ ಹೆಸರಘಟ್ಟದ ಹೊನ್ನಪ್ಪನವರ ಜೀವನ ವೃತ್ತಿ, ಪುಸ್ತಕಗಳ ಬಗ್ಗೆ ಸಾಕಷ್ಟು ಮಾಹಿತಿ ಕಲೆಹಾಕಿ ೧೫-೧೦-೨೦೦೩ರಲ್ಲಿ ನೆಲಮಂಗಲದಲ್ಲಿ ನಡೆದ ೨ನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹೊರತಂದ 'ಮಂಗಳಗಂಗಾ' ಸಮ್ಮೇಳನ ಸಂಚಿಕೆಯಲ್ಲಿ ೬೬ ತ್ಯಾಮಗೊಂಡ್ಲು ಕನ್ನಡ ಶಾಲಾ ಮುಖ್ಯೋಪಾಧ್ಯಾಯರಾಗಿದ್ದ ಹೆಸರಘಟ್ಟದ ಹೊನಪ್ಪನವರ ಕನ್ನಡ ಸೇವೆ'' ಎಂಬ ಶೀರ್ಷಿಕೆಯಲ್ಲಿ ವ್ಯಾಕರಣ ಸಂಗ್ರಹ ಕರ್ತೃ ಹೊನ್ನಪ್ಪನವರ ಜೀವನ ಕೃತಿಗಳನ್ನು ಕುರಿತು. ದೊರೆತ ಮಾಹಿತಿಯುಳ್ಳ ಅಮೂಲ್ಯ ಲೇಖನವನ್ನು ಬರೆದರು. ಇದರಿಂದ ಕಣ್ಮರೆಯಾದ ವಿದ್ವಾಂಸನೊಬ್ಬ ಬೆಳಕಿಗೆ ಬರುವಂತಾಯಿತು.

೧೯೬೪ರಲ್ಲಿ ನಿಧನರಾದ ಹೊನ್ನಪ್ಪನವರ ೮ ಕೃತಿಗಳ್ನು ಈ ಲೇಖನದಲ್ಲಿ ಪರಿಚಯಿಸಿದ್ದಾರೆ. ಲೇಖರ ಪರಿಚಯ ಎಂಬ ಶೀರ್ಷಿಕೆಯಲ್ಲಿ ಈ ಗ್ರಂಥದಲ್ಲಿ ಸೇರ್ಪಡೆ ಮಾಡಿದೆ ಲೇಖಕರ ಬಗ್ಗೆ ಮತ್ತು ಅವರು ರಚಿಸಿದ ಗ್ರಂಥಗಳ ಪರಿಚಯವನ್ನು ಲೇಖಕರು ನೀಡಿದ್ದಾರೆ.

ಕಾವ್ಯ ಟೀಕಾಕಾರರು - ಕನ್ನಡದಲ್ಲಿ ರಾಜಶೇಖರ ವಿಳಾಸ ಮಹೋನ್ನತ ಮಹಾಕಾವ್ಯಗಳಲ್ಲಿ ಒಂದು. ರಾಜಶೇಖರ ವಿಳಾಸ, ಜೈಮಿನಿಭಾರತ, ಕುಮಾರವ್ಯಾಸ ಭಾರತ ಮೊದಲಾದ ಕಾವ್ಯಗಳಿಗೆ ಟೀಕೆ ಬರೆದವರು ವಿದ್ವಾಂಸರೆಂದು ವ್ಯಾಖ್ಯಾನ ಮಾಡುತ್ತಿದ್ದವರನ್ನು ಪಂಡಿತರೆಂದೂ ಪರಿಗಣಿಸಲ್ಪಡುತ್ತಿದ್ದ ಕಾಲವೊಂದಿತ್ತು. ಆ ಕಾಲದ ವಿದ್ವಾಂಸರಲ್ಲಿ ಒಬ್ಬರು ಹೆಸರಘಟ್ಟದ ಹೊನ್ನಪ್ಪನವರು. ೩ ಭಾಗಗಳಲ್ಲಿ ಬಹುಶಃ ಕನ್ನಡದಲ್ಲಿ ಮೊದಲಬಾರಿಗೆ ಟೀಕೆ ಬರೆದವರಾಗಿದ್ದಾರೆ.

ತಾವೇ ಸ್ವತಃ ನಿಘಂಟು ರಚನಾಕಾರರಾಗಿರುವುದರ ಜೊತೆಗೆ ಇತರ ನಿಘಂಟುಗಳಿಗೆ ಟೀಕೆ ಬರೆಯುವ ವಿದ್ವಾಂಸರೂ ಹೆಸರುಘಟ್ಟದ ಹೊನ್ನಪ್ಪ ನವರಾಗಿದ್ದಾರೆ. ೧೮೮೫ರಲ್ಲಿ ಕಬ್ಬಿಗರ ಕೈಪಿಡಿಗೆ ವಿಬುಧ ಚಕೋರಚಂದ್ರಿಕೆಯೆಂಬ ಟೀಕೆಯನ್ನೂ ೧೮೮೪ರಲ್ಲಿ ನಾನಾರ್ಥರತ್ನಾಕರವೆಂಬ ನಿಘಂಟಿಗೆ ಮತ್ತು ಸಟೀಕಾ ನಾನಾರ್ಥ ಕಂದ ಪದ್ಯವೆಂಬ ನಿಘಂಟಿಗೆ 'ವಿದ್ವದ್ರಂಜನೀ' ಎಂಬ ಟೀಕನ್ನೂ (೧೮೮ಳ) ರಚಿಸಿದ್ದಾರೆ.

ಅಚ್ಚಕನ್ನಡ ನಿಘಂಟು ರಚನಾಕಾರರು

ಮೈಸೂರು ವಿದ್ಯಾಭ್ಯಾಸ ಇಲಾಖೆಯಲ್ಲಿ ಟ್ರಾನ್ಸ್‌ಲೇಟರ್ ಆಗಿದ್ದ ರಾಮಸ್ವಾಮಿಶಾಸ್ತ್ರಿಗಳು ಕರ್ನಾಟಕ ಕಲ್ಪದ್ರುಮವೆಂಬ ನಿಘಂಟನ್ನು ರಚನೆ ಮಾಡುತ್ತಿದ್ದಾಗ ಅಕಾರಾದಿ ಶಬ್ದಗಳ ಸಂಗ್ರಹದ ವೇಳೆಗೆ ಅಕಾಲಿಕವಾಗಿ ನಿಧನರಾದ ಪ್ರಯುಕ್ತ, ಗ್ರಂಥಪ್ರಕಾಶಕರಾದ ಬೆಂಗಳೂರು ಬುಕ್ ಡಿಪೋ

ಪ್ರೊಪ್ರೈಟರ್ ಆದ ಟಿ. ಸುಬ್ಬರಾಯ ಶಾಸ್ತ್ರಿಗಳು, ಚಿಕ್ಕಗಿರಿಯಪ್ಪನವರೂ ಈ ನಿಘಂಟನ್ನು ಪೂರ್ತಿ ಮಾಡಲು ಕೇಳಿಕೊಂಡಾಗ ಹೆಸರಘಟ್ಟದ ಹೊನ್ನಪ್ಪನವರು ಪೂರ್ಣವಾಗಿ ರಚಿಸಿಕೊಟ್ಟರು. ೧೮೮೫ರಲ್ಲಿ ಪ್ರಕಟವಾಗಿದೆ. ೪೧೧ ಪುಟಗಳ ಈ ಕೋಶದಲ್ಲಿ ಕೇವಲ ಕನ್ನಡ ಪದಗಳನ್ನು ಅಕಾರಾದಿಯಾಗಿ ಕೊಟ್ಟು ಅದಕ್ಕೆ ಅರ್ಥವನ್ನು ಪ್ರಯೋಗವನ್ನು ಸೂಚಿಸಿ ಪ್ರಯೋಗದ ಆಕರವನ್ನೂ ಸೂಚಿಸಿದ್ದಾರೆ. ಕೊಳಂಬೆ ಪುಟ್ಟಣ್ಣಗೌಡರು ೨೦ನೇ ಶತಮಾನದಲ್ಲಿ ಅಚ್ಚಗನ್ನಡ ಶಬ್ದಕೋಶವೊಂದನ್ನು ಪ್ರಕಟಿಸುವ ಮೊದಲೇ ೧೯ನೇ ಶತಮಾನದಲ್ಲೇ ಹೆಸರಘಟ್ಟದ ಹೊನ್ನಪ್ಪನವರು ಮೊದಲನೆಯ ಅಚ್ಚಗನ್ನಡ ನಿಘಂಟನ್ನು ರಚಿಸಿದ್ದಾರೆ ಎಂಬುದನ್ನು ಗಮನಿಸಬೇಕು ಮತ್ತು ಕನ್ನಡ ಕಾವ್ಯಗಳಿಂದ ಪ್ರಯೋಗಗಳನ್ನು ಕೊಟ್ಟಿರುವುದು ಈ ಗ್ರಂಥದ ವೈಶಿಷ್ಟ್ಯವಾಗಿದೆ. ಹೀಗೆ ಕನ್ನಡ ವ್ಯಾಕರಣ, ಕಾವ್ಯ ಟೀಕೆ, ನಿಘಂಟು ರಚನೆ, ನಿಘಂಟು ಟೀಕೆ ಗ್ರಂಥಗಳನ್ನು ರಚಿಸಿ ಕನ್ನಡಕ್ಕೆ ಅಪೂರ್ವ ಸೇವೆ ಸಲ್ಲಿಸಿದವರಲ್ಲಿ ೧೯ನೇ ಶತಮಾನದಲ್ಲಿ ಗಣ್ಯ ವಿದ್ವಾಂಸರಾದ ಹೆಸರಘಟ್ಟ ಹೊನ್ನಪ್ಪನವರು ಶಾಲಾ ಮಾಸ್ತರರಾದರೂ ಪ್ರಸಿದ್ಧ ವಿದ್ವಾಂಸರೂ ವ್ಯಾಕರಣಕಾರರೂ ಆಗಿದ್ದ ಧೋಂಡೋ ನರಸಿಂಹ ಮುಳಬಾಗಿಲ, ಮ. ಪ್ರ. ಪ್ರಜಾರ ಸಾಲಿಗೆ ಸೇರುವ ನಮ್ಮ ನಾಡು ಗುರುತಿಸದ ಅಪೂರ್ವ ವಿದ್ವಾಂಸರಲ್ಲಿ ಒಬ್ಬರಾಗಿದ್ದಾರೆ.

ಇಂಥ ವಿದ್ವಾಂಸರ ವ್ಯಾಕರಣ ಸಂಗ್ರಹ ಗ್ರಂಥವನ್ನು ಪ್ರಕಾಶಕರಾದ ಪ್ರಿಯದರ್ಶಿನಿ ಪ್ರಕಾಶನ, ಅವರು ಮುದ್ರಣ ಮಾಡಿ ಕನ್ನಡ ವಿದ್ವಜ್ಜನರ ಪಾಲಿಗೆ, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಒದಗಿಸಿ ಕೃತಕೃತ್ಯರಾಗಿದ್ದಾರೆ. ಕೇವಲ ಮಾರಾಟ ಮತ್ತು ಜನಪ್ರಿಯತೆ ದೃಷ್ಟಿಯಿಂದಲೇ ಗ್ರಂಥಗಳನ್ನು ಪ್ರಕಟಿಸುವ ಪ್ರಕಾಶಕರೇ ನಾಡಿನ ತುಂಬೆಲ್ಲಾ ಇರುವಾಗ ಕನ್ನಡದ ಅಪೂರ್ವ ಪ್ರಾಚೀನ ಗ್ರಂಥಗಳನ್ನು ಪ್ರಕಟಿಸುವ ವಿರಳ ಪ್ರಕಾಶಕರಲ್ಲಿ ಒಬ್ಬರಾದ ಶ್ರೀ ವಿ. ಮಹೇಶ್ ಅವರಿಗೆ ನಾನು ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನಾಡಿನ ಜನತೆ ಮುಖ್ಯವಾಗಿ ಶಿಕ್ಷಕರು ವಿದ್ಯಾರ್ಥಿಗಳು ಈ ಗ್ರಂಥವನ್ನು ಕೊಂಡು ಪ್ರೋತ್ಸಾಹಿಸಬೇಕು. ಇಂಥ ಹಲವಾರು ಗ್ರಂಥಗಳು ಪ್ರಕಟವಾಗಲು ನೆರವಾಗಬೇಕೆಂದು ಪ್ರಾರ್ಥಿಸುತ್ತೇನೆ.

ಪ್ರೊ. ಜಿ. ಅಶ್ವತ್ಥನಾರಾಯಣ
ಸಂಪಾದಕ

ವ್ಯಾಕರಣ ಸಂಗ್ರಹಂ

(ಪ್ರಶ್ನೋತ್ತರ ರೂಪ)

ಹೆಸರುಘಟ್ಟದ ಹೊನ್ನಪ್ಪ (೧೯ನೆಯ ಶತಮಾನ)

ಸಂಪಾದಕರು

ಪ್ರೊ.ಜಿ. ಅಶ್ವತ್ಥನಾರಾಯಣ

(ನಿವೃತ್ತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು)

ಪರಿವಿಡಿ

ಸೂಚನೆ. – ಮೈಸೂರು ದೇಶೀಯೋಪಾಧ್ಯಾಯ ವಿದ್ಯಾರ್ಥಿಗಳ ಪರೀಕ್ಷಾ ಪ್ರಾರಂಭವಾದಂದಿನಿಂ ಕರ್ಣಾಟ – ಭಾಷೋಪಯೋಗಂತದಭ್ಯಾಸಿಗಳಾನಂದಕರಮಾಗಿರ್ಪುದದತ್ಯಂತಾನುಕೂಲವಾಗಲನೇಕ ಪುರಾತನಗ್ರಂಥ ಪ್ರಯೋಗಾನುಸಾರವಾಗಿ ವಿರಚಿತಮಪ್ಪ ವ್ಯಾಕರಣಸಂಗ್ರಹವೆಂಬ ಪುಸ್ತಕಂ.. .. .. ವೋಡುಪಮಾಗಿ ರಾಜಿಪುದಿದನರ್ಥಿಜನಮೀಕ್ಷಿಸುಗೆ ..

[ಲೇಖಕರ ಟಿಪ್ಪಣಿ]

ಶ್ರೀರಸ್ತು

ವ್ಯಾಕರಣ ಸಂಗ್ರಹಂ

I.ಸಂಜ್ಞಾ ಪ್ರಕರಣಂ,

1 ಪ್ರಶ್ನೆ, ವ್ಯಾಕರಣವೆಂದೊಡೇನು ?

ಉತ್ತರ. ವ್ಯಾಕರಣವೆಂದೊಡೆ ಶಬ್ದಶಾಸ್ತ್ರವು

2. ಶಬ್ದಶಾಸ್ತ್ರದಿಂ ಫಲವೇನು ?

ಶಬ್ದಶಾಸ್ತ್ರದಿಂ ಪದ ಪದಾರ್ಥಜ್ಞಾನಮಾಗಿ, ತನ್ಮೂಲಕ ಮೋಕ್ಷಮಪ್ಪುದಿದು ವ್ಯಾಕರಣ ಫಲವು.

3. ವ್ಯಾಕರಣಾಂಗಗಳು ಯಾವುವು ?

1. ಸಂಜ್ಞಾಪ್ರಕರಣವೆಂದು, 2. ಸಂಧಿಪ್ರಕರಣವೆಂದು, 3. ನಾಮಪ್ರಕರಣವೆಂದು, 4. ಸಮಾಸಪ್ರಕರಣವೆಂದು, 5. ತದ್ಧಿತಪ್ರಕರಣವೆಂದು, 6. ಆಖ್ಯಾತಪ್ರಕರಣವೆಂದು, 7. ಅಪಭ್ರಂಶಪ್ರಕರಣವೆಂದು, 8. ಅವ್ಯಯ ಪ್ರಕರಣವೆಂದು, 9. ಪ್ರಯೋಗ ಪ್ರಕರಣವೆಂದು ಪ್ರಸಿದ್ಧಿಯಾಗಿರುವುದು,

4. ಶುದ್ಧಾಕ್ಷರಕ್ಕೆ ಹೆಸರೇನು ?

ಅಕ್ಷರವೆಂದು ವರ್ಣವೆಂದು ಪೆಸರು, ಮತ್ತೆ ಚಕ್ಷುವಿನಿಂ ನೋಡುವಕ್ಷರಗಳಿಗೆ ಚಾಕ್ಷುಷವೆಂದು ಶ್ರವಣದಿಂ ಕೇಳುವಕ್ಷರಗಳಿಗೆ ಶ್ರಾವಣವೆಂದು ಪೆಸರು.

5. ಶುದ್ಧಾಕ್ಷರಗಳು ಯಾವುವು ? ಉದಹರಿಸು ?

ಅಕಾರಾದಿ ಳಕಾರಾಂತಂ ಸಂಪೂರ್ಣ ವರ್ಣಗಳುಂಟು.

ಉದಾಹರಣಂ

ಅ ಆ ಇ ಈ ಉ ಊ ಋ ೠ ಌ ೡ ಎ ಏ ಐ ಓ ಔ,

ಕ್ ಖ್ ಗ್ ಘ್ ಙ್ ,

ಚ್ ಛ್ ಜ್ ಝ್ ಞ್,

ಟ್ ಠ್ ಡ್ ಢ್ ಣ್,

ತ್ ಥ್ ದ್ ಧ್ ನ್,

ಪ್ ಫ್ ಬ್ ಭ್ ಮ್,

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್(ಕ್ಷಳ)

ಂ(ಅನುಸ್ವಾರ), ಃ (ವಿಸರ್ಗ),"Xಕ (ಜಿಹ್ವಾ ಮೂಲೀಯ) ಂಂಪ (ಉಪಧ್ಮಾನೀಯ

ಇವು ೫೨ ವರ್ಣಗಳು ಸಂಸ್ಕೃತ ಭಾಷೆಯಲ್ಲಿ ಪ್ರಯೋಗಿಸುವುವು.

6. ಸಂಸ್ಕೃತಭಾಷೆಯಲ್ಲಿ ಬರುವ ವರ್ಣಗಳು ಯಾವುವು?

ಋೠ ಌ ೡ ಶಷಳ(ಕ್ಷಳ), ಃ(ವಿಸರ್ಗ), Xಕ (ಜಿಹ್ವಾಮೂಲೀಯ), ಂಂಪ (ಉಪಧ್ಮಾನೀಯ). ಇವು ಹತ್ತು ವರ್ಣಗಳಲ್ಲದೆ, ಉಳಿದ ವರ್ಣಗಳು, ಮತ್ತು ಎ ಒ ಱ ೞ ಳ(ಕುಳ): ಎಂಬ ಐದು ದೇಶೀಯಾಕ್ಷರಗಳು ಸೇರಿ ನಲವತ್ತೇಳು ವರ್ಣಗಳ ಕನ್ನಡದಲ್ಲಿ ಬರುವುವು. ತ್ ಥ್ ದ್ ಧ್ ನ್,

ಪ್ ಫ್ ಬ್ ಭ್ ಮ್,

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್(ಕ್ಷಳ)

ಂ(ಅನುಸ್ವಾರ), ಃ (ವಿಸರ್ಗ),"Xಕ (ಜಿಹ್ವಾ ಮೂಲೀಯ) ಂಂಪ (ಉಪಧ್ಮಾನೀಯ

ಇವು ೫೨ ವರ್ಣಗಳು ಸಂಸ್ಕೃತ ಭಾಷೆಯಲ್ಲಿ ಪ್ರಯೋಗಿಸುವುವು.

6. ಕನ್ನಡಭಾಷೆಯಲ್ಲಿ ಬರುವ ವರ್ಣಗಳು ಯಾವುವು?

ಋೠ ಌ ೡ ಶಷಳ(ಕ್ಷಳ), ಃ(ವಿಸರ್ಗ), Xಕ (ಜಿಹ್ವಾಮೂಲೀಯ), ಂಂಪ (ಉಪಧ್ಮಾನೀಯ). ಇವು ಹತ್ತು ವರ್ಣಗಳಲ್ಲದೆ, ಉಳಿದ ವರ್ಣಗಳು, ಮತ್ತು ಎ ಒ ಱ ೞ ಳ(ಕುಳ): ಎಂಬ ಐದು ದೇಶೀಯಾಕ್ಷರಗಳು ಸೇರಿ ನಲವತ್ತೇಳು ವರ್ಣಗಳ ಕನ್ನಡದಲ್ಲಿ ಬರುವುವು.

7. ಕ್ಷಳಕುಳಗಳೆಂದೊಡೇನು ? ಉದಹರಿಸು ?

ಕ್ಷಳವೆಂದೊಡೆ ಸಂಸ್ಕೃತ ಭಾಷೆಯಲ್ಲಿ (ಲಳಯೋರಭೇದಃ) ಲಕಾರಸ್ಥಾನದೆಡೆಗೆ ಬರ್ಪ "ಳ" ಕಾರವೆಂದರಿವುದು.

ಉದಾಹರಣಂ : : ಕಮಲ ಕಮಳ, ಕುಂತಲ ಕುಂತಳ ಈ ಇತ್ಯಾದಿ.

ಕುಳವೆಂದೊಡೆ ಕನ್ನಡಭಾಷೆಯಲ್ಲಿ ಬರ್ಪ ನಿಜ "ಳ" ಕಾರವೆಂದರಿವುದು.

ಉದಾಹರಣಂ : : ಪುಳಿ, ತಳಿರ್, ಕುಳಿರ್ ಇವುಗಳನ್ನು ಪುಲಿ, ತಲಿರ್, ಕುಲಿರ್ ಎನ್ನಲಾಗದು.

8. ವರ್ಣಪ್ರಭೇದಗಳು ಯಾವುವು ? ಉದಹರಿಸು?

ಅಕಾರ ಮೊದಲ್ ಔಕಾರ ಪರ್ಯಂತರಂ ಸ್ವರಗಳೆಂದು, ಕಕಾರ ಮೊದಲ್ ಳಕಾರ ಪರ್ಯಂತರಂ ವ್ಯಂಜನಗಳೆಂದು, ಉಳಿದ ಅನುಸ್ವಾರ ವಿಸರ್ಗ

ಜಿಹ್ವಾಮೂಲೀಯೋಪಾಧ್ಮಾನೀಯಗಳು ಅಯೋಗವಾಹಗಳೆಂದು ಮೂರು ಪ್ರಭೇದಗಳು. ಸ್ವರಗಳಲ್ಲಿ ಹ್ರಸ್ವವೆಂದು, ದೀರ್ಘವೆಂದು ಎರಡು ವಿಧವು. ವ್ಯಂಜನಗಳಲ್ಲಿ ಕ ಕಾರ ಮೊದಲು ಮ ಕಾರ ಪರ್ಯಂತರಂ ವರ್ಗೀಯವೆಂದು, ಯ ಕಾರ ಮೊದಲು ಳ ಕಾರ ಪರ್ಯಂತಂ ಅವರ್ಗೀಯವೆಂದು ಎರಡು ವಿಧವು. ವರ್ಗೀಯದಲ್ಲಿ ಕವರ್ಗ, ಚವರ್ಗ, ಟವರ್ಗ, ತವರ್ಗ, ಪವರ್ಗವೆಂದು ಐದು ವಿಧಗಳಲ್ಲದೆ ಪ್ರತಿ ವರ್ಗದೊಳ್ ಪ್ರಥಮ ದ್ವಿತೀಯ ವರ್ಣಗಳು ಪರುಷವೆಂದು ತೃತೀಯ ಚತುರ್ಥ ವರ್ಣಗಳು ಸರಳವೆಂದು ಪಂಚಮವರ್ಣಗಳು ಅನುನಾಸಿಕವೆಂದು, ಪರುಷ ಸರಳಗಳಲ್ಲಿ ಪ್ರಥಮವರ್ಣವು ಅಲ್ಪಪ್ರಾಣವೆಂದು ದ್ವಿತೀಯವರ್ಣವು ಮಹಾಪ್ರಾಣವೆಂದು ವರ್ತಿಸುವುವು. ಅವರ್ಗೀಯದಲ್ಲಿ ಅಂತಸ್ಥವರ್ಣವೆಂದು, ಊಷ್ಮವರ್ಣವೆಂದು ಎರಡು ವಿಧವು. ಅಯೋಗವಾಹಗಳಲ್ಲಿ ಅನುಸ್ವಾರ ವಿಸರ್ಗಗಳು ಸ್ವರಪರದಲ್ಲಿರುವುದರಿಂದಲು, ಸ್ವತಃ ಉಚ್ಚಾರಣೆಗೆ ಬಾರದಿರುವುದರಿಂದಲು ಸ್ವರಾಂಗವೆಂದು, ವ್ಯಂಜನಾಂಗವೆಂದು ವರ್ತಿಸುವುವು.

ಉದಾಹರಣಂ : :

ಸ್ವರಗಳು

ಹ್ರಸ್ವಗಳು – ಅ ಇ ಉ ಋ ಌ ೯ ಎ ಒ

ದೀರ್ಘಗಳು – ಆ ಈ ಊ ೠ ೡ ಏ ಐ ಓ ಔ

ವರ್ಗೀಯ ವ್ಯಂಜನಗಳು

ಕ ಖ ಗ ಘ ಙ. (ಕವರ್ಗ)

ಚ ಛ ಜ ಝ ಞ, (ಚವರ್ಗ)

ಟ ಠ ಡ ಢ ಣ. (ಟವರ್ಗ)

ತ ಥ ದ ಧ ನ. (ತವರ್ಗ)

ಪ ಫ ಬ ಭ ಮ (ಪವರ್ಗ

ಕಖ, ಚಛ, ಟಠ, ಡಢ, ತಥ ಪಫ (ಪರುಷಗಳು)

ಗಘ, ಜಝ, ಡಢ, ದಧ, ಬಭ (ಸರಳಗಳು)

ಙ, ಞ, ಣ, ನ, ಮ (ಅನುನಾಸಿಕಗಳು)

ಕ, ಗ, ಚ, ಜ, ಟ,ಡ,ತ,ದ,ಪ,ಬ (ಅಲ್ಪಪ್ರಾಣಗಳು)

ಖ,ಘ, ಛ, ಝ, ಠ,ಢ, ಫ,ಭ (ಮಹಾಪ್ರಾಣಗಳು)

ಅವರ್ಗೀಯ ವ್ಯಂಜನಗಳು ಎರಡು ವಿಧ ಅಂತಸ್ಥ ವರ್ಣಗಳು, ಊಷ್ಮವರ್ಣಗಳು

ಯ ರ (ಱ) ಲ ವ ಶ ಷ ಸ ಹ ಳ (ಕ್ಷಳ) ಳ (ಕುಳ) ೞ.

ಅವರ್ಗೀಯ ವ್ಯಂಜನಗಳು ಯರಲವ, (ಅಂತಸ್ಥಗಳು.) ಶಷಸಹ (ಊಷ್ಮೆಗಳು)

ಅಯೋಗವಾಹಗಳು (ಎರಡು ವಿಧ: ಸ್ವರಾಂಗಗಳು, ವ್ಯಂಜನಾಂಗಗಳು)

ಂ (ಬಿಂದು), ಃ (ವಿಸರ್ಗ) Xಕ (ಜಿಹ್ವಾಮೂಲೀಯ), ೦೦ (ಉಪಧ್ಮಾನೀಯ):

ಂ (ಬಿಂದು) ಃ(ವಿಸರ್ಗ)ಗಳು ಸ್ವರಾಂಗ, ವ್ಯಂಜನಾಂಗಗಳು,

9. ಸ್ವರವರ್ಣಗಳಲ್ಲಿ ಮತ್ತೇನು ವಿಶೇಷವು ?

ಆಆ, ಇಈ, ಉಊ, ಋೠ ಌ ೡ ಎಂಬುವು ಸವರ್ಣ (ಸಮಾನಾಕ್ಷರ) ಎಂತಲು, ಇಈ ಉಊ ಋ ೠ ಌೡ ಏ ಐ ಓ ಔ ಎಂಬುವು ನಾಮಿ ಎಂತಲು, ಎಐ ಒಔ ಎಂಬಿವು ಸಂಧ್ಯಕ್ಷರವೆಂತಲು, ಎಏ ಒಓ ಎಂಬಿವು ಅಚ್ಚಗನ್ನಡದೊಳ್ ಸವರ್ಣವೆಂತಲು, ಸ್ವರವ್ಯಂಜನದಿಂದೇಕಮಾತ್ರೆಯುಳ್ಳದ್ದು (ಅ) ಹ್ರಸ್ವವೆಂತಲು, ದ್ವಿಮಾತ್ರೆಯುಳ್ಳದ್ದು. (ಆ) ದೀರ್ಘವೆಂತಲು, ತ್ರಿಮಾತ್ರೆಯುಳ್ಳದ್ದು. (ಅ+ಆ) ಪ್ಲುತವೆಂತಲು ವಿಶೇಷವು.

10. ವ್ಯಂಜನ ವರ್ಣಗಳಲ್ಲಿ ಮತ್ತೇನು ವಿಶೇಷವು? ಉದಹರಿಸು ।

(i) ಅಚ್ಚಗನ್ನಡದ ಮಹಾ ಪ್ರಾಣಾಕ್ಷರಗಳು ಸಂಖ್ಯೆಯಲ್ಲಿಯು, ಅವ್ಯಯದಲ್ಲಿಯು, ಒಂದಾನೊಂದು ಸಮಯ ಶಬ್ದಗಳಲ್ಲಿಯು ಪ್ರಯೋಗವಾಗುವುವು.

ಕ್ರಮೋದಾಹರಣಂ, – ಪನ್ನೆರಳ್ಛಾಸಿರಮಂ ಧೊಪ್ಪನೆ ಬೀಳ್ದಂ, ಠಾವಲಾ ಎಂದ. ಇತ್ಯಾದಿಗಳನರಿವುದು.

(ii) "ಯ, ಲ, ವ."ಎಂಬುವು ಅನುನಾಸಿಕಗಳಾಗಿಯು, ನಿರನುನಾಸಿಕಗಳಾಗಿಯು ಪ್ರಯೋಗಿಸುವುವು. ಕ್ರಮೋದಾಹರಣಂ.– **ಅನುನಾಸಿಕಕ್ಕೆ** –ತೋಯಿಸಿದಂ, ಪಲ್ಲಣಂ, ಸಾವೆಂ. ಇತ್ಯಾದಿ,

ನಿರನುನಾಸಿಕಕ್ಕೆ– ದಾಯಿಗತನಂ, ಪಲಗೆಯುಮಂ, ಪವಳಂ ಇತ್ಯಾದಿ.

(iii) ರಕಾರಪುಟ್ಟುವ ಸ್ಥಾನವನ್ನು ಒತ್ತಿಯುಚ್ಚರಿಸಿದೊಡೆ "ಱ"ಕಾರ ಪುಟ್ಟುವುದು, ಡಕಾರ ಪುಟ್ಟುವ ಸ್ಥಾನವನ್ನು ಒತ್ತಿಯುಚ್ಚರಿಸಿದೊಡೆ "ೞ" ಕಾರ ಪುಟ್ಟುವುದು. "ೞ" ಕಾರೋಚ್ಚಾರ ಸುಲಭಕ್ಕೆ ಇದರ ಹಿಂದೆ "ಱ" ಕಾರವನ್ನು ಸೇರಿಸಿ "ಱೞ" ಎಂದು ಬರೆದುಚ್ಚರಿಸಲ್ಪಡುವುದು. ಈ ಱ ೞ ವರ್ಣಗಳು ವರ್ಣಾವೃತ್ತಿಗೆ

ಸಮಗಳು. ಪ್ರಾಸಕ್ಕೂ, ಯಮಕ ವೃತ್ತಿಗೂ, ಅಸಮಗಳು. ಕ್ರಮೋದಾಹರಣಂ, ವರ್ಣಾವೃತ್ತಿಗೆ, ಮೊರೆ–ಮೊಱೆ, ಮಾಡಿದಂ–ಮಾಡ್ದಿಂ,

ಪ್ರಾಸ ನಿಯಮದ ದೂಷ್ಯಕ್ಕೆ :

ಮರಲೊಳ್ ತೈಲಮತೆಗೆಯುವ ।
ತೆಱದಿಂದಂ ತೆಗೆವನಿವನದ್ರವ್ಯಮನೀಗಳ್ ॥
ಬೇಡದೆಕುಡುವನದ್ರವ್ಯಂ ।
ಸೂೞದೆಪೂಮಾಲೆಯಂ ಮನೋಹರ್ಷದೆ ತಾಂ ।

ಯಮಕವೃತ್ತಿಯ ದೂಷ್ಯಕ್ಕೆ –

ಕರೆಯಂ ಚಂದದ ಮಾತಿಂ।
ಕಱೆಯಂ ಪೊತ್ತಿಪ್ಪ ಚಂದ್ರಮುಖಿಯಂ ಸಖಿಯಂ॥

ಇಲ್ಲಿ "ಕರೆಯಂ" ಎಂಬುದಕ್ಕೆ "ಕಱೆಯಂ" ಎಂದು ಮತ್ತೊಂದು ಪದ ಬಂದಿರುವುದರಿಂದ ಇದು ದೂಷ್ಯವು. ಇಂತು' "ಱ" "ೞ." ಗಳನುದಾಹರಣದಿಂದೂಹಿಸುವುದು.

(4) ಕೆಲಬರು ಬೆರಲ್, ಮುರಲಿ, ಕೊರಲ್, ಸರಲ್, ಮೊದಲಾದುವುಗಳನ್ನು ಲಾಂತವೆಂದರಿಯದೆ, ಬೆರಳು, ಮರಳು, ಕೊರಳು, ಸರಳು. ಎಂದು ಪೇಳುವರಿದನುಚಿತವು.

(5) ಮರಲ್, ಅರಲ್, ಎರಲ್. ಈ ಶಬ್ದಗಳ ಮಧ್ಯ ರಕಾರಕ್ಕೆ ಲಕಾರಾದೇಶವಾಗಿ ಮಲರ್, ಅಲರ್, ಎಲರ್ ಎಂದಾಗುವುವು. ಮತ್ತೆ ಮರಲ್ ಎಂಬುದು ಒಂದಾನೊಂದು ಸಮಯ ಮಣಲ್ ಎಂದಾಗುವುದು.

11. ವರ್ಣಗಳು ಪುಟ್ಟುವ ರೀತಿ ಯಾವುದು ?

ಅವು ಶುಭ್ರವಾಗಿ ನಾಭಿಮೂಲದಿಂ ಪುಟ್ಟುವುವು.

12. ವರ್ಣಗಳು ಪುಟ್ಟುವ ಸ್ಥಾನಗಳು ಯಾವುವು? ವಿವರಿಸು ?

ಕಂಠವು, ತಾಲು, ಮೂರ್ಧವು, ದಂತಗಳು, ಓಷ್ಠಗಳು, ನಾಸಿಕವು, ಜಿಹ್ವಾಮೂಲವು ಹೃದಯವು ಇವು ವರ್ಣಸ್ಥಾನಗಳು.

॥ ವಿವರಂ.॥

ಯಾವ ವರ್ಣಗಳು ಯಾವಸ್ಥಾನದಲ್ಲಿ.

ಅಆ, ಕಖಗಘಙ, ಹ, ಃ(ವಿಸರ್ಗ): (ಕಂಠದಲ್ಲಿ)

ಇಈ, ಚಛಜಝಞ, ಯಶ (ತಾಲುವಿನಲ್ಲಿ)

ಋೠ, ಟಠಡಢಣ, ರ, ಷ, ೞ, ಱ (ಮೂರ್ಧದಲ್ಲಿ)

ಌ ೡ ತಥದಧನ,ಲ,ಸ, ಳ (ಕ್ಷಳ),ಳ(ಕುಳ), ದಂತಗಳಲ್ಲಿ

ಉಊ,ಪಫಬಭಮ (ಉಪಧ್ಮಾನೀಯ) ಓಷ್ಠಗಳಲ್ಲಿ

X (ಜಿಹ್ವಾಮೂಲೀಯ). (ಜಿಹ್ವಾ ಮೂಲದಲ್ಲಿ)

ಎಏಐ. ೦(ಅನುಸ್ವಾರ), ಙ,, ಞ, ನ, ಮ. (ನಾಸಿಕದಲ್ಲಿ)

ಎ ಏ ಐ (ಕಂಠತಾಲುಗಳಲ್ಲಿ)

ಒಓಔ (ಕಂಠೋಷ್ಠಗಳಲ್ಲಿ)

ವ (ದಂತೋಷ್ಠಗಳಲ್ಲಿ)

ಇವುಗಳಿಗೆ ಮೂಲಸ್ಥಾನವು ಹೃದಯವು

ವಿಚಾರಂ॥ ಅನುಸ್ವಾರಾನುನಾಸಿಕಗಳಿಗೆ ಸಂಬಂಧವಿರುವುದು

ಉ ತಂಗಿ–ತಙ್ಗಿ, ಮಂಚ–ಮಞ್ಚ, ನಂಟ–ನಣ್ಟ ಮಂದಿ=ಮನ್ದಿ, ಪಂಚೆ–ಪಞ್ಚೆ

13. ಅಕ್ಷರರೂಪಭೇದಗಳು ಯಾವುವು? ಉದಹರಿಸು?

ವ್ಯಂಜನಗಳು ಸ್ವರಗಳಿಂದ ತದನುಗುಣವಾಗಿ ವೃದ್ಧಿಯಾದೊಡೆ ಗುಣಿತಾಕ್ಷರಗಳೆಂದು, ವ್ಯಂಜನಗಳು ವ್ಯಂಜನಗಳೊಡನೆ ತದನುಗುಣವಾಗಿ ವೃದ್ಧಿಯಾದೊಡೆ ದ್ವಿತ್ವವೆಂದು 2 ರೂಪಭೇದಗಳು ದ್ವಿತ್ವದಲ್ಲಿ ನಿಜದ್ವಿತ್ವ, ಶಿಥಿಲದ್ವಿತ್ವವೆಂದರಿವುದು.

ಗುಣಿತಾಕ್ಷರಗಳ ಉದಾಹರಣಂ.

ಕ್+ಅ=ಕ ಕ್+ಆ=ಕಾ ಕ್+ಇ=ಕಿ ಕ್ +ಈ= ಕೀ ಕ್+ಉ=ಕು

ಕ್+ಊ=ಕೂ ಕ್+ಋ=ಕೃ ಕ್+ೠ=ಕೄ ಕ್+ಎ=ಕೆ ಕ್+ಏ=ಕೇ

ಕ್+ಐ=ಕೈ, ಕ್+ಒ=ಕೊ ಕ್+ಓ=ಕೋ ಕ+ಔ=ಕೌ,

ಕ+ಅಂ=ಕಂ ಕ್+ಃ=ಕಃ

ಇದರಂತೆ ಉಳಿದ ವ್ಯಂಜನಗಳಿಗೆ ಸ್ಥಳಗಳು ಪತ್ತುವವು.

ಇಞ ಎಂಬುವುಗಳು ಶುದ್ಧಾಂಗವಾಗಿ ಕನ್ನಡದಲ್ಲಿ ಪ್ರಯೋಗಿಸವು

ವ್ಯಂಜನದ್ವಿತ್ವಗಳು. ಕ್+ಕ್+ಅ=ಕ್ಕ , ಕ್+ಖ್+ಅ=ಕ್ಖ ಕ್ + ಗ್ + ಅ = ಕ್ಗ ಇತ್ಯಾದಿ. ಇದರಲ್ಲಿರುವ ಸ್ವರವು ಸುಲಭೋಚ್ಚಾರಣೆಗೆಂದು ತಿಳಿವುದು.

ಉದಾಹರಣಂ : ನಿಜದ್ವಿತ್ವಕ್ಕೆ - ಸಗ್ಗ, ಬಗ್ಗ, ಶಿಥಿಲದ್ವಿತ್ವಕ್ಕೆ ಅಮರ್ದು, ಎರ್ದೆ ಇತ್ಯಾದಿ.

ಇದರಂತೆ ಉಳಿದುವುಗಳನ್ನೂಹಿಸಲಾಗುವುದು.

ವಿಶೇಷ ಜ್ಞಾಪಕವು : ಅಚ್ಚಗನ್ನಡದಲ್ಲಿ ಣ, ನ, ಯ, ರ, ಱ, ಲ, ಳ, ೞ, ಎಂಬವುಗಳು ಶಬ್ದದ ಕಡೆಯಲ್ಲಿರ್ದೊಡೆ ಆ ಶಬ್ದಗಳನ್ನು ವ್ಯಂಜನಾಂತಗಳೆಂದು ತಿಳಿವುದು. ಪ್ರಕೃತಿ ಪ್ರತ್ಯಯಗಳು ಕೂಡಿದೊಡೆ ಪದವೆಂದು ತಿಳಿವುದು.

ಸಂಜ್ಞಾಪ್ರಕರಣಂ ಸಂಪೂರ್ಣಂ

II: ಸಂಧಿ ಪ್ರಕರಣಂ

14. ಸಂಧಿಯೆಂದೊಡೇನು ? ಉದಹರಿಸು?

ಎರಡು ಅಥವಾ ಪಲವು ವರ್ಣಗಳು ಪರಸ್ಪರವಾಗಿ ಕೂಡುವುದು ಸಂಧಿ. ಆ ಸಂಧಿಯಲ್ಲಿ ಪೂರ್ವಪದಾಂತದ ಸ್ವರರಹಿತ ವ್ಯಂಜನವು ಪರಪದಾದಿವರ್ಣವನ್ನು ಕೂಡುವುದು. ಪ್ರಕೃತಿ ಪ್ರತ್ಯಯಗಳ ಮಧ್ಯವು ಕೂಡಿದೊಡೆ ಪದಮಧ್ಯಸಂಧಿಯೆಂದು, ಪೂರ್ವಪದಾಂತವು ಪರಪದಾದಿಯು ಕೂಡಿದೊಡೆ ಪದಾಂತಸಂಧಿಯೆಂದು ಎರಡು ವಿಧವು.

ಉದಾಹರಣಂ :

I. **ಸ್ವರಯುಕ್ತ ಸಂಧಿಗೆ** – ಅರುಮೊಗನ + ಅಯ್ಯಂ – ಅರುಮೊಗನಯ್ಯಂ, ಇಂದು + ಈವಂ = ಇಂದೀವಂ, ಮಾಡು + ಎಂದಂ = ಮಾಡೆಂದಂ.

II. ಕ್+ಅ=ಕ ನೀರ್ + ಆಟಂ = ನೀರಾಟಂ,

III. ಎಸಳ್ + ಇಪ್ಪುದು = ಎಸಳಿಪ್ಪುದು, ಈಯಲ್ + ಬಂದಂ = ಈಯಲ್ಬಂದಂ,

ನಾಮವಿಭಕ್ತಿಯ ಪದಮಧ್ಯ ಸಂಧಿಗೆ :

iv. ಮಂಜು+ಅಮ್ = ಮಂಜಂ, ಮಂಜು+ಇಮ್ = ಮಂಜಿಂ, ಮಂಜು+ಇಂಗೆ = ಮಂಜಿಂಗೆ, (ಮೆಂಜಿಗೆ), ಮಂಜಿನ + ಅತ್ತಣಿಮ್ = ಮಂಜಿನತ್ತಣಿಂ, ಮಂಜು +ಇನ +ಮಂಜಿನ, ಮಂಜಿನ + ಒಳ್=ಮಂಜಿನೊಳ್

ಕ್ರಿಯಾವಿಭಕ್ತಿ ಸಂಧಿಗೆ : ನೋಡಿದ + ಅಮ್ = ನೋಡಿದಂ, ನೋಡಿದ +ಅರ್ = ನೋಡಿದರ್, ನೋಡಿದ+ಅಯ್ = ನೋಡಿದಯ್, ನೋಡಿದ + ಇರ್– ನೋಡಿದರ್, ನೋಡಿದ + ಎನ್ –ನೋಡಿದೆನ್ (ದೆಂ), ನೋಡಿದ + ಎವು = ನೋಡಿದೆವು.

ಪದಾಂತ ಸಂಧಿಗೆ ಏನ್ನ + ಅರಸಂ = ಎನ್ನರಸಂ, ಸಗ್ಗದ + ಇಂದಿರಂ = ಸಗ್ಗದಿಂದಿರಂ

ಕ್ರಿಯಾಪದ ಮಿಶ್ರಪದಾಂತ ಸಂಧಿಗೆ : ಬಂದರ್ + ಅವರ್ = ಬಂದರವರ್, ಇತ್ತೆವು + ಇನಿದಂ = ಇತ್ತೆವಿನಿದಂ, ಇವರ್ + ಎಂದರ್ = ಇವರೆಂದರ್

15. ಸಂಧಿ ಸಂಕೇತಗಳು ಯಾವುವು ? ವಿವರಿಸು?

ಸಂಧಿ ಅಥವಾ ಸಮಾಸಗಳನ್ನು ಮಾಡುವುದರಲ್ಲಿ ಮೊದಲಿದ್ದದ್ದನ್ನು ಕೆಡಿಸದೆ ಮಿತ್ರನಂತೆ ಬರ್ಪ್ಪುವಾಗಮವೆಂದು, ಅವು ವಿಭಕ್ತಿಯೊಡನೆ ಪೋದೊಡೆ ಲೋಪವೆಂದು, ಮೊದಲಿದ್ದದ್ದನ್ನು ಕೆಡಿಸಿ ಶತ್ರುವಂತೆ ಬರ್ಪ್ಪುವಾದೇಶವೆಂದು ಮೂರು ಸಂಕೇತಗಳು.

ಆಗಮಕ್ಕೆ : ಮನೆ + ಆಣ್ಮಂ = ಮನೆಯಾಣ್ಮಂ, ಗುರು + ಅಂ = ಗುರುವಂ, ಇಲ್ಲಿ, "ಯ, ವ" ಕಾರಗಳು ಕ್ರಮವಾಗಿ ಆಗಮಗಳು,

ಲೋಪಕ್ಕೆ : ಮಾತು + ಇಂದಂ=ಮಾತಿಂದಂ ಇಲ್ಲಿ "ತು"ಎಂಬುವುದರ ಮೇಲಿನ ಉ ಕಾರ ಲೋಪವಾಯಿತು.

ಆದೇಶಕ್ಕೆ : ಕಣ್ + ಪನಿ = ಕಣ್ಬನಿ, ಮರ+ಮಣೆ = ಮರವಣೆ ಇಲ್ಲಿ "ಪ, ಮ" ಎಂಬವು ಲೋಪವಾಗಿ "ಬ ವ" ಎಂಬುವಾದೇಶವಾದುವು.

16. ಸಂಧಿಯ ವಿಭಾಗಗಳು ಯಾವುವು? ಉದಹರಿಸು ?

(ಕವಿಗಳು ಸಂಸ್ಕೃತ ಕರ್ಣಾಟ ಭಾಷಾಮಿಶ್ರದಿಂ ಕನ್ನಡಕಬ್ಬಗಳಂವೇಳಿರ್ಪುದರಿಂ) ಸಂಸ್ಕೃತ ಸಂಧಿಯೆಂದು ಕನ್ನಡ ಸಂಧಿಯೆಂದು ೨ ವಿಭಾಗಗಳು.

17. ಸಂಸ್ಕೃತ ಸಂಧಿಯ ಭಾಗಗಳು ಯಾವುವು ? ಉದಹರಿಸು?

ಸ್ವರ ಸಂಧಿಯೆಂದು ವ್ಯಂಜನಸಂಧಿಯೆಂದು ಎರಡು ಭಾಗಗಳು. ಸ್ವರಸಂಧಿಯಲ್ಲಿ ಸವರ್ಣ ದೀರ್ಘ, ಯಣ್, ಗುಣ, ವೃದ್ಧಿ ಎಂದು ನಾಲ್ಕು ವಿಧಗಳು. ವ್ಯಂಜನ ಸಂಧಿಯು ಅನೇಕ ವಿಧವಾಗಿರುವುದು,

ಸ್ವರಸಂಧಿಗಳು(ಸಂಸ್ಕೃತ)

ಸವರ್ಣದೀರ್ಘಸಂಧಿ.

(1) ಸವರ್ಣಸ್ವರಗಳು ಪರಸ್ಪರವಾಗಿ ಕೂಡಿದೊಡೆ ಸಜಾತಿದೀರ್ಘಾದೇಶವಾಗುವುದು,

ವಿಧಿ	**ಉದಾಹರಣಂ**
ಅ+ಅ= ಆ	ಧನ ಅಧಿಪ=ಧನಾಧಿಪ
ಆ + .ಅ = ಆ	ಧನ +ಆದಾಯ = ಧನಾದಾಯ
ಆ+ಅ= ಆ,	ಲತಾ + ಅಂಗಿ = ಲತಾಂಗಿ
ಆ + ಆ = ಆ	ಲತಾ _ ಆಸ್ವಾದನ = ಲತಾಸ್ವಾದನ
ಇ +ಇ = ಈ	ಮುನಿ+ ಇಂದ್ರ = ಮುನೀಂದ್ರ

ಇ + ಈ = ಈ	ಮುನಿ + ಈಶ್ವರ = ಮುನೀಶ್ವರ
ಈ + ಇ = ಈ	ವಾಣೀ + ಇಂದ್ರ = ವಾಣೀಂದ್ರ
ಈ + ಈ = ಈ	ವಾಣೀ + ಈಶ = ವಾಣೀಶ
ಉ + ಉ = ಊ	ಗುರು + ಉದಯ = ಗುರೂದಯ
ಉ+ಊ= ಊ	ಗುರು ಊರ್ಜಿತ-ಗುರೂರ್ಜಿತ
ಊ+ಉ=ಊ;	ವಧೂ + ಉತ್ತಮಾ = ವಧೂತ್ತಮಾ
ಊ + ಊ = ಊ	ವಧೂ+ಊಹಾ ವಧೂಹಾ
ಋ + ಋ = ೠ	ಕರ್ತೃ+ಋಕ್ಷ=ಕರ್ತೄಕ್ಷ

ಯಣ್ ಸಂಧಿ

(2) ಅಸವರ್ಣ ಸ್ವರಗಳು ಪರವಾದೊಡೆ ಪೂರ್ವಪದಾಂತದ ಇ, ಉ, ಋ ಕಾರಗಳಿಗೆ ಕ್ರಮವಾಗಿ, ಯ, ವ ರ ಕಾರಗಳಾದೇಶವಾಗುತ್ತವೆ.

ವಿಧಿ	ಉದಾಹರಣಂ
ಇ + ಅ = ಯ;	ಪ್ರತಿ+ಅಂತರ-ಪ್ರತ್ಯಂತರ,
ಈ + ಉ = ಯ;	ಗೌರೀ+ಉತ್ಸವ= ಗೌರ್ಯುತ್ಸವ.
ಇ + ಋ = ಯ	ಗಿರಿ + ಋಷಭ-ಗಿರ್ಯ್ ರ್ಷಭ
ಈ + ಏ = ಯ;	ಸ್ತ್ರೀ + ಏಣ- ಸ್ತ್ರ್ಯೇಣ
ಇ + ಐ = ಯ;	ಬುದ್ಧಿ + ಐಶ್ವರ್ಯ= ಬುದ್ಧ್ಯೈಶ್ವರ್ಯ
ಈ + ಓ =ಯ;	ವಾಣೀ + ಓಘ = ವಾಣ್ಯೋಘ
ಇ + ಔ = ಯ;	ಜಲಧಿ + ಔರ್ವ = ಜಲ್ಧ್ಯೌರ್ವ
ಉ + ಅ = ವ;	ಗುರು + ಅಭಿಮತ = ಗುರ್ವಭಿಮತ.
ಊ + ಇ = ವ	ವಧೂ + ಇಂದ್ರ = ವಧ್ವಿಂದ್ರ,
ಉ + ಋ = ವ	ಸಾಧು + ಋತಿ = ಸಾಧ್ವರ್ತಿ,
ಊ + ಏ = ವ	ತನೂ + ಏಕ = ತನ್ವೇಕ
ಉ + ಐ = ವ	ಧೇನು + ಐರಾವತ = ಧೇನ್ವೈರಾವತ.
ಊ + ಓ = ವ;	ಚಮೂ + ಓದನ = ಚಮ್ವೋದನ.
ಉ + ಔ = ವ;	ಪಟು + ಔತ್ತಾನಪಾದಿ = ಪಟ್ವೌತ್ತಾನ ಪಾದಿ

ಋ + ಅ = ರ;	ಪಿತೃ+ಅಂಶ = ಪಿತ್ರಂಶ.
ಋ + ಇ = ರ;	ಭ್ರಾತೃ+ಇಂಗಿತ = ಭ್ರಾತ್ರಿಂಗಿತ
ಋ + ಉ=ರ;	ಮಾತೃ+ಉತ್ಸವ=ಮಾತ್ರುತ್ಸವ.
ಋ + ಏ = ರ;	ಕರ್ತೃ + ಏಕ = ಕರ್ತ್ರೈಕ
ಋ + ಐ = ರ;	ಧಾತೃ + ಐಶ್ವರ್ಯ = ಧಾತ್ರೈಶ್ವರ್ಯ
ಋ + ಓ = ರ;	ದುಹಿತೃ + ಓಘ =ದುಹಿತ್ರೋಘ.
ಋ + ಔ = ರ;	ಪಿತೃ+ಔಶೀರ = ಪಿತ್ರೌಶೀರ

ೠಕಾರ ವಿಶೇಷ ರೂಢಿಯಿಲ್ಲ.

ಗುಣಸಂಧಿ

(3) ಪೂರ್ವಪದಾಂತದ "ಅ, ಆ" ಕಾರಗಳಿಗೆ "ಇ, ಈ " ಕಾರಗಳು ಪರವಾದೊಡೆ, ಏಕಾರವು, " ಉ,ಊ" ಕಾರಗಳು ಪರವಾದೊಡೆ ಓಕಾರವು ಋೠಕಾರಗಳು ಪರವಾದೊಡೆ ಅರ್‌ಕಾರಗಳು ಆದೇಶವಾಗುತ್ತವೆ.

ಉದಾಹರಣಂ : ಊ " ಕಾರಗಳು ಪರವಾದೊಡೆ, ಓಕಾರವು, "ಋ, ೠ" ಕಾರಗಳು ಪರವಾದೊಡೆ ಅರ್‌ಕಾರವು ಆದೇಶವಾಗುತ್ತವೆ.

ವಿಧಿ	ಉದಾಹರಣಂ
ಅ + ಇ = ಏ	ಪದ್ಮ + ಇಂದ್ರ = ಪದ್ಮೇಂದ್ರ
ಆ + ಇ = ಏ	ಕಮಲಾ + ಈಶ = ಕಮಲೇಶ
ಅ + ಉ = ಓ	ಅಮೃತ + ಉತ್ಸವ = ಅಮೃತೋತ್ಸವ
ಅ + ಊ = ಓ	ಗಂಗಾ + ಊರ್ಮಿ = ಗಂಗೋರ್ಮಿ
ಅ + ಋ = ಅರ್	ನಿಷಾದ + ಋಷಭ = ನಿಷಾದರ್ಷಭ

ವೃದ್ಧಿ ಸಂಧಿ

(4) ಪೂರ್ವಪದಾಂತವಾದ "ಅ, ಆ" ಕಾರಗಳಿಗೆ "ಏ, ಐ" ಕಾರಗಳು ಪರವಾದೊಡೆ, "ಐ" ಕಾರವು "ಓ, ಔ"ಕಾರಗಳಿಗೆ ಪರವಾದೊಡೆ, ಔ ಕಾರವು ಆದೇಶವಾಗುವುದು.

ವಿಧಿ	ಉದಾಹರಣಂ
ಅ + ಏ = ಐ	ಅಕ್ಷರ + ಏಕತ್ವ = ಅಕ್ಷರೈಕತ್ವ
ಆ + ಐ = ಐ	ವನಿತಾ + ಐಕಾಗ್ರ = ವನಿತೈಕಾಗ್ರ
ಅ + ಓ = ಔ	ವನ + ಓತು = ವನೌತು
ಆ + ಔ = ಔ	ಕಾಲಾ + ಔದಾನಿಕ = ಕಾಲೌದಾನಿಕ

ವ್ಯಂಜನ ಸಂಧಿಗಳು (ಸಂಸ್ಕೃತ)

(1) ಶ್ಚುತ್ವ ಸಂಧಿ : ಪೂರ್ವಪದಾಂತವಾದ ಸ ಕಾರ, ತ ವರ್ಗಾಕ್ಷರಗಳಿಗೆ ಶ ಕಾರ ಚವರ್ಗಾಕ್ಷರಗಳು ಪರವಾದೊಡೆ, ಶಕಾರ, ಚವರ್ಗಾಕ್ಷರಗಳಾದೇಶವಾಗುತ್ತವೆ.

ಉದಾಹರಣಂ : ರಾಮಸ್–ಶೇತೇ = ರಾಮಶ್ಶೇತೇ, ಪಯಸ್ + ಶಯನ = ಪಯಶ್ಶಯನ,

ರಾಮಸ್ + ಚಿನೋತಿ = ರಾಮಶ್ಚಿನೋತಿ, ಸತ್ +ಚಿತ್ = ಸಚ್ಚಿತ್

(2)ಷ್ಟುತ್ವ ಸಂಧಿ: ಪೂರ್ವಪದಾಂತವಾದ (ಸ ಕಾರ, ತ ಕಾರ) ಷ ಕಾರ, ಟವರ್ಗಾಕ್ಷರಗಳು ಪರವಾದೊಡೆ ಷಕಾರ, ಟವರ್ಗಾಕ್ಷರಗಳಾದೇಶವಾಗುತ್ತವೆ.

ಉದಾಹರಣಂ : ರಾಮಸ್ + ಷಷ್ಠ = ರಾಮಷ್ಷಷ್ಠ, ಆಯಸ್ + ಟಂಕ = ಆಯಷ್ಟಂಕ. ತತ್ತ + ಟೀಕೆ – ತಟ್ಟೀಕೆ

(3)ಜಸ್ತ್ವಸಂಧಿ: ಪೂರ್ವಪದಾಂತವಾದ ಪರುಷಾಕ್ಷರಗಳಿಗೆ ಸಾಧಾರಣ ವಾದ ವರ್ಣವು ಪರವಾದೊಡೆ ಆ ಪರುಷಾಕ್ಷರಕ್ಕೆ ಅದರ ಸರಳ ಅಲ್ಪಪ್ರಾಣವಾದೇಶವಾಗುದು.

ಉದಾಹರಣಂ : : ವಾಕ್ _ ವಾಣೀ = ವಾಗ್ವಾಣೀ , ಚಿತ್ + ಆನಂದ = ಚಿದಾನಂದ, ಇತ್ಯಾದಿ.

(4). ಛತ್ವ ಸಂಧಿ : ಶವರ್ಣ ಪರವಾದ ಪೂರ್ವಪದಾಂತವಾದ ತಕಾರ ದಕಾರಗಳು ಚಕಾರವಾಗಿಯು, ಆ ಶವರ್ಣವು ಛಕಾರವಾಗಿಯು ಆಗುವುದು.

ಉದಾಹರಣಂ : : ತತ್ + ಶಿವ= ತಚ್ಛಿವ, ವಿದ್ಯುತ್ + ಶಕ್ತಿ = ವಿದ್ಯುಚ್ಛಕ್ತಿ, ಇತ್ಯಾದಿ.

(5). ಪೂರ್ವ ಸವರ್ಣಸಂಧಿ : ಹಕಾರ ಪರವಾದ ಪೂರ್ವಪದಾಂತವಾದ ಪರುಷಾಕ್ಷರವು ಅದರ ಅಲ್ಪಪ್ರಾಣ ಸರಳಾಕ್ಷರವಾಗಿಯು, ಅ ಹಕಾರವು ಮಹಾಪ್ರಾಣ ಸರಳಾಕ್ಷರವಾಗಿಯು ಆಗುವುದು.

ಉದಾಹರಣಂ : ವಾಕ್ ಹರಿ = ವಾಗ್ಘರಿ, ತತ್ + ಹೀರ = ತದ್ಧೀರ. ಇತ್ಯಾದಿ.

(6) ಪರ ಸವರ್ಣಸಂಧಿ : ಪೂರ್ವಪದಾಂತವಾದ ತ ಕಾರವು ಚ, ಜ, ಲ

ಕಾರಗಳ ಮುಂದೆ ಆಯಾ ವರ್ಣವಾಗುತ್ತದೆ.

ಉದಾಹರಣಂ : ವಿದ್ಯುತ್ + ಚಂಚಲಾ = ವಿದ್ಯುಚ್ಚಂಚಲಾ, ಮರುತ್ + ಜನ = ಮರುಜ್ಜನ, ತತ್ + ಲಯ = ತಲ್ಲಯ

(7) ಅನುನಾಸಿಕ ಸಂಧಿ : ಪೂರ್ವಪದಾಂತವಾದ ವರ್ಗೀಯಾಕ್ಷರಕ್ಕೆ ಯಾವ ಅನುನಾಸಿಕ ಪರವಾದರು, ಅವರ್ಗೀಯಾಕ್ಷರದ ಅನುನಾಸಿಕವೇ ಆದೇಶವಾಗಿ ಬರುತ್ತದೆ.

ಉದಾಹರಣಂ : : ಏತತ್ + ಮುರಾರಿ = ಏತನ್ಮುರಾರಿ, ವಾಕ್ + ಮೂಲ = ವಾಙ್ಮೂಲ, ಪತ್ + ನಗ = ಪನ್ನಗ, ಅಪ್ + ಮಯ = ಅಮ್ಮಯ. ಇತ್ಯಾದಿ.

(8) ವಿಸರ್ಗ ಸಂಧಿ :

(1.) ವಿಸರ್ಗಕ್ಕೆ ತವರ್ಗ, ಚವರ್ಗ, ಟವರ್ಗಗಳ ಪರುಷಾಕ್ಷರಗಳು ಪರವಾದೊಡೆ, ಕ್ರಮವಾಗಿ ಸ, ಶ, ಷ ಕಾರಗಳಾದೇಶವಾಗುತ್ತವೆ.

ಉದಾಹರಣಂ : : ಧನುಃ + ತಾಡನ = ಧನುಸ್ತಾಡನ, ಮನಃ + ಚಂಚಲ – ಮನಶ್ಚಂಚಲ, ಧನುಃ +ಟಂಕಾರ = ಧನುಷ್ಟಂಕಾರ. ಇತ್ಯಾದಿ.

(2.) ವಿಸರ್ಗಕ್ಕೆ ಕವರ್ಗ ಪವರ್ಗಗಳ ಪರುಷಾಕ್ಷರಗಳಾಗಲಿ ಅಥವಾ ಶ, ಷ, ಸವರ್ಣಗಳಾಗಲಿ ಪರವಾದೊಡೆ ಭೇದವಾಗದೆಯಿರ್ಪುದು ಅಥವಾ ಶ, ಷ, ಸ ವರ್ಣಗಳು ದ್ವಿತ್ವವಾಗುತ್ತವೆ.

ಉದಾಹರಣಂ : : ಮನಃ+ ಕಷಾಯ = ಮನಃ ಕಷಾಯ, ವಯಃ ಪ್ರವರ್ತನ = ವಯಃ ಪ್ರವರ್ತನ, ಧನುಃ + ಶಲಾಕಾ = ಧನುಶ್ಶಲಾಕಾ, ತಪಃ + ಷಡ್ಭಾಗ = ತಪಷ್ಷಡ್ಭಾಗ, ಮನಃ + ಸಂದೇಹ = ಮನಸ್ಸಂದೇಹ. ಇತ್ಯಾದಿ.

(3) ಹ್ರಸ್ವ ಅಕಾರದ ಮೇಲಿರುವ ವಿಸರ್ಗವು ಸರಳಾಕ್ಷರಗಳಾಗಲಿ ಅಂತಸ್ಥಗಳಾಗಲಿ ಪರವಾದೊಡೆ, ಓ ಕಾರವಾಗುವುದು. ಆ ವಿಸರ್ಗಕ್ಕೆ ಅಕಾರ ಉ ಕಾರಗಳು ಪರವಾದೊಡೆ, ಪರವಾದುವುಗಳೇ ಲೋಪಿಸುವುವು,

ಉದಾಹರಣಂ : ಮನಃ ಜಯ=ಮನೋಜಯ, ತಮಃ+ಅಪಹ–ತಮೋಪಹ, ಮನಃ + ಉಲ್ಲಾಸ =ಮನೋಲ್ಲಾಸ.

(4) ನಾಮಿಗಳಮೇಲಿನ , ವಿಸರ್ಗಕ್ಕೆ ಸ್ವರಗಳಾಗಲಿ, ಸರಳವ್ಯಂಜನಗಳಾಗಲಿ, ಅಂತಸ್ಥಗಳಾಗಲಿ, ಪರವಾದೊಡೆ ರೇಫಾದೇಶವಾಗುವುದು.

ಉದಾಹರಣಂ : ಶಂಭುಃ + ಈಶ + ಶಂಭುರೀಶ ಸ್ಥಾಣುಃ + ದೇವ = ಸ್ಥಾಣುರ್ದೇವ, ಜ್ಯೋತಿಃ + ಮಯ ಜ್ಯೋತಿರ್ಮಯ, ಮಣಿಃ + ಲಕ್ಷ = ಮಣಿರ್ಲಕ್ಷ

(5) ವಿಸರ್ಗಕ್ಕೆ ಸಾಮಾನ್ಯ ಸ್ವರಗಳು ಪರವಾದೊಡೆ ವಿಸರ್ಗವು ಲೋಪಿಸುವುದು

ಉದಾಹರಣಂ: ಅಮರ್ತ್ಯಾಃ + ಅಮೃತಾಂಧಸಃ = ಅಮರ್ತ್ಯಾಅಮೃತಾಂಧಸಃ, ಇತ್ಯಾದಿ. ಇನ್ನುಳಿದುವುಗಳನ್ನೂಹಿಸುವುದು.

18. ಕನ್ನಡಸಂಧಿಯ ಭಾಗಗಳು ಯಾವುವು?

ಸ್ವರಸಂಧಿಯೆಂದು, ವ್ಯಂಜನಸಂಧಿಯೆಂದು 2 ಭಾಗಗಳು,

ಸ್ವರಸಂಧಿಗಳು (ಕನ್ನಡ)

(1) ಸ್ವರಕ್ಕೆ ಸ್ವರಪರವಾದೊಡೆ ಸಂಸ್ಕೃತದಲ್ಲಿಯು, ಕನ್ನಡದಲ್ಲಿಯು ನಾಮಪ್ರಸಿದ್ಧಿ ಕೆಡದಿರ್ದೊಡೆ ಪೂರ್ವ ಪದಾಂತಸ್ವರಕ್ಕೆ ಲೋಪವಾಗುವುದು.

ಸಂಸ್ಕೃತಕ್ಕೆ **ಉದಾಹರಣಂ :** ಕ್ರಮದಿಂದೆ + ಇರ್ದಂ = ಕ್ರಮದಿಂದಿರ್ದಂ, ಶರಕ್ಕೆ + ಈಡಾದಂ = ಶರಕ್ಕೀಡಾದಂ, ಭೃತ್ಯ+ ಅರ್=ಭೃತ್ಯರ್, ಭಾಗ + ಇಸು = ಭಾಗಿಸು.

ಕನ್ನಡಕ್ಕೆ ಉದಾಹರಣಂ : ಪೊಲಕ್ಕೆ+ಇತ್ತಂ = ಪೊಲಕ್ಕಿತ್ತಂ, ಮರದ + ಎಲೆ = ಮರದೆಲೆ, ಮಾತು + ಎಲ್ಲಂ = ಮಾತೆಲ್ಲಂ, ಕೂಸು + ಆದಂ = ಕೂಸಾದಂ. ನಾಮ ಪ್ರಸಿದ್ಧಿ ಕೆಡುವೊಡೆ ಲೋಪಸಂಧಿಯಾಗದುದಕ್ಕೆ ಶಂಭು + ಈತಂ = ಶಂಭುವೀತಂ, ಮನೆ+ಎಲ್ಲ = ಮನೆಯೆಲ್ಲ, ಮಡು + ಅಲ್ಲಿ = ಮಡುವಲ್ಲಿ. ಶಂಭೀತಂ, ಮನೆಲ್ಲ, ಮಡಲ್ಲಿ ಎಂದು ಲೋಪಸಂಧಿ ಮಾಡಲಾಗದು.

(2) ಪೂರ್ವಪದವು ಆ, ಇ, ಈ, ಎ, ಏ, ಐ, ಓ ಕಾರಾಂತವಾಗಿದ್ದು ಸ್ವರ ಪರವಾದೊಡೆಯು, ಷಷ್ಠಿಯ ಅ ಕಾರಕ್ಕೆ ಅವಧಾರಣೆಯ ಎಕಾರವು ಪರವಾದೊಡೆಯು ಯ ಕಾರಾಗಮವಾಗುವುದು.

ಉದಾಹರಣಂ : : ಆ ಕಾರಕ್ಕೆ, ಆ + ಎಂದಂ =ಆಯೆಂದಂ,

ಇ ಕಾರಕ್ಕೆ ಕುರಿ + ಅಂ = ಕುರಿಯಂ,

ಈ ಕಾರಕ್ಕೆ ಈ+ಅಂ = ಈಯಂ

ಎ ಕಾರಕ್ಕೆ ಬಾಳೆ+ಅಂ=ಬಾಳೆಯಂ,

ಏ ಕಾರಕ್ಕೆ, ತೇ + ಇಸಿದಂ = ತೇಯಿಸಿದಂ

ಐ ಕಾರಕ್ಕೆ ಐ + ಎಂದಂ = ಐಯೆಂದಂ,

ಓ ಕಾರಕ್ಕೆ ಹೋ + ಎಂದಂ = ಹೋಯೆಂದಂ

ಷಷ್ಠಿಯ ಅಕಾರಕ್ಕೆ, ಅವನ +ಎ = ಅವನಯೆ, ಅದರ + ಎ = ಅದರಯೆ,

(3) ಅಕಾರಾಂತ ಸಂಸ್ಕೃತ ಕರ್ಣಾಟಕ ಪ್ರಕೃತಿಗಳಿಗೆ ಇಸು ಎಂಬ ಪ್ರತ್ಯಯ ಪರವಾದೊಡಂ, ಅಕಾರಾಂತವಾದ ಅನುಕೃತಿಶಬ್ದಕ್ಕೆ ಅನುಕೃತಿ ಸ್ವರಪರವಾದೊಡಂ ಯಕಾರಾಗಮವಾಗುವುದು.

ಉದಾಹರಣಂ : ಧ್ಯಾನ + ಇಸು = ಧ್ಯಾನಿಸು, ರಾಗ + ಇಸು = ರಾಗಿಸು, ತೆರ + ಇಸು = ತೆರಯಿಸು, ಬರ + ಇಸು = ಬರಯಿಸು, ಗಳಗಳ + ಎಂದು=ಗಳಗಳಯೆಂದು

(4) ಉ,ಊ, ಋ, ೠ, ಓ, ಔ ಎಂಬುವುಗಳಿಗೆ ಸ್ವರಪರವಾದೊಡೆ ವಕಾರಾಗಮ ಬರುವುದು ಇದು ಸಂಸ್ಕೃತದಲ್ಲಿ ನಿತ್ಯವು. ಕನ್ನಡದಲ್ಲಿ ಆ, ಓ ಕಾರಗಳಿಗೆ ಸ್ವರ ಪರವಾದೊಡೆ ವ ಕಾರ ಯ ಕಾರಗಳೆರಡೂ ಬರುವುವು,

ಉದಾಹರಣಂ : ಉ ಕಾರಕ್ಕೆ – ಗುರು ಇಂ=ಗುರುವಿಂ

ಊ ಕಾರಕ್ಕೆ – ಪೂ + ಅಂ = ಪೂವಂ,

ಋ ಕಾರಕ್ಕೆ – ಕರ್ತೃ+ಎ=ಕರ್ತೃವೆ, ಭ್ರಾತೃ+ಅಂ= ಭ್ರಾತೃವಂ ಮಾತೃ+ಇಂ=ಮಾತೃವಿಂ.

ೠ ಕಾರಕ್ಕೆ – ೠ + ಇಂ– ೠವಿಂ, ೠ + ಇರ್ಪುದು = ೠವಿರ್ಪುದು.

ಓ ಕಾರಕ್ಕೆ – ಗೋ + ಇತ್ತಂ = ಗೋವಿತ್ತಂ, ಗೋ+ಆಂ =ಗೋವಂ

ಔ ಕಾರಕ್ಕೆ – ನೌ + ಅಂ = ನೌವಂ, ಗ್ಲೌ + ಇವಂ = ಗ್ಲೌವಿವಂ

ಯ,ವ ಕಾರಕ್ಕೆ – ಆ + ಊಟಂ = ಆಯೂಟಂ, ಆವೂಟಂ.

(5) ಎಏ, ಒಓ ಕಾರಾಂತ ನಿರ್ವಿಕಾರಿಗಳಾದ ನಿಪಾತಾವಧಾರಣೆ ಎಂಬುವುಗಳಿಗೆ ಸ್ವರಪರವಾದೊಡೆ ಸಂಧಿಯಿಲ್ಲ, ಪ್ಲುತಕ್ಕೂ ಸಂಧಿಯಿಲ್ಲ,

ಉದಾಹರಣಂ : ನಿಪಾತಕ್ಕೆ – ಎಲೆ ಇದೊ ! ಎಲೆ ಇರಲಿ ! ಹೊ ಇದೊ !

ಅವಧಾರಣೆಗೆ – ನುಡಿದನೆ ಅವಂ, ಈತನೆ ಈಶಂ, **ವಿಶಂಕೆಗೆ** – ಆತನೊ ಈತನೊ, ಅದೂ ಇದೂ ಉದೋ? ಪ್ಲುತಕ್ಕೆ ಭು, ಭೂ, ಭೋ, ಎಂದು ಶಾರ್ಙ್ಗಮಂಪೂರಯಿಸಿದಂ, ಕು, ಕೂ, ಕೋ ಎಂದು ಕೋಳಿ ಕೂಗಿದುದು.

(6) ಓಕಾರಾಂತವಾದ ಮೆಚ್ಚಿಗೆಯಲ್ಲಿಯೂ, ಆಕ್ಷೇಪದಲ್ಲಿಯೂ ಒಪ್ಪಿಗೆಯ "ಎಮ" ಎಂಬಲ್ಲಿಯೂ, ಆರಾದೇಶವಾದ ಗಡ ಶಬ್ದದಲ್ಲಿಯೂ, ದುಃಖದಲ್ಲಿಯೂ ಸಂಧಿಯಿಲ್ಲ.

ಮೆಚ್ಚಿಕೆಗೆ– ಎಂತೆಂತೋ ಆದುದೊಳ್ಳಿತಾಯ್ತು, ಏನೋ ಆದುದು ಹಿತಂ,

ಆಕ್ಷೇಪಕ್ಕೆ– ಕೊಂದನೋ ಎಮ್ಮ ಸೈನ್ಯಮಂ, ಆತನೋ ಹರಂ.
ಏಮಶಬ್ದಕ್ಕೆ– ತಮಗಕ್ಕೆಮ ಊರ್ಜಿತಂ
ಗಡಾರ್ಥಕ್ಕೆ– ಎನ್ನ ಸೌಂದರಿಯಾ ! ಇರ್ಪಿರವಾ !
ದುಃಖಕ್ಕೆ – ಅಕಟಾ ಆತಂಗೀತ ಮುನಿದಪಂ.

(7) ಪೊರಗು, ಒಳಗು, ಪೊಸತು, ಪಳದು, ಎಳದು. ಎಂಬುವುಗಳಿಗೆ ಸಮಾಸವಿಷಯದಲ್ಲಿ ಕಡೆಯ ದು ಎಂಬುದು ಲೋಪವಾಗಿ ನಿಪಾತದಂತೆ ಕಡೆಯಲ್ಲಿ ಯಾವ ಸ್ವರವಿದ್ದರೂ ಸಂಧಿಯಿಲ್ಲ.

ಉದಾಹರಣಂ : ಪೊರಇಟ್ಟ, ಒಳಅಲಗು, ಮೊಸಅರಳು, ಪಳಅಡಕೆ, ಎಳಅಂಚೆ,

(8) ಪೂರ್ವಪದಾಂತವು ಹ್ರಸ್ವವಾಗಿ ಪರಪದಾದಿಯು ದ್ವಿತ್ವವಾಗಿರ್ದೊಡೆ, ಪದಗಳ ಮಧ್ಯದಲ್ಲಿ ಅಸಹ್ಯವಾದರ್ಥಬರುವಂತಾದೊಡೆ, ಪೂರ್ವಪದಾಂತವೂ ಪರಪದಾದಿಯೂ ರಕಾರವಾದೊಡೆ, ಸಂಧಿಯಿಲ್ಲ.

॥ **ವಿಚಾರಂ** ॥ ಅವಧಾರಣೆಯ ಏಕಾರವು ತನ್ನ ಅರ್ಥವನ್ನು ಬಿಟ್ಟು ಮತ್ತೊಂದರ್ಥವನಿತ್ತೊಡೆ, "ಅರೆ" ಎಂಬುದು ವಸ್ತುವಿನ ಭಾಗವನ್ನು ಪೇಳ್ದೊಡೆ ಸಂಧಿಯುಂಟು.

ಉದಾಹರಣಂ : ಹ್ರಸ್ವ ದ್ವಿತ್ವಗಳಿಗೆ, ನೋಡಿ, ಪ್ರತಿಪಕ್ಷದಿಮಾ ॥ ಕಂ ॥ ಅಸಹ್ಯಕ್ಕೆ, ಪೂ, ಸುಗಂಧಮಂ ಮೂಸು.
ರಕಾರಕ್ಕೆ, ಮೂವರ್, ರಾಯರನೆ, ಮೂದೇವರ್, – 'ರಾಜ್ಯಮಂಪೊರೆಗುಂ'
ಅವಧಾರಣೆಯ ಎ ಕಾರಕ್ಕೆ, ಇನಿವಾತಿನಗಿಳಿಯಲ್ಲದಿಲ್ಲ .
ಅರೆ ಎಂಬುದಕ್ಕೆ ಎರೆದನಾಸಿರಿಯರೆಯಂ ॥

ವ್ಯಂಜನಸಂಧಿಗಳು (ಕನ್ನಡ)

ಪರಪದಾದಿಯಲ್ಲಿ ಕ, ತ, ಪ, ಗಳು ಬಂದು ಸಮಾಸವಾದೊಡೆ ಅವು ಕ್ರಮವಾಗಿ ಗ, ದ, ಬ. ಗಳಾಗುವುವು.

ಉದಾಹರಣಂ : ಕಕಾರವು ಗಕಾರವಾದುದಕ್ಕೆ ಪಣೆ+ಕಣ್ = ಪಣೆಗಣ್, ಮಂತು+ಕೋಲ್=ಮಂತುಗೋಲ್, ಕಣ್ + ಕಡೆ= ಕಣ್ಗಡೆ,
ತ ಕಾರವು ದ ಕಾರವಾದುದಕ್ಕೆ ಆನೆ+ತೊವಲ್= ಆನೆದೊವಲ್, ಪಲ್ + ತುದಿ= ಪಲ್ದುದಿ,
ಪ ಕಾರವು ಬ ಕಾರವಾದುದಕ್ಕೆ ಕಣ್ +ಪನಿ= ಕಣ್ಬನಿ, ಬಾನ್ +ಪೊಳೆ–ಬಾನ್ಬೊಳೆ.

॥ **ವಿಚಾರಂ** ॥ ಒಂದು ಎರಡು ಎಂಬುವಕ್ಕೂ ಐಕಾರಕ್ಕಾದೇಶವಾದ ರಕಾರಕ್ಕೂ,

ಜಿ, ಟಿ ಕ್ಕೂ ಪರವಾದ ಕ,ತ, ಪ. ಗಳಿಗೆ ಗ, ದ, ಬ ಗಳಿಲ್ಲ.

ಉದಾಹರಣಂ : ಒರ್ಕೋಂಬು, ಒರ್ತುಟಿ, ಒರ್ಪನಿ, ಇರ್ಕುಡಿ, ಇರ್ತಲೆ, ಇರ್ಪನಿ, ಬೇರ್ಪಡು, ಕಾಟ್ಕಿಚ್ಚು.

ಸ್ವರಗಳಿಗೂ, ಆದೇಶವಲ್ಲದ ವ್ಯಂಜನಗಳಿಗೂ, ಪರವಾದ ಪ, ಬ, ಮ, ಎಂಬುವುಗಳಿಗೆ ಕೆಲವು ಕಡೆ ವಕಾರಾದೇಶವಾಗುವುದು,

ಉದಾಹರಣಂ : ಮರ+ ಪಾವು = ಮರವಾವು, ನೀರ್+ಪನಿ = ನೀರ್ವನಿ, ತೊಡೆ+ಬೆಳಗು = ತೊಡೆವೆಳಗು, ತೋಳ್ + ಬಲ= ತೋಳ್ವಲ, ಬಗೆ+ಮನೆ = ಬಗೆವನೆ, ಮೇಲ್ + ಮಾತು–ಮೇಲ್ವಾತು.

(3) ಯಕಾರಲಕಾರಗಳನುಳಿದ ಪೂರ್ವಪದಾಂತ ವ್ಯಂಜನಕ್ಕೆ ಪರವಾದ "ಸ" ಕಾರವು ಕೆಲವು ಕಡೆ ಚ, ಜ, ಛ. ಕಾರವಾಗುವುದು.

ಉದಾಹರಣಂ : ನುಣ್+ಸರ=ನುಣ್ಚರ ಮುನ್+ಸೂರ್ = ಮುಂಜೂರ್, ಪನ್ನೆರಳ್ + ಸಾಸಿರ +=ಪನ್ನೆರಳ್ಛಾಸಿರ.

॥ **ವಿಚಾರಂ** ॥ ಕೆಲವು ಕಡೆಯಿಲ್ಲ.

ಉದಾಹರಣಂ : ಕಣ್ಸನ್ನೆ, ಪಣ್ಸವಿ,

ಯಕಾರ ಲಕಾರಗಳಾಗಿಲ್ಲದುದಕ್ಕೆ **ಉದಾಹರಣಂ** : ಬಾಯ್ಸವಿ, ಬಲ್ಸರಲ್, ಕಯ್ಸಾಲ, ಪಲ್ಸಂದು

(4) ಹ್ರಸ್ವೈಕಸ್ವರದ ಕಡೆಯಲ್ಲಿರುವ, ಣ್, ನ್, ಯ್, ಲ್, ಳ್, ಗಳಿಗೆ ಸ್ವರಪರವಾದೊಡೆ ದ್ವಿತ್ವವಾಗುವುದು .

ಉದಾಹರಣಂ : ಣ ಕಾರಕ್ಕೆ ಕಣ್ + ಆಟಂ =ಕಣ್ಣಾಟಂ, ಪೆಣ್ +ಉಡೆ = ಪೆಣ್ಣುಡೆ

ನ ಕಾರಕ್ಕೆ ಬೆನ್ + ಅಂ = ಬೆನ್ನಂ, ಬೆನ್ + ಅಪ್ಪಳಿಸು = ಬೆನ್ನಪ್ಪಳಿಸು.

ಯ ಕಾರಕ್ಕೆ ಬಯ್ + ಅಂ = ಬಯ್ಯಂ, ಕಯ್ + ಆಟಂ = ಕಯ್ಯಾಟಂ

ಲ ಕಾರಕ್ಕೆ ಕಲ್ + ಇಂ = ಕಲ್ಲಿಂ, ಪಲ್ + ಈಯಂ = ಪುಲ್ಲೀಯಂ

ಳ ಕಾರಕ್ಕೆ ಮುಳ್+ಅಂ=ಮುಳ್ಳಂ, ಎಳ್ +ಎಣ್ಣೆ = ಎಳ್ಳೆಣ್ಣೆ

॥ **ವಿಚಾರಂ** ॥ ಪೂರ್ವದೀರ್ಘಸ್ವರಕ್ಕೂ, ಅವ್ಯಯಕ್ಕೂ, ಬಹುವರ್ಣಗಳಿಗೂ, ದ್ವಿತ್ವವಿಲ್ಲ. ಮತ್ತೆ ಇವುಗಳಿಂದಂತವಾದ ಧಾತುಗಳಿಗೆ ಅಲ್ ಪರವಾದೊಡೆ ದ್ವಿತ್ವವಿಲ್ಲ. ಯಕರಾಂತ ಧಾತುಗೆ ವಿಕಲ್ಪಂ.

ಉದಾಹರಣಂ : ಣಕಾರಕ್ಕೆ, ಗೋಣ್+ಅಂ=ಗೋಣಂ, ಗೇಣ್+ಅಂ=ಗೇಣಂ,

ನ ಕಾರಕ್ಕೆ ಬಾನ್ +ಅಲ್ಲಿ = ಬಾನಲ್ಲಿ. ಸೀನ್ + ಅಂ = ಸೀನಂ
ಯ ಕಾರಕ್ಕೆ ಬಾಯ್ + ಎಂಟು = ಬಾಯೆಂಟು ಕಾಯ್+ಇತ್ತಂ = ಕಾಯಿತ್ತಂ
ಲ ಕಾರಕ್ಕೆ ಕಾಲ್+ಎಲ್ಲ-ಕಾಲೆಲ್ಲ, ಕೋಲ್+ಇಂ=ಕೋಲಿಂ
ಳ ಕಾರಕ್ಕೆ ಆಳ್+ಒಂದು=ಆಳೊಂದು, ಕಾಳ್+ಎಲ್ಲ=ಕಾಳೆಲ್ಲ,
ಅವ್ಯಯಕ್ಕೆ - ದಲ್+ಎಂಬರಾನುಡಿಯಂ = ದಲೆಂಬರಾನುಡಿಯಂ,
ಬಹುವರ್ಣಕ್ಕೆ - ಅವನ್+ಇಂ=ಅವನಿಂ, ಕವಲ್+ಎಲ್ಲಂ=ಕವಲೆಲ್ಲಂ,
ಧಾತುಗಳಿಗೆ - ಉಣ್ + ಅಲ್ + ಇತ್ತಂ = ಉಣಲಿತ್ತಂ
ತಿನ್+ಅಲ್+ಇರ್ದಂ = ತಿನಲಿರ್ದಂ, ಬಯ್+ಅಲ್+ಬಂದಂ = ಬಯಲ್ಬಂದಂ
ನಿಲ್ +ಅಲ್ +ಪೋದ = ನಿಲಲ್ಪೋದಂ, ಕಳ್+ಅಲ್-ಬಂದಂ-ಕಳಲ್ಬಂದಂ!

"ಉಯ್, ನೆಯ್, ಸುಯ್, ಬಯ್, ಎಂಬುವುಗಳಿಗೆ ಅಲ್" ಪರವಾದೊಡಂ, ವಿಭಕ್ತಿ ಸ್ವರಪರವಾದೊಡಂ, ದ್ವಿತ್ವವಾಗುವುದು, ಮತ್ತೆ ಣ, ನ, ಯ, ಲ, ಳ ಕಾರಾಂತಧಾತುಗಳಿಗೆ ಪ್ರತಿಷೇಧಾರ್ಥದಲ್ಲಿ "ಅದೆ" ಎಂಬುದು ಪರವಾದೊಡಂ, ದ್ವಿತ್ವವಾಗುವುದು.

ಉದಾಹರಣಂ : : ಅಲ್‌ಗೆ - ಉಯ್ಯಲ್, ನೆಯ್ಯಲ್, ಸುಯ್ಯಲ್, ಬಯ್ಯಲ್
ವಿಭಕ್ತಿಸ್ವರಕ್ಕೆ : ಉಯ್ಯಂ, ನೆಯ್ಯಂ, ಸುಯ್ಯಂ, ಬಯ್ಯಂ
ಪ್ರತಿಷೇಧದ ವಿಭಕ್ತಿಗೆ : ಉಣ್ಣಂ, ತಿನ್ನಂ, ಪೊಯ್ಯಂ, ನಿಲ್ಲಂ, ಕೊಳ್ಳಂ,
ಅದೆ ಎಂಬುವುದಕ್ಕೆ : ಉಣ್ಣದೆ, ತಿನ್ನದೆ, ಪೊಯ್ಯದೆ, ನಿಲ್ಲದೆ, ಕೊಳ್ಳದೆ

॥ ವಿಚಾರಂ ॥ "ಕಳ್" ಎಂಬ ಧಾತುಗೆ ದ್ವಿತ್ವವಿಲ್ಲ,
ಉದಾಹರಣಂ : ಕಳಲ್ಬಂದಂ, ಕಳಲ್ಬಂದಪಂ

ಸಂಧಿಪ್ರಕರಣಂ ಸಂಪೂರ್ಣಂ

III ನಾಮಪ್ರಕರಣಂ,

19, ನಾಮ ಪ್ರಕರಣದ ಭೇದಗಳು ಯಾವುವು ? ಉದಹರಿಸು?
ನಾಮವೆಂದು, ಸರ್ವನಾಮವೆಂದು, ಗುಣವಾಚಿಯೆಂದು 3 ಭೇದಗಳು

20, ಇದರಲ್ಲಿರುವ ವಿಶೇಷ ವಿಷಯವನ್ನು ವಿವರಿಸು ?
ವಿಭಕ್ತಿಯಿಲ್ಲದೆ, ಕ್ರಿಯಾರ್ಥವಿಲ್ಲದೆ, ಅರ್ಥವುಳ್ಳದ್ದು ಲಿಂಗವು. ಅದು ಕೃತ್ತೆಂದು, ತದ್ಧಿತವೆಂದು, ಸಮಾಸವೆಂದು, ನಾಮವೆಂದು, 4 ತೆರನಾಗಿರುವುದು.
(1) ಧಾತುವಿನಮೇಲೆ ಪ್ರಥಮ ಪುರುಷದ ವಿಭಕ್ತಿ ಪ್ರತ್ಯಯಗಳು ಸೇರಿದೊಡೆ ಭೂತ ಭವಿಷ್ಯತ್ಕಾಲಗಳಲ್ಲಿ ಕೃಲ್ಲಿಂಗವಾಗುವುದು.

ಕೃಲ್ಲಿಂಗ ರೂಪಮಾಲೆ

ಪುಲ್ಲಿಂಗ	ಸ್ತ್ರೀಲಿಂಗ	ನಪುಂಸಕಲಿಂಗ	ವಿಭಕ್ತಿ	ವಿಭಕ್ತಿ ಪ್ರತ್ಯಯ
ನೋಡಿದಂ	ನೋಡಿದಳ್	ನೋಡಿದುದು	ಪ್ರಥಮೆ	ಮ್
ನೋಡಿದನೆ!	ನೋಡಿದಳೆ!	ನೋಡಿದುದೆ!	ಪ್ರಥಮೆ	ಎ
ನೋಡಿದನಂ	ನೋಡಿದಳಂ	ನೋಡಿದುದಂ	ದ್ವಿತೀಯೆ	ಅಂ
ನೋಡಿದನಿಂ	ನೋಡಿದಳಿಂ	ನೋಡಿದುದರಿಂ	ತೃತೀಯೆ	ಇಂ
ನೋಡಿದಂಗೆ	ನೋಡಿದಳ್ಗೆ	ನೋಡಿದುದಕ್ಕೆ	ಚತುರ್ಥಿ	ಕೆ
ನೋಡಿದನತ್ತಣಿಂ	ನೋಡಿದಳತ್ತಣಿಂ	ನೋಡಿದುದತ್ತಣಿಂ	ಪಂಚಮಿ	ಅ
ನೋಡಿದನ	ನೋಡಿದಳ	ನೋಡಿದುದರ	ಷಷ್ಠಿ	ಅ
ನೋಡಿದನೊಳ್	ನೋಡಿದಳೊಳ್	ನೋಡಿದುದರೊಳ್	ಸಪ್ತಮಿ	ಒಳ್

ಇದರಂತೆ ಬಹುವಚನದಲ್ಲಿಯು ಪ್ರಯೋಗಿಪುದು

(2) ಕಾರ್ಯಾದಿಸ್ವಭಾವದಿಂ ಜಾತ್ಯಂತರಾದಿಗಳನ್ನು ಬೋಧಿಪುದು ತದ್ಧಿತಲಿಂಗವು
ಉದಾಹರಣಂ : ಗಂಧಿಗಂ, ದೇವಡಿಗಂ, ದೂಸಿಗಂ, ಪೂವಳಂ, ಸೆಜ್ಜೆವಳಂ, ಇತ್ಯಾದಿ,

(3) ಎರಡುನಾಮಪದಗಳು ಅರ್ಥಾನುಸಾರಮಾಗಿ ಮಧ್ಯ ವಿಭಕ್ತ್ಯಾದಿ ಪ್ರತ್ಯಯಗಳಂ ಲೋಪಿಸಿ ಕೂಡಿದೊಡೆ ಸಮಾಸಲಿಂಗವಾಗುವುದು,
(ಕನ್ನಡದಲ್ಲಿ) ಗಿಳಿವರಿ, ಕಿರಿದೊಡೆ, ಮೂಗೇಣು, ನಿಡುಮೂಗಿ, ಪೂದಳಿರ್ , ಅಂಗಯ್.
(ಸಂಸ್ಕೃತದಲ್ಲಿ) ದೇವಲೋಕಂ, ನೀಲಗಿರಿ, ತ್ರಿಲೋಕಂ, ನೀಲಾಂಬರಂ, ರಾಮಕೃಷ್ಣ, ಬಹಿರುದ್ಯಾನಂ.

(4) ವಸ್ತುವಿನಪೆಸರಂಪೇಳ್ವುದು ನಾಮಲಿಂಗವು.
ಉದಾಹರಣಂ : (ಕನ್ನಡ) – ಅಯ್ಯಂ, ಅಕ್ಕಂ, ತಮ್ಮಂ, ಪೊದರ್, ಪುಲ್, ಇತ್ಯಾದಿ.
(ಸಂಸ್ಕೃತ) – ಆರ್ಯಂ, ಉಮೆ, ಕುಮಾರಂ, ಕಮಲಂ, ಕುವಲಂ, ಇತ್ಯಾದಿ.
॥(ವಿಚಾರಂ)॥ (1)ಕನ್ನಡದಲ್ಲಿ ಕ್ರಿಯಾರ್ಥವನ್ನು ಕೊಡುವ ಸಂಸ್ಕೃತ ಭಾವವಾಚಿಗಳಿಗೆ "ಇಸು" ಪ್ರತ್ಯಯವನ್ನು ಸೇರಿಸಿದೊಡೆ ಕೃಲ್ಲಿಂಗವಾಗುವುದು.
ಉದಾಹರಣಂ : ಭೋಗಿಸಿದಂ, ರಾಗಿಸಿದಂ. ಈಕ್ಷಿಸಿದಂ, ಇತ್ಯಾದಿ.
(2) ಕ್ರಿಯೆಯೂ, ವಾಕ್ಯವೂ ನಾಮವಾದಲ್ಲಿ ಲಿಂಗವಾಗುವುದು, ಉದಾಹರಣಮನೂಹಿಪುದು.

21. ನಾಮವಾಚಿಯನ್ನು ವಿವರಿಸು ?

ಇದು ರೂಢನಾಮವೆಂದು, ಭಾವ(ಅನ್ವರ್ಥ) ನಾಮವೆಂದು, ಅಂಕಿತನಾಮವೆಂದು ಮೂರು ವಿಧವು.
ಭಾವನಾಮದಲ್ಲಿ ಗುಣಾನುರೂಪನೆಂದು, ಅರ್ಥಾನುರೂಪವೆಂದು ಎರಡು ಪ್ರಕಾರಮುಂಟು,
॥ ವಿವರಂ॥ (1) ಸಾಮಾನ್ಯಾರ್ಥವನ್ನು ಕೊಡುವುದು **ರೂಢನಾಮವು**
(2) ವಿಶೇಷಾರ್ಥವನ್ನು ಕೊಡುವುದು **ಅನ್ವರ್ಥ ನಾಮವು**
(3) ವಸ್ತುವಿನ ಪೆಸರಂ ಪೇಳ್ವುದು **ಅಂಕಿತ ನಾಮವು.**
ಉದಾಹರಣಂ : ರೂಢನಾಮಕ್ಕೆ ಮರಂ, ಸರಂ, ಧುರಂ, ಪಸರಂ, ಇತ್ಯಾದಿ

ಗುಣಾನುರೂಪಾನ್ವರ್ಥಕ್ಕೆ ಗುಣಿ, ಋಣಿ, ವಿದ್ಯಾರ್ಥಿ, ಧರ್ಮಿ ಇತ್ಯಾದಿ
ಅರ್ಥಾನುರೂಪಾನ್ವರ್ಥಕ್ಕೆ ಮುಕ್ಕಣ್ಣಂ, ಬಿಡುಗಣ್ಣಂ, ಕಣ್ಣಡಿಯಂ ಇತ್ಯಾದಿ.
ಅಂಕಿತನಾಮಕ್ಕೆ ತಿಪ್ಪಂ, ಕಪ್ಪಂ, ಕೆಂಚಂ, ಮಿಂಚಂ ಇತ್ಯಾದಿ.

॥ **ವಿಚಾರಂ** ॥ ರೂಢನಾಮವು ತನ್ನ ನಿಯತಾರ್ಥವನ್ನು ಬಿಟ್ಟು ವಿಶೇಷಿಸಲ್ಪಟ್ಟರೆ ಅಂಕಿತನಾಮವಾಗುವುದು.

ಉದಾಹರಣಂ : ರೂಢನಾಮಕ್ಕೆ – ಪುಲಿ, ಇಲಿ, ನುಲಿ. ರೂಢನಾಮದ ಅಂಕಿತನಾಮಕ್ಕೆ ಪೆರ್ಬುಲಿ, ಮೂಗಿಲಿ, ನಲ್ನುಲಿ.

॥ **ವಿಶೇಷ ಜ್ಞಾಪಕಂ** ॥ ಕನ್ನಡದಲ್ಲಿ ನಾಮವು, ಸಮಾಸವಿಲ್ಲದ ಒಂದುವರ್ಣ ಮೊದಲ್ಗೆದು ವರ್ಣಂಗಳ ಪರ್ಯಂತರಮಿರ್ಪುದು.

ಉದಾಹರಣಂ : ಪೂ, ಕೂಸು, ಕೊಡಕೆ, ಚಮ್ಮಟಿಕೆ, ಸಿರಿವಂತಿಗೆ.

22. ಸರ್ವನಾಮವನ್ನು ವಿವರಿಸು ?

ಇದು ನಾಮವಾಚಿಯಂತೆ ಕ್ಲುಪ್ತವಾದ ಹೆಸರಿಲ್ಲದಿರುವುದು. ಇದರಲ್ಲಿ ಪುರುಷತ್ರಯಾರ್ಥಕ ಸರ್ವನಾಮವೆಂದು, ಆತ್ಮಾರ್ಥಕ ಸರ್ವನಾಮವೆಂದು, ಪ್ರಶ್ನಾರ್ಥಕ ಸರ್ವನಾಮವೆಂದು, ನಿದರ್ಶಕ ಸರ್ವನಾಮವೆಂದು ನಾಲ್ಕು ತೆರನಾಗಿರುವುದು.

(1) ಪುರುಷತ್ರಯಾರ್ಥಕ ಸರ್ವನಾಮದಲ್ಲಿ ಉತ್ತಮ ಪುರುಷವೆಂದು ಮಧ್ಯಮಪುರುಷವೆಂದು, ಪ್ರಥಮಪುರುಷವೆಂದು ಮೂರು ವಿಧವು. ಪ್ರಥಮಪುರುಷದಲ್ಲಿ ಪುಂ ಸ್ತ್ರೀ ನಪುಂಸಕ ಲಿಂಗಗಳು ಬರುವುವು.

॥ **ವಿವರಂ** ॥ (1) ಉತ್ತಮ ಮಧ್ಯಮ ಪುರುಷಗಳಲ್ಲಿ ಲಿಂಗಭೇದವಿಲ್ಲ.

(2) ಆತ್ಮಾರ್ಥಕ ಸರ್ವನಾಮವು ಸ್ವಾರ್ಥವನ್ನು ಸೂಚಿಸುವುದು.

(3) ಪ್ರಶ್ನಾರ್ಥಕ ಸರ್ವನಾಮವು ಉತ್ತರವನ್ನಪೇಕ್ಷಿಸಿ ಕೇಳುವುದರಲ್ಲಿ ಬರುವುದು.

(4) ನಿದರ್ಶಕ ಸರ್ವನಾಮವು ಅಭಿಮುಖವಸ್ತುವನ್ನು ನೋಡಿಸುವುದು.

ಉದಾಹರಣಂ : ಸರ್ವನಾಮಕ್ಕೆ – ಅದು, ಇದು, ಉದು, ಆವುದು, ಎಲ್ಲದು, ಪೆರತು, ಪೆರದು, ಏನ್ ಇತ್ಯಾದಿ.

ಸರ್ವನಾಮ ರೂಪಮಾಲೆ

ವಚನ	ಉತ್ತಮ ಪುರುಷ	ಮಧ್ಯಮ ಪುರುಷ	ಪ್ರಥಮ ಪುರುಷ			ಆತ್ಮಾರ್ಥಕ ಸರ್ವನಾಮ	ಪ್ರಶ್ನಾರ್ಥಕ ಸರ್ವನಾಮ	ನಿರ್ದೇಶನಾತ್ಮಕ ಸರ್ವನಾಮ
			ಪು	ಸ್ತ್ರೀ	ನ			
ಏ	ಅಂ(ಮ್)	ನೀಂ	ಅವಂ	ಅವಳ್	ಅದು	ತಾಂ	ಅವಂ	ಈತಂ
ಬ	ಅವ್	ನೀವ್	ಅವರ್	ಅವರ್	ಅವು	ತಾವ್	ಆರ್	ಇವರ್
ಏ	ಎನ್ನಂ	ನಿನ್ನಂ	ಅವನಂ	ಅವಳಂ	ಅದಂ	ತನ್ನಂ	ಅವನಂ	ಈತನಂ
ಬ	ಎಮ್ಮಂ	ನಿಮ್ಮಂ	ಅವರಂ	ಅವರಂ	ಅವಂ(ಅವುಗಳಿಂ)	ತಮ್ಮಂ	ಆವರಂ	ಈತನಂ
ಏ	ಎನ್ನಿಂ	ನಿನ್ನಿಂ	ಅವನಿಂ	ಅವಳಿಂ	ಅದರಿಂ	ತನ್ನಿಂ	ಅವನಿಂ	ಈತನಿಂ
ಬ	ಎಮ್ಮಿಂ	ನಿಮ್ಮಿಂ	ಅವರಿಂ	ಅವರಿಂ	ಅವುಗಳಿಂ	ತಮ್ಮಿಂ	ಆರಿಂ	ಇವರಿಂ
ಏ	ಎನಗೆ	ನಿನಗೆ	ಅವಂಗೆ	ಅವಳ್ಗೆ	ಅದಕ್ಕೆ	ತನಗೆ	ಆವಂಗೆ	ಈತಂಗೆ
ಬ	ಎಮಗೆ	ನಿಮಗೆ	ಅವರ್ಗೆ	ಅವರ್ಗೆ	ಅವುಗಳ್ಗೆ	ತಮಗೆ	ಆರ್ಗೆ	ಇವರ್ಗೆ
ಏ	ಎನ್ನತ್ತಣಿಂ	ನಿನ್ನತ್ತಣಿಂ	ಅವನತ್ತಣಿಂ	ಅವಳತ್ತಣಿಂ	ಅದರತ್ತಣಿಂ	ತನ್ನತ್ತಣಿಂ	ಅವನತ್ತಣಿಂ	ಈತನತ್ತಣಿಂ

ಸರ್ವನಾಮ ರೂಪಮಾಲೆ								
ವಚನ	ಉತ್ತಮ ಪುರುಷ	ಮಧ್ಯಮ ಪುರುಷ	ಪ್ರಥಮ ಪುರುಷ			ಆತ್ಮಾರ್ಥಕ ಸರ್ವನಾಮ	ಪ್ರಶ್ನಾರ್ಥಕ ಸರ್ವನಾಮ	ನಿರ್ದೇಶನಾತ್ಮಕ ಸರ್ವನಾಮ
			ಪು	ಸ್ತ್ರೀ	ನ			
ಬ	ಎಮ್ಮತ್ತಣಿಂ	ನಿಮ್ಮತ್ತಣಿಂ	ಅವರತ್ತಣಿಂ	ಅವರತ್ತಣಿಂ	ಅವುಗಳತ್ತಣಿಂ	ತಮ್ಮತ್ತಣಿಂ	ಅವರತ್ತಣಿಂ	ಇವರತ್ತಣಿಂ
ಏ	ಎನ್ನ(ಎನ್ನಯ)	ನಿನ್ನ(ನಿನ್ನಯ)	ಅವನ	ಅವಳ	ಅದರ	ತನ್ನ(ತನ್ನಯ)	ಅವನ	ಈತನ
ಬ	ಎಮ್ಮ(ಎಮ್ಮಯ)	ನಿಮ್ಮ(ನಿಮ್ಮಯ)	ಅವರ	ಅವರ	ಅವುಗಳ	ತಮ್ಮ(ತಮ್ಮಯ)	ಆರ	ಇವರ
ಏ	ಎನ್ನೊಳ್	ನಿನ್ನೊಳ್	ಅವನೊಳ್	ಅವಳೊಳ್	ಅದರೊಳ್	ತನ್ನೊಳ್	ಅವನೊಳ್	ಈತನೊಳ್
ಬ	ಎಮ್ಮೊಳ್	ನಿಮ್ಮೊಳ್	ಅವರೊಳ್	ಅವರೊಳ್	ಅವುಗಳೊಳ್	ತಮ್ಮೊಳ್	ಆರೊಳ್	ಇವರೊಳ್

॥ವಿವರಂ॥ ನಿದರ್ಶಕ ಸರ್ವನಾಮಗಳಾದ ಅದು, ಇದು, ಉದು. ಆತಂ, ಈತಂ, ಊತಂ, ಆಕೆ, ಈಕೆ, ಊಕೆ ಎಂಬುವುಗಳ ವಿಭಕ್ತಿರೂಪಗಳನಿಂತೂಹಿಪುದು. ಏನ್ ಎಂಬ ಸರ್ವನಾಮವು ಲಿಂಗತ್ರಯದಲ್ಲಿ ಏಕವಚನವಾಗುವುದು. ಕೆಲವೆಡೆ ಬಹುವಚನವು.

ಉದಾಹರಣಂ : ಅವನೇನವಳೇನದೇನವರೇನ್,

ಏನೆಂಬುದರ ಪ್ರಯೋಗಂ

ಏನ್, ಏತರ್	ಪ್ರ.
ಏನಂ	ದ್ವಿ.
ಏತರಿಂ	ತೃ
ಏತಕ್ಕೆ, ಏಕೆ	ಚ.
ಏತರತ್ತಣಿಂ	ಪಂ.
ಏತರ	ಷ.
ಏತರೊಳ್	ಸ.

ಸರ್ವನಾಮ ವಿಶೇಷವಿಧಿಗಳು ಯಾವುವು ಎಂದೊಡೆ,

(1) ಎನ್ನದು, ನಿನ್ನದು, ತನ್ನದು ಎಂಬುವು. ಏಕವಚನದಲ್ಲಿ ಎನತು, ನಿನತು, ತನತು. ಬಹುವಚನದಲ್ಲಿ ಎಮತು, ನಿಮತು, ತಮತು. ಎಂದಾಗುವುವು.

ವಿಚಾರಂ (1) ಇವುಗಳ ತುಕಾರವು ದ್ವಿತ್ವವಾಗುವುದು.

ಉದಾಹರಣಂ : : ಎನತು- ಎನತ್ತು, ತಮತು- ತಮತ್ತು

(2) ಅದು, ಇದು, ಉದು. ಇವು ಪುಲ್ಲಿಂಗವಾದೊಡೆ ಅವಂ, ಇವಂ, ಉವಂ ಸ್ತ್ರೀಲಿಂಗವಾದೊಡೆ ಅವಳ್, ಇವಳ್, ಉವಳ್, ಎಂದಾಗುವುವು,

॥ **ವಿವರಂ** ॥ ಇವುಗಳ ಗೌರವಾರ್ಥಕದ ಏಕವಚನದಲ್ಲಿ ಪುಲ್ಲಿಂಗಕ್ಕೆ ಆತಂ, ಈತಂ ಊತಂ. ಸ್ತ್ರೀ ಲಿಂಗಕ್ಕೆ ಆಕೆ, ಈಕೆ, ಊಕೆ. ಬಹುವಚನದಲ್ಲಿ ಪುಲ್ಲಿಂಗಕ್ಕೆ, ಆತಂಗಳ್ (ಆತಗಳ್) ಈತಂಗಳ್ (ಈತಗಳ್) ಊತಂಗಳ್ (ಊತಗಳ್): ಸ್ತ್ರೀಲಿಂಗಕ್ಕೆ ಆಕೆಗಳ್, ಈಕೆಗಳ್, ಊಕೆಗಳ್' ಎಂದಾಗುವುದು,

23. ಗುಣವಾಚಿಯನ್ನು ವಿವರಿಸು ?

ವಸ್ತುವಿನ ಗುಣವನ್ನು ತಿಳಿಸುವುದು ಗುಣವಾಚಿ.

ಉದಾಹರಣಂ : ಉನ್ನತ, ನಿಮ್ನ, ಒಳ್ಳಿತು, ಮೆಲ್ಲಿತು, ಬೆಟ್ಟಿತು, ಪೊಸತು, ಪಳದು, ಬಸಿದು, ಅಸಿದು, ಕಡಿದು, ನಿಡಿದು, ಇನಿದು. ಇತ್ಯಾದಿ.

ಆ ಗುಣವಾಚಿಯು ಸಂಸ್ಕೃತ ಗುಣವಾಚಿಯೆಂದು, ಕನ್ನಡ ಗುಣವಾಚಿಯೆಂದು 2 ತೆರನಾಗಿರುವುದು,

(1) **ಸಂಸ್ಕೃತಗುಣವಾಚಿಯಲ್ಲಿ** ವಸ್ತುವಿನ ಸಹಜಗುಣವನ್ನು ಹೇಳುವುದು, "ನೈಜ"ವೆಂದು ವಿಶೇಷಗುಣವನ್ನು ಹೇಳುವುದು "ತರ"ವೆಂದು, ಅತಿವಿಶೇಷಗುಣವನ್ನು ಹೇಳುವುದು "ತಮ" ಎಂದು, 3 ತೆರನಾಗಿರುವುದು,

ಉದಾಹರಣಂ :

ನೈಜಕ್ಕೆ	**ತರಕ್ಕೆ**	**ತಮಕ್ಕೆ**
ಮಂಗಳ,	ಮಂಗಳತರ,	ಮಂಗಳತಮ
ಮಂಗಳಗೀತಂ	ಮಂಗಳತರಗೀತಂ	ಮಂಗಳತಮಗೀತಂ
ಮೃದುವಾಕ್ಯಂ,	ಅತಿಮೃದುವಾಕ್ಯ	ಅತ್ಯಂತಮೃದುವಾಕ್ಯಂ

(2) **ಕನ್ನಡ ಗುಣವಾಚಿಯಲ್ಲಿ**, ನಾಮಪದದಾದಿಯಲ್ಲಿರ್ದು ಗುಣಮಂ ಪೇಳ್ವುದು **ಶುದ್ಧ ಗುಣವಾಚಿಯೆಂದು**, ಸರ್ವನಾಮದೊಡನೆ ಸೇರಿ ಗುಣಮಂ ಪೇಳ್ವುದು **ನಿಷ್ಪನ್ನ ಗುಣವಾಚಿಯೆಂದು**, ಸಂಖ್ಯೆಯಿಂ ಗುಣವನ್ನು ಪೇಳ್ವುದು **ಸಂಖ್ಯಾ ಗುಣವಾಚಿಯೆಂದು**, "ಅನೆಯ" ಎಂಬುದರೊಡನೆ ಸಂಖ್ಯೆಯಿಂ ಗುಣವನ್ನು ಪೇಳ್ವುದು **ಸಂಖ್ಯಾನಿರ್ದಿಷ್ಟಗುಣವಾಚಿಯೆಂದು**, ಪ್ರಮಾಣಿಸಿ ಗುಣವನ್ನು ಪೇಳ್ವುದು **ಪರಿಮಾಣ ಗುಣವಾಚಿಯೆಂದು**, ಪ್ರಶ್ನೆಯಿಂ ಗುಣವನ್ನು ಕೇಳ್ವುದು **ಪ್ರಶ್ನಾರ್ಥಕಗುಣವಾಚಿಯೆಂದು** ಪ್ರಶ್ನಾಭಿಪಾಯಕ್ಕೆ ಉತ್ತರಮನೀವುದು **ನಿದರ್ಶಕ ಗುಣವಾಚಿಯೆಂದು** ಏಳು ತೆರನಾಗಿರುವುದು.

ಉದಾಹರಣಂ : (1) **ಶುದ್ಧ ಗುಣವಾಚಿಗೆ**, ನಿಡುಗಣ್, ಮೆಲ್ಲುಲಿ, ಪಳಗನ್ನಡಂ, ಪೊಸನೂಲ್, ಒಳ್ಗನ್ನಡಂ, ಕಡುಕುದುರೆ, ನಿಡುದೋಳ್, ಇತ್ಯಾದಿ.

(2) **ನಿಷ್ಪನ್ನಗುಣವಾಚಿಗೆ** : ಕರಿಯಂ, ಪಿರಿಯಂ, ಕಿರಿಯಂ, ಮೆಲ್ಲಿದಂ,

ಪೊಲ್ಲದಂ, ಪೊಸಂಬಂ, ಪಳಬಂ, ಇತ್ಯಾದಿ.

(3) **ಸಂಖ್ಯಾ ಗುಣವಾಚಿಗೆ** : ಒರ್ವಂ, ಈರ್ವರ್, ಐವರ್ ಏಳ್ವರ್, ಇತ್ಯಾದಿ.

(4) **ಸಂಖ್ಯಾನಿರ್ದಿಷ್ಟ ಗುಣವಾಚಿಗೆ** : ಒಂದನೆಯವಂ, ಐದನೆಯವಂ, ಪತ್ತನೆಯವಂ.

(5) **ಪರಿಮಾಣಗುಣವಾಚಿಗೆ** : ಕೆಲಂಬರ್, ಪಲಂಬರ್, ಎಲ್ಲವರ್, ಇತ್ಯಾದಿ.

(6) **ಪ್ರಶ್ನಾರ್ಥಕ ಗುಣವಾಚಿಗೆ** : ಎಂತಪ್ಪ, ಎಂತಪ್ಪರ್ ಎಂತಪ್ಪುದು, ಇತ್ಯಾದಿ

(7) **ನಿದರ್ಶಕಗುಣವಾಚಿಗೆ** : ಇಂತಪ್ಪಂ, ಇಂತಪ್ಪರ್, ಇಂತಪ್ಪುದು, ಅಂತಪ್ಪಂ, ಅಂತಪ್ಪರ್, ಅಂತಪ್ಪುದು. ಉಂತಪ್ಪಂ, ಉಂತಪ್ಪ, ಉಂತಪ್ಪುದು.

॥ **ವಿಚಾರಂ** ॥ (1) ಕನ್ನಡದಲ್ಲಿ ತು, ದು ಕಡೆಯಾಗಿರುವ ಶಬ್ದವು ಗುಣವಾಚಿಯಪ್ಪುದು. "ತು" ಎಂಬುದಕ್ಕೊರ್ಮೆ ದ್ವಿತ್ವಮುಂಟು.

(2) ಎಳದು, ಪಳದು, ಎಂಬುವು ಪುಲ್ಲಿಂಗದಲ್ಲಿ ಎಳೆಯಂ, ಪಳೆಯಂ, ಸ್ತ್ರೀಲಿಂಗದಲ್ಲಿ ಎಳೆಯಳ್, ಪಳೆಯಳ್ ಎಂದಾಗುವುದು.

24. ಲಿಂಗಭೇದವನ್ನು ವಿವರಿಸು

ಸಂಖ್ಯಾವ್ಯಯಗಳಲ್ಲದೆ ಸಾಧಾರಣ ಸಂಸ್ಕೃತದ ನಾಮಪ್ರಕೃತಿಗಳು ಕನ್ನಡದಲ್ಲಿ ಲಿಂಗವಾಗುವುವು.

ಸಂಸ್ಕೃತ ಪ್ರಕೃತಿಗಳು– ಬಲ, ಶಿವ, ಗೋವಿಂದ, ಇತ್ಯಾದಿ.

ಕನ್ನಡಲಿಂಗಗಳು – ಬಲಂ, ಶಿವಂ, ಗೋವಿಂದಂ,

॥ **ವಿಚಾರಂ** ॥ ಇವುಗಳನ್ನು ಕನ್ನಡ ಶಬ್ದದೊಂದಿಗೆ ಸಮಾಸಮಾಡಲಾಗದು.

25. ಸಂಸ್ಕೃತ ಸ್ವರಾಂತಶಬ್ದಗಳು ಕನ್ನಡಕ್ಕೆ ಬರುವಾಗ ವಿಧಿಯೇನು?

(1) ಸಂಸ್ಕೃತದ ಅವ್ಯಯ, ಸರ್ವನಾಮ, ಶತೃಙಾಂತ ಇವುಗಳು ಸಮಾಸವಾಗಿ ಕನ್ನಡದಲ್ಲಿ ಲಿಂಗವಾಗುವುವು.

ಉದಾಹರಣಂ : ಅವ್ಯಯಕ್ಕೆ, ಅಂತರ್ಜಲಂ, ಪುನರ್ವಾಕ್ಯಂ, ಪ್ರಾತಃಕಾಲಂ.

ಸರ್ವನಾಮಕ್ಕೆ : ಇದಂಕಾರ್ಯಂ, ತತ್‌ಕಾಲಂ ಭವದಾಶ್ರಯಂ.

ಶತೃಙಾಂತಕ್ಕೆ ಲಸತ್ಕಂಕಣಂ, ಚಳತ್ತಟದಂಕುರಂ, ಚಂಚಚ್ಚಕೋರಂ

॥ **ವಿವರಂ** ॥ (1) ತಕಾರಾಂತ ಸಂಸ್ಕೃತ ಕೃದ್ವಾಚಿಗಳನ್ನು ಶತೃಙಾಂತವೆಂದು

ತಿಳಿವುದು.

(2) ಏಕ, ದ್ವಿ, ತ್ರಿ, ಚತುರ್, ಪಂಚ, ಷಟ್, ಸಪ್ತ, ಅಷ್ಟ, ನವ, ದಶ. ಇವು ಪ್ರತ್ಯಯವನ್ನು ಅಥವಾ ಸಮಾಸವನ್ನು, ಆಕಾರಾಂತಶಬ್ದಗಳು ಎಕಾರಾಂತವನ್ನು ಅಥವಾ ಅಕಾರಾಂತವನ್ನು, ಪಡೆದು ಲಿಂಗವಾಗುವುವು.

ಉದಾಹರಣಂ : ಸಂಖ್ಯೆಗೆ, ಏಕಕಾರ್ಯಂ, ದ್ವಿಮುಖಂ, ತ್ರಿವಿಧಂ, ಚತುರಂಗಂ, ಪಂಚಾಂಗಂ, ಷಡ್ಗುಣಂ, ಸಪ್ತಸಮುದ್ರಂ, ಅಷ್ಟವಸು, ನವನಿಧಿ, ದಶಾವತಾರಂ, ದ್ವಿತಯಂ. ಆಕಾರಾಂತದ ಎಕಾರಕ್ಕೆ, ಬಾಲೆ, ಶೀಲೆ, ನಿದ್ರೆ, ಲತೆ.

ಆಕಾರಾಂತದ ಅಕಾರಕ್ಕೆ 'ಕರುಣಾ–ಕರುಣ, ಕಂದರಾ–ಕಂಧರ, ಭಿಕ್ಷಾ=ಭಿಕ್ಷ(ಭಿಕ್ಷೆ).

(3) ಅಕಾರಾಂತವಾದ ಕೆಲ ಶಬ್ದಗಳು ಎಕಾರಾಂತವಾಗಿಯೂ, ಈಕಾರಾಂತ ಉಕಾರಾಂತ ಊಕಾರಾಂತಶಬ್ದಗಳು ಪ್ರಕೃತಿಯಾಗಿಯೂ, ಏಕಾಕ್ಷರ ಶಬ್ದಗಳು ಇದ್ದಂತೆಯೂ ಲಿಂಗವಾಗುವುವು.

ಉದಾಹರಣಂ : ಅಕಾರಾಂತದ ಎಕಾರಕ್ಕೆ, ವಧ = ವಧೆ, ಪ್ರಶ್ನ –ಪ್ರಶ್ನೆ.

ಈಕಾರಾಂತಕ್ಕೆ, ಲಕ್ಷ್ಮೀ, ಲಕ್ಷ್ಮಿ, ಸರಸ್ವತೀ, ಸರಸ್ವತಿ.

ಊ ಕಾರಾಂತಕ್ಕೆ, ತನೂ = ತನು, ಕಂಡೂ = ಕಂಡು.

ಏಕಾಕ್ಷರಕ್ಕೆ ಶ್ರೀ, ಧೀ, ಮಾ, ಭೂ ಸ್ತ್ರೀ. ಶ್ರೀ+ಅಂ = ಶ್ರೀಯಂ

(2) ಅಕಾರಾಂತ, ಇಕಾರಾಂತ ಋಕಾರಾಂತ ಶಬ್ದಗಳು ವ್ಯತ್ಯಾಸವಾಗವು.

ಉದಾಹರಣಂ : : ಅ, ಇ, ಉ, ಋಕಾರಗಳಿಗೆ, ಶಿವಂ, ರಾಮಂ; ಹರಿ, ಅರಿ; ಶಂಭು, ಗುರು; ಪಿತೃ, ಭ್ರಾತೃ.

॥ ವಿಚಾರಂ ॥ ಋಕಾರಾಂತಶಬ್ದಕ್ಕೆ ಆರ್ ಎಂಬುದು, ಧಾತೃಶಬ್ದಕ್ಕೆ ಅಕಾರವು, ವಿಧಾತೃಶಬ್ದಕ್ಕೆ ರ ಕಾರವು ಆದೇಶವಾಗುವುದು

ಉದಾಹರಣಂ : ಆರಾದೇಶಕ್ಕೆ, ಕರ್ತಾರಂ, ಭರ್ತಾರಂ.

ಧಾತೃಶಬ್ದದ ಕಾರಕ್ಕೆ, ಧಾತಂ, ಧಾತನೊಲಿದಿತ್ತಖಿಳವರಫಲ.

ವಿಧಾತೃಶಬ್ದದ ರಕಾರಕ್ಕೆ ವಿಧಾತ್ರಂ

॥ ವಿಚಾರಂ ॥ ಸಖಿ = ಸಖ, ಪಿತೃ–ಪಿತರ,

26. ಸಂಸ್ಕೃತ ವ್ಯಂಜನಾಂತಶಬ್ದಗಳು ಕನ್ನಡಕ್ಕೆ ಬರುವಾಗ ವಿಧಿಯೇನು ?

1. ಇವು ಅಕಾರಾಂತವನ್ನು ಉಕಾರಾಂತದ್ವಿತ್ವವನ್ನು, ವ್ಯಂಜನಲೋಪವನ್ನು ಪಡೆದು ಲಿಂಗವಾಗುವುವು.

ಉದಾಹರಣಂ : ಅಕಾರಾಂತಕ್ಕೆ ಮರುತ್ = ಮರುತ, ಸಂಪತ್ =ಸಂಪದ, ಸೃಜ್ = ಸೃಜ

ಉಕಾರಾಂತ ದ್ವಿತ್ವಕ್ಕೆ, ಅಪ್=ಅಪ್ಪು, ಜಗತ್=ಜಗತ್ತು, ಋಕ್=ಋಕ್ಕು, ದಿಕ್ = ದಿಕ್ಕು, **ವ್ಯಂಜನಲೋಪಕ್ಕೆ** ರಾಜನ್=ರಾಜ, ಯುವನ್=ಯುವ

॥ **ವಿಚಾರಂ** ॥ ಕೆಲವು ದ್ವಿವಿಧವಾಗಿರುವುವು.

ಉದಾಹರಣಂ : ಪಯಸ್-ಪಯ-ಪಯಸ್ಸು, ತೇಜಸ್ -ತೇಜ-ತೇಜಸ್ಸು, ಗಿರ್- ಗಿರ=ಗಿರೆ,

27. ಕನ್ನಡಲಿಂಗಗಳ ವಿಧಗಳು ಯಾವುವು? ವಿವರಿಸು?

ಪುಲ್ಲಿಂಗವೆಂದು, ಸ್ತ್ರೀಲಿಂಗವೆಂದು ನಪುಂಸಕಲಿಂಗವೆಂದು, ಪುಂಸ್ತ್ರೀಲಿಂಗವೆಂದು, ಪುಂನಪುಂಸಕಲಿಂಗವೆಂದು, ಸ್ತ್ರೀನಪುಂಸಕ ಲಿಂಗವೆಂದು, ತ್ರಿಲಿಂಗವೆಂದು, ವಿಶೇಷಣ ವಿಶೇಷ್ಯ ಸಂಬಂಧಲಿಂಗವೆಂದು ಅವ್ಯಯಲಿಂಗವೆಂದು ಒಂಬತ್ತು ವಿಧಗಳು.

ಉದಾಹರಣಂ : ಪುಲ್ಲಿಂಗಕ್ಕೆ - ಅರಸಂ, ದೇವಂ, ನಂಟಂ, ತಮ್ಮಂ, ಮಗಂ, ಇತ್ಯಾದಿ.

ಸ್ತ್ರೀಲಿಂಗಕ್ಕೆ- ಅರಸಿ, ಶಚಿ, ಸೊಸೆ, ಹೆಂಗಸು.

ನಪುಂಸಕ ಲಿಂಗಕ್ಕೆ- ಮನೆ, ಎಲೆ, ಪಕ್ಕಿ, ಮಿಗಂ, ಪುಲ್, ನೀರ್ ಇತ್ಯಾದಿ.

ಪುಂಸ್ತ್ರೀಲಿಂಗಕ್ಕೆ - ಅವರ್, ಇವರ್, ಉವರ್. ಅವರ್ ಅರಸರ್, ಅವರ್ ಅರಸಿಯರ್, ಇವರ್‌ದೇವರ್, ಇವರ್ ದೇವಿಯರ್, ಉವರ್ ನಂಟರ್

ಪುಂನಪುಂಸಕಲಿಂಗಕ್ಕೆ - ಅವಂ, ಅದು, ಇವಂ, ಇದು, ಉವಂ, ಉದು. ಅವಂ ಬುಧಂ, ಅದುಬುಧಂ, ಇವಂ ಚಂದ್ರಂ, ಇದುಚಂದ್ರಂ, ಉವಂಮಂಗಳಂ, ಉದು ಮಂಗಳಂ.

ಸ್ತ್ರೀನಪುಂಸಕಲಿಂಗಕ್ಕೆ- ಅವಳ್, ಅದು, ಇವಳ್, ಇದು, ಉವಳ್, ಉದು. ಅವಳ್ ಸರಸ್ವತಿ, ಅದು ಸರಸ್ವತಿ, ಇವಳ್ ದೇವತೆ, ಇದು ದೇವತೆ, ಉವಳ್ ಅರಸಿ,

ಉದು ಗಿಡಂ.

ತ್ರಿಲಿಂಗಕ್ಕೆ – ನೀಂ ನೀಂರಾಜಂ, ನೀಂದೇವಿ,ನೀಂ,ಪಶು.

ವಿಶೇಷಣವಿಶೇಷ್ಯ ಸಂಬಂಧಲಿಂಗಕ್ಕೆ ಅವಂ,ಅವಳ್, ಅದು, ಇವಂ, ಇವಳ್, ಇದು ಉವಂ; ಉವಳ್, ಉದು. ಬಲ್ಲಿದನವಂ, ಬಲ್ಲಿದಳವಳ್, ಬಲ್ಲಿದುದದು,

ಅವ್ಯಯಲಿಂಗಕ್ಕೆ, ಸುಮ್ಮನೆ, ಮೆಲ್ಲನೆ, ಕೆಮ್ಮನೆ, ಸುಮ್ಮನಿರ್ದಂ, ಸುಮ್ಮನಿರ್ದಳ್, ಸುಮ್ಮನಿರ್ದುದು, ಮೆಲ್ಲನೆ ಬಂದಂ, ಮೆಲ್ಲನೆ ಬಂದಳ್, ಮೆಲ್ಲನೆ ಬಂದುದು,

॥ **ವಿಚಾರಂ** ॥ ಕೃತ್, ತದ್ಧಿತ, ಸಂಖ್ಯೆ. ಅವುಗಳೆಲ್ಲ ವಿಶೇಷಣ ಸಂಬಂಧಲಿಂಗವು.

ಉದಾಹರಣಂ : ಮಾಳ್ಪ ಮಗಂ, ಮಾಳ್ಪ ಮಗಳ್, ಮಾಳ್ಪ ಮಗು, ನೀರ್ಗುಟಿಕನಿವಂ, ನೀರ್ಗುಟಿಕಳಿವಳ್, ನೀರ್ಗುಟಕಮಿದು. ಮೂದೇವರ್, ಮೂದೇವಿಯರ್, ಮೂಗಂಡುಗಂ.

28 ಇವರೊಳ್ ಮುಖ್ಯಲಿಂಗಗಳು ಯಾವುವು? ವಿವರಿಸು

ಸಾಮಾನ್ಯವಾಗಿ ಪುರುಷರನ್ನು ಪೆಸರಿಸುವುದು ಪುಂಲಿಂಗವೆಂದು ಸ್ತ್ರೀಯರನ್ನು ಹೆಸರಿಸುವುದು ಸ್ತ್ರೀಲಿಂಗವೆಂದು, ಉಳಿದುವುಗಳ ಹೆಸರಿಸುವುದು ನಪುಂಸಕಲಿಂಗವೆಂದು ಮುಖ್ಯಲಿಂಗಗಳು.

ಉದಾಹರಣಂ : **ಪುಲ್ಲಿಂಗಕ್ಕೆ**, ಅರಸಂ, ಇಂದ್ರಂ, ನಾರಾಯಣಂ

ಸ್ತ್ರೀಲಿಂಗಕ್ಕೆ, ಅರಸಿ, ಶಚಿ, ಇಂದಿರೆ,

ನಪುಂಸಕಲಿಂಗಕ್ಕೆ, ಆನೆ, ಸೋನೆ, ಪುರಂ, ಸರಂ

॥ **ವಿಚಾರಂ** ॥ ಜನಶಬ್ದವು ನಪುಂಸಕಲಿಂಗವು. ಅದು ಸತ್, ಸು, ದುರ್, ಅವುಗಳಿಂದ ವಿಶೇಪಿಸಲ್ಪಟ್ಟರೆ ಪುಲ್ಲಿಂಗವು. ಮಹತ್ ಎಂಬುದರಿಂದ ವಿಶೇಪಿಸಲ್ಪಟ್ಟರೆ ನಪುಂಸಕವು,

ಉದಾಹರಣಂ : ಜನಮಿರ್ದುದು, ಇದು ಜನಂ, ಇವಂ ಸಜ್ಜನಂ, ಅವಂ ಸುಜನಂ, ಉವಂ ದುರ್ಜನಂ, ಇದು ಮಹಾಜನಂ.

29. ವಿಭಕ್ತಿಗಳು ಯಾವುವು ? ವಿವರಿಸು ?

ಮೇಲಣ ಎಲ್ಲಾ ಲಿಂಗಗಳಿಗೂ ಅರ್ಥಾನುಸಾರವಾಗಿ ಮ್, ಅಂ, ಇಂ, ಕೆ, ಅ, ಆ, ಒಳ್" ಎಂದು ಏಳು ತೆರನಾಗಿರುವುವು.

ವಿಭಕ್ತಿ ರೂಪಮಾಲೆ

ವಿಭಕ್ತಿಗಳ ಹೆಸರು	ಸಂಖ್ಯೆ	ಹ.ಕ.ಪ್ರ	ಹೊ. ಕ. ಪ್ರ	ಉದಾಹರಣಂ	
				ಹಳಗನ್ನಡಂ	ಹೊಸಗನ್ನಡಂ
ಕರ್ತೃ ವಿಭಕ್ತಿ	ಪ್ರಥಮೆ	ಮ್	ಉ	ಮರಂ	ಮರವು
ಸಂಬೋಧನ ವಿಭಕ್ತಿ	ಪ್ರಥಮೆ	ಏ	ಎ, ಏ	ಮರನೆ!	ಮರವೆ!
ಕರ್ಮ ವಿಭಕ್ತಿ	ದ್ವಿತೀಯೆ	ಅಂ	ಅ, ಅನು	ಮರನಂ	ಮರವಂ
ಕರಣ ವಿಭಕ್ತಿ	ತೃತೀಯೆ	ಇಂ	ಇಂದ	ಮರದಿಂ	ಮರದಿಂದ
ಸಂಪ್ರದಾನ ವಿಭಕ್ತಿ	ಚತುರ್ಥಿ	ಕೆ	ಕೆ, ಗೆ	ಮರಕ್ಕೆ	ಮರಕ್ಕೆ
ಅಪಾದಾನ ವಿಭಕ್ತಿ	ಪಂಚಮಿ	ಅ	ದೆಸೆಯಿಂದ	ಮರದತ್ತಣಿಂ	ಮರದ ದೆಸೆಯಿಂದ
ಸಂಬಂಧ ವಿಭಕ್ತಿ	ಷಷ್ಠಿ	ಅ	ಅ	ಮರದ	ಮರದ
ಅಧಿಕರಣ ವಿಭಕ್ತಿ	ಸಪ್ತಮಿ	ಒಳ್	ಅಲಿ	ಮರದೊಳ್	ಮರದಲಿ

30. ವಚನವನ್ನು ವಿವರಿಸು?

ವಸ್ತುವಿನ ಪ್ರಮಾಣದಲ್ಲಿ ಏಕವಚನವೆಂದು, ದ್ವಿವಚನವೆಂದು, ಬಹುವಚನವೆಂದು ಮೂರು ತೆರನಾಗಿರುವುದು, ಒಂದಂ ಪೇಳ್ವು ದೇಕವಚನಂ, ಎರಡಂಪೇಳ್ವುದು ದ್ವಿವಚನಂ, ಉಳಿದುದು ಬಹುವಚನಂ.

ಉದಾಹರಣಂ : ಏಕವಚನಕ್ಕೆ : ಒರ್ವಂ, ಒರ್ವಳ್, ಒಂದು. ಅರಸಂ, ಅರಸಿ, ಆನೆ.

ದ್ವಿವಚನಕ್ಕೆ: ಈರ್ವರ್, ಎರಡು; ಕೃಷ್ಣಭೌಮರ್, ತೋಳ್ಗಳ್,

ಬಹುವಚನಕ್ಕೆ: ನೂರುನಾಸಿರಂ: ಮೂವರ್, ನೂರ್ವರ್, ಸಾಸಿರ್ವರ್

31. ಲಿಂಗಗಳಿಗೆ ವಚನ ವಿಭಕ್ತಿಗಳು ಕೂಡುವಾಗ ವಿಧಿಯೇನು ? ವಿವರಿಸು?

(1) ದ್ವಿವಚನ ಬಹುವಚನಗಳಲ್ಲಿ, ವಿಭಕ್ತಿ ಪ್ರತ್ಯಯಗಳ ಪೂರ್ವದಲ್ಲಿ "ಗಳ್" ಎಂದಾಗಮವಾಗುವುದು, ಸರ್ವನಾಮ ಗುಣವಾಚಿಗಳಲ್ಲಿ "ಗಳ್" ಎಂಬುದಕ್ಕೆ "ಅವು" ಎಂದಾದೇಶವಾಗುವುದು,

ಉದಾಹರಣಂ : **ದ್ವಿವಚನಕ್ಕೆ :** ಕಯ್ಗಳ್, ಕಾಲ್ಗಳ್ ಕಯ್+ ಗಳ್+ ಅಂ = ಕಯ್ಗಳಂ

ಬಹುವಚನಕ್ಕೆ : ಮನೆಗಳ್, ಪುಲ್ಗಳ್, ಪುಲ್+ ಗಳ್+ಅಂ = ಪುಲ್ಗಳಂ.

ಸರ್ವನಾಮ ಗುಣವಾಚಿಗಳ್ಗೆ : ಅವು ಕಿರಿಯವು, ಇವು ಪಿರಿಯವು ಉವು ಯಿನಿಯವು.

(2) ಸರ್ವನಾಮಶಬ್ದಕ್ಕೆ "ಅವು "ಎಂಬುದು ಪರವಾದೊಡೆ, ಶಬ್ದಾಂತಕ್ಕೂ ಪ್ರತ್ಯಯಾದಿಗೂ ಲೋಪಂ, ಗುಣವಾಚಿಯ ಕಡೆಯ ದುಕಾರಕ್ಕೂ ಲೋಪಂ, ಗುಣವಾಚಿಯು ತು ಕಾರಾಂತವಾದೊಡೆ ತು ಕಾರವು ದುಕಾರವಾಗಿ ಪ್ರತ್ಯಯಾದಿಗೆ ಲೋಪಂ ಬರುವುದು.

ಸರ್ವನಾಮಕ್ಕೆ : ಎಲ್ಲವು +ಅವು + ಅ = ಎಲ್ಲವರ, ಇತ್ಯಾದಿ ಗುಣವಾಚಿಯ ದುಕಾರಲೋಪಕ್ಕೆ ಬಂದು ಪಿರಿದು + ಅವು = ಪಿರಿಯವು, ಪಸಿದು + ಅವು = ಪಸಿಯವು, ತುಕಾರವು ದು ಕಾರವಾದುದಕ್ಕೂ ಪ್ರತ್ಯಯಾದಿಗೆ ಲೋಪವಾದುದಕ್ಕೂ. ಬೆಟ್ಟಿತು + ಅವು =ಬೆಟ್ಟಿದುವು.

(3) ಪುಂಸ್ತ್ರೀಲಿಂಗ ನಾಮವಾಚಕಗಳಲ್ಲಿ "ಗಳ್" ಎಂಬುದಕ್ಕಾದೇಶವಾಗಿ "ಅರ್", ಇರ್, ದಿರ್, ವಿರ್" ಎಂದಾಗುವುದು.

ಉದಾಹರಣಂ : ಪಂಡಿತರ್, ದೇವಿಯರ್, ಪೆಂಡಿರ್, ಅಣ್ಣಂದಿರ್, ಅಕ್ಕಂದಿರ್,

ಅತ್ತೆವಿರ್, ತಾಯ್ವಿರ್

॥ ವಿಚಾರಂ ॥ ಪುಂಸ್ತ್ರೀಲಿಂಗದ ಪರಿಮಾಣದಲ್ಲಿಯೂ, ಸಂಖ್ಯೆಯಲ್ಲಿಯೂ, ವಕಾರಾಗಮ ಬರುವುದು. ಕೆಲವುಕಡೆ ಆ ವಕಾರಕ್ಕೆ ಬಕಾರವು ಬರುವುದು. ಕೆಲವು ಕಡೆ ಆ ಬಕಾರವು ಲೋಪಿಸುವುದು ಅಕಾರಾಂತ ಪುಂಸ್ತ್ರೀಲಿಂಗವು ಕೆಲವಡೆ ಬಿಂದುವೆರೆಸಿ ಪ್ರತ್ಯಯವನ್ನು ಹೊಂದುವುದು.

ಉದಾಹರಣಂ : ಪರಿಮಾಣಕ್ಕೆ – ಎಲ್ಲ+ಅರ್ = ಎಲ್ಲವರ್

ಸಂಖ್ಯೆಗೆ – ಮೂರು+ಅರ್ = ಮೂವರ್

ಬಕಾರಕ್ಕೆ – ಕೆಲವು + ಅರ್ = ಕೆಲಬರ್ ಕೆಲಂಬರ್ = ಕೆಲರ್

(4) ಪಲವು ಕೆಲವು, ಎಲ್ಲವು, ಅನಿತು, ಇನಿತು, ಎನಿತು, ಮೊದಲಾದ ಶಬ್ದಕ್ಕೆ ಲೋಪಬರುವುದು.

ಉದಾಹರಣಂ : ಪಲರ್, ಕೆಲರ್, ಎಲ್ಲರ್, ಅನಿಬರ್, ಇನಿಬರ್, ಎನಿಬರ್

(5) ಕೆಲವೆಡೆ ಪದಗಳ ಮಧ್ಯದ "ಯ, ವ"ಕಾರಗಳಿಗೆ "ಐ, ಔ" ಕಾರವು, ಪದಾಂತದ, ಅ ಕಾರಕ್ಕೆ ಒಕಾರವು ಆದೇಶವಾಗುವುದು.

ಉದಾಹರಣಂ : ದೊರಯಿಸು = ದೋರೈಸು, ಅವುಂಕು=ಔಂಕು, ಅಮರಿದಂ = ಅಮರಿದೊಂ

(6) ಕೆಲವಡೆ ಣಕಾರಕ್ಕೆ ನಕಾರವು ಪರವಾದೊಡೆ ನಕಾರವು ಲೋಪಿಸಿ, ಣಕಾರದ್ವಿತ್ವವಾಗುವುದು

ಉದಾಹರಣಂ : ಪಣ್ + ನಿಮಿತ್ತಂ= ಪಣ್ಣಿಮಿತ್ತಂ, ಕಡೆಗಣ್ + ನೋಟಂ = ಕಡೆಗಣ್ಣೋಟಂ

(7)ಕೆಲವು ಶಬ್ದಗಳ ಕಡೆಯ ಹಕಾರವು ಲೋಪಿಸಿ 'ಪ'ಕಾರ ದ್ವಿತ್ವವಾಗುವುದು. ಕೆಲವಡೆ 'ವಿ' ಕಾರವಾಗುವುದು.

ಉದಾಹರಣಂ: ಅಂತಹಂ_ಅಂತಪ್ಪಂ=ಅಂನಂ, ಇಂತಹಂ ಇಂತಪ್ಪಂ =ಇಂನಂ.

ನಿನ್ನಂನಮೋರ್ವನುಂ ಸಂ।
ಪನ್ನಗುಣಂ ಪುಟ್ಟಲರಿಯನಿಂನುಂ ಮುನ್ನುಂ।
ಸನ್ನುತನ ಮೇರುಭೂರುಹ।
ದಂನವು ಪೆರತಾವ ಮರನುಮೇಂ ಪುಟ್ಟುಗುಮೆ ॥

(5). ಕೆಲವು ಪುಂಸ್ತ್ರೀಲಿಂಗಗಳು, ಅರ್ ಎಂಬುವುದರ ಮೇಲೆ ಕಳ್ ಎಂಬುವುದನ್ನೂ, ಅರ್ ಎಂಬುದನ್ನು ಲೋಪಿಸಿ ಕಳ್ ಎಂಬುದನ್ನೂ ಪಡೆವುವು.

ಉದಾಹರಣಂ : : ಅರ್ ಎಂಬುದರ ಮೇಲಿನ ಕಳ್ಗೆ . ದೇವರ್ಕಳ್, ಬುಧರ್ಕಳ್, ಕಳ್ಗೆ, ಮಕ್ಕಳ್.

॥ **ವಿಚಾರಂ** ॥ ಸರ್ವನಾಮದಲ್ಲಿ ಅರ್ ಎಂಬುದರ ಮೇಲೆ ಗಳ್ ಬರುವುದು. ದಿರ್, ವಿರ್ ಎಂಬುದಕ್ಕೆ ಕೆಲವುಕಡೆ ಗಳ್ ಎಂಬುದಾಗುವುದು.

ಉದಾಹರಣಂ : ಸರ್ವನಾಮಕ್ಕೆ, ಅವರಗಳ್, ಇವರ್ಗಳ್. ದಿರ್ ಏರ್ಗೆ, ತಮ್ಮಂದಿರ್ ತಮ್ಮಂಗಳ್, ತಾಯಿವಿರ್ = ತಾಯ್ಗಳ್

(2) ಅಕಾರಾಂತ ಪುಂಸ್ತ್ರೀಲಿಂಗಗಳಿಗೆ ಗಳ್, ದಿರ್ ಪರವಾದೊಡೆ ಇವರಾದಿಗೆ ಬಿಂದು ಬರುವುದು. ಕೆಲವೆಡೆ ನಪುಂಸಕಲಿಂಗಕ್ಕೆ "ಗಳ್" ಪರವಾದೊಡೆಯು ಬಿಂದು ಬರುವುದು. ಸಂಸ್ಕೃತದಲ್ಲಿ ನಿತ್ಯವು.

ಉದಾಹರಣಂ : ಪುಂಸ್ತ್ರೀಲಿಂಗದ ಗಳ್ದಿರ್ಗೆ, ಮಾವ + ಗಳ್ = ಮಾವಂಗಳ್, ಮಾವ + ದಿರ್ = ಮಾವಂದಿರ್, ಅಕ್ಕ+ ಗಳ್=ಅಕ್ಕಂಗಳ್, ಅಕ್ಕ+ದಿರ್=ಅಕ್ಕಂದಿರ್,

ನಪುಂಸಕಲಿಂಗಕ್ಕೆ ತೋಟ + ಗಳ್ = ತೋಟಂಗಳ್ ತೋಟಗಳ್, ಸಂಸ್ಕೃತಕ್ಕೆ, ವೃಕ್ಷ +ಗಳ್ = ವೃಕ್ಷಂಗಳ್, ಧನ+ ಗಳ್ = –ಧನಂಗಳ್,

32. ಬಿಂದು ಭೇದವನ್ನು ವಿವರಿಸು ?

ಸ್ವರಂ ಪರವಾದೊಡೆ ಬಿಂದುವು ನಕಾರ ಮಕಾರವಾಗುವುದು.

ಉದಾಹರಣಂ : ಮರಂ+ಇರ್ದುದು ಮರನಿರ್ದುದು, ಕಮಲಂ+ಅದು- ಕಮಲಮದು,

॥ **ವಿಚಾರಂ** ॥ ಬಿಂದುಗೆ ಬಂದ ಮಕಾರವು ಕೆಲವೆಡೆ ವಕಾರವಾಗುವುದು, ಸಮಾಸದಲ್ಲಿ ಮಕಾರವು ವಕಾರವಾಗುವುದು,

ಉದಾಹರಣಂ : ಇದು ಲಕ್ಷ್ಮೀಸ್ಥಾನಂ +ಆ + ಪಜ್ಜಲಧಿ–ಇದು ಲಕ್ಷ್ಮೀಸ್ಥಾನ ವಾಪಜ್ಜಲಧಿ, ಮರ+ಮಣೆ–ಮರವಣೆ, ಅರೆ+ಮಾನಿಸಂ–ಅರೆವಾನಿಸಂ,

33. ಪ್ರಕೃತಿಗೆ ವಿಭಕ್ತಿ ಪ್ರತ್ಯಯಗಳು ಪರವಾದೊಡೇನಾಗುವುದು ?

(1) ಅಕಾರಾಂತ ಪುಂಲಿಂಗಕ್ಕೆ ಸ್ವರಾದಿ ಪ್ರತ್ಯಯಗಳು ಪರವಾದೊಡೆ ನಕಾರಾಗಮವಾಗುವುದು.

ಉದಾಹರಣಂ : ಅರಸ+ಅಂ=ಅರಸನಂ ಅರಸ+ ಇಂ=ಅರಸನಿಂ; ಅರಸ +ಅತ್ತಣಿಂ= ಅರಸನತ್ತಣಿಂ; ಅರಸ + ಅ =ಅರಸನ,; ಅರಸ + ಒಳ್=ಅರಸನೊಳ್

(2) ಅಕಾರಾಂತ ನಪುಂಸಕ ಲಿಂಗಕ್ಕೆ ದ್ವಿತೀಯೆಯಲ್ಲಿ "ನ, ಮ" ಕಾರಾಗಮ

ಬರುವುದು. ತೃತೀಯೆ ಮೊದಲಾದ ಸ್ವರಾದಿ ಪ್ರತ್ಯಯಗಳು ಪರವಾದೊಡೆ "ದ" ಕಾರಾಗಮ ಬರುವುದು,

ಉದಾಹರಣಂ : ಮರ+ಅಂ = ಮರನಂ = ಮರಮಂ: ಮರ +ಇಂ=ಮರದಿಂ, ಮರ + ಅತ್ತಣಿಂ = ಮರದತ್ತಣಿಂ, ಮರ +ಅ = ಮರದ, ಮರ + ಒಳ್ಮರದೊಳ್.

34. ಮೊದಲ ಪೇಳ್ದ ವಿಭಕ್ತಿ ಪ್ರತ್ಯಯಗಳಲ್ಲದೆ ಮತ್ತೇನು ವಿಶೇಷವು ವಿವರಿಸು ?

(1) ದ್ವಿತೀಯೆಗೆ "ಅ" ಎಂಬುದು ಬರುವುದು ಇದು ಪ್ರಥಮಾ ವಿಭಕ್ತಿಯ ಮೇಲೆ ಬರುವುದು,

ಉದಾಹರಣಂ : ಕುಲಂ+ಅ +ಗೆಲುವೊಡೆ ಕುಲಮ ಗೆಲುವೊಡೆ,

(2) ತೃತೀಯೆಗೆ "ಇಂದಂ, ಇಂದೆ " ಎಂಬುವು ಬರುವುವು

ಉದಾಹರಣಂ : ಅವನಿಂದಂ, ಅವನಿಂದೆ,

॥ ವಿಚಾರಂ ॥ ಇವುಗಳಿಗೆ "ಎ" ಕಾರಾದೇಶವಾಗುವುದಲ್ಲದೆ ಕೆಲವೆಡೆ "ಇನ್" ಎಂಬುದಾಗಮವಾಗುವುದು.

ಉದಾಹರಣಂ : ಏಕಾರಾದೇಶಕ್ಕೆ. ಪೊಲ+ಇಂದಂ = ಪೊಲದೆ, ಬಲ +ಇಂದೆ =ಬಲದೆ,

ಇನಾಗಮಕ್ಕೆ, ಬಿಸಲ್+ಇನ್+ಇಂದಂ=ಬಿಸಲಿನಿಂದಂ=ಬಿಸಲಿಂದಂ,

(3) ಚತುರ್ಥಿಗೆ "ಗೆ" ಎಂದು ಬರುವುದು,

ಉದಾಹರಣಂ : ಅವರ್ಗೆ, ರಾಜರ್ಗೆ, ಆನೆಗೆ, ಪುಲ್‌ಗೆ

॥ ವಿಚಾರಂ ॥ ಪುಂಸ್ತ್ರೀಲಿಂಗ ದಕಾರಾಂತಕೆ ಬಿಂದು ಪೂರ್ವಕ "ಗೆ" ಎಂದೂ, ನಪುಂಸಕೈಕ ವಚನಕ್ಕೆ "ಕ್ಕೆ" ಎಂದೂ ಬರುವುದು.

ಉದಾಹರಣಂ : ಅರಸಂಗೆ, ಅಕ್ಕಂಗೆ, ಗಿಡಕ್ಕೆ

(4) ಪಂಚಮಿಗೆ ಬರುವ ಅಕಾರವು ಅತ್ತಣಾದಿಯಾಗಿ ತೃತೀಯಾವಿಭಕ್ತಿಗಳ ಸಾಮಾನ್ಯ ಪ್ರತ್ಯಯಗಳ ಮೇಲೆ ಪತ್ತುವುದು,

ಉದಾಹರಣಂ : ಅವನತ್ತಣಿಂ, ಅವನತ್ತಣಿಂದಂ, ಅವನತ್ತಣಿಂದೆ

(5) ಷಷ್ಠಿಯ "ಅ" ಕಾರಕ್ಕೆ, ಪದ್ಯಾಂತದಲ್ಲೂ, ಸಂತೋಷದಲ್ಲೂ, ದುಃಖದಲ್ಲೂ "ಆ" ಕಾರ ಬರುವುದು.

ಉದಾಹರಣಂ : ಪದ್ಯಾಂತಕ್ಕೆ:

ಕೆಂಬೆಳಗೆಸೆದುದುಕೌಸುಂ।
ಭಾಂಬರಕೃತತಳ್ಪದಂತೆ ಖರರುಚಿಬಿಂಬಂ।
ಕೆಂಬಟ್ಟೆಯ ಪೊಸಕೌಳುಡೆ।
ಯೆಂಬಂತಿರೆ ಸಂಜೆಮೆರೆದುದ್ಯೆಂದ್ರೀವಧುವಾ ॥ಕಂ।

ಸಂತೋಷಕ್ಕೆ : ಪಾಲಿಂಗಿದಿನಿದು ಗಡಾ!

ದುಃಖಕ್ಕೆ: ಅಕಟಾ ಏಕೆ ಪೋದಂ!

(6) ಸಪ್ತಮಿಗೆ "ಅಲ್ಲಿ, ಇ" ಎಂದು ಬರುವುದು,

ಉದಾಹರಣಂ : ಮರದಲ್ಲಿರ್ದುದು, ಮನದಲ್ಲಿರ್ದುದು, ಪೊಲದಲ್ಲಿ, ಮನೆಯಲ್ಲಿ; ಕ್ರಮದಿಬಂದಂ, ಕಾಳಗದಿ ಮಡಿದಂ.

॥ **ವಿಚಾರಂ** ॥ ಅಕಾರಾಂತ ದಿಗ್ವಾಚಿಗೆ "ಅಲ್" ಎಂಬುದು ಬರುವುದು.

ಉದಾಹರಣಂ : ಬಡಗಲ್, ತೆಂಕಲ್, ಅತ್ತಲ್, ಇತ್ತಲ್, ಉತ್ತಲ್.

(7) ಸಂಬೋಧನೆಗೆ ಪ್ರಥಮ್ಯೆಕವಚನವು ಲೋಪಿಸುವುದು, ಇದು ಹ್ರಸ್ವದೀರ್ಘದಲ್ಲಿಯೂ ಪ್ರಯೋಗಿಸುವುದು ; ಎ, ಏ. ಎಂಬುದು ಪ್ರತ್ಯಯವು.

ಉದಾಹರಣಂ : ದೇವ ರಕ್ಷಿಸು ! ಆತ್ಮಜಾ ಎಲ್ಲಿಪೋದೇ! ಎಳೆ ಲತೆಯೆ ! ಮನುವೇ!

॥ **ವಿಚಾರಂ** ॥ ಕೆಲವಡೆ ಬಿಂದು ಬರುವುದು, ಧಾತುವಿನ ಮೇಲೆ ಬಂದೊಡೆ ಅಕಾರವಾಗುವುದು,

ಉದಾಹರಣಂ: ಮರನೆ! ಮಂದಿರಮೆ- ಜನಮೆ!' ಬಾರಮದೀಯಮನಶ್ಚಕೋರಾ ! ನೀನೆನ್ನಯ ಸಂಪದಮ ನೋಡಾ !

(8) ಷಷ್ಠಿಯನುಳಿದುಳಿದ ವಿಭಕ್ತಿಗಳಮೇಲೆ ಸಮುಚ್ಚಯದ "ಅಂ, ಉಂ" ಎಂಬುವುಗಳು ಪತ್ತುವುವು.

ಉದಾಹರಣಂ: ಅವನುಂ, ಇವನುಂ, ಅವರುಮಂ, ಇವರುಮಂ, ತೋಳಿಂದೆಯುಂ, ಬಾಳಿಂದೆಯುಂ, ದೇವಂಗೆಯುಂ (ದೇವಂಗಂ) ಕಾವಂಗೆಯುಂ (ಕಾವಂಗಂ), ಮಲ್ಲಿಗೆಯತ್ತಣಿಂದೆಯುಂ, ಗಿರಿಮಲ್ಲಿಗೆಯತ್ತಣಿಂದೆಯುಂ, ಅವನಲ್ಲಿಯುಂ ಇವನಲ್ಲಿಯುಂ..ಇತ್ಯಾದಿ

(9) ಪ್ರಥಮ ದ್ವಿತೀಯ ವಿಭಕ್ತಿಗಳು ಕೆಲವೆಡೆ ಪ್ರತ್ಯಯವಿಲ್ಲದೆ ಪ್ರಯೋಗಿಸುವುವು. ಇವುಗಳನೂಹಿಪುದು;

ನಾಮಪ್ರಕರಣಂ ಸಂಪೂರ್ಣಂ

IV ಸಮಾಸಪ್ರಕರಣಂ

35 ಸಮಾಸವೆಂದೊಡೇನು ?

ಅರ್ಥಾನುಸಾರ ನಾಮಪದಂಗಳೊಂದನೊಂದೆಡೆಬಿಡದೆ ಕೂಡಿ ಮಧ್ಯವಿಭಕ್ತಿಗಳಂ ಲೋಪಿಸುವುವು.

ಉದಾಹರಣಂ : ಸಂಸ್ಕೃತಕ್ಕೆ : ಅರ್ಧಪಿಪ್ಪಲಿ, ಸತ್ಯವಾಕ್, ದ್ವಿವಚನಂ, ಫಾಲಾಕ್ಷಂ, ರಾಮಲಕ್ಷ್ಮಣರ್, ಉಪನೇತ್ರಂ.

ಕನ್ನಡಕ್ಕೆ : ಅರೆದಿಂಗಳ್, ತಂಗಾಳಿ, ಐಗಂಡುಗಂ, ಪಣೆಗಣ್ಣಂ, ಮಲ್ ಪೊದರ್‌ಗಳ್, ಪಿಂದೆಸೆ.

36, ಸಮಾಸಗಳು ಯಾವುವು ? ವಿವರಿಸು ?

ತತ್ಪುರುಷ, ಕರ್ಮಧಾರಯ, ದ್ವಿಗು, ಬಹುವ್ರೀಹಿ, ದ್ವಂದ್ವ, ಅವ್ಯಯೀಭಾವವೆಂದು 6 ತೆರನಾಗಿರುವುದು. ಪರಪದದಲ್ಲಿ ಮುಖ್ಯಾರ್ಥವಿರ್ದೊಡೆ ತತ್ಪುರುಷ ಸಮಾಸವೆಂದು, ಪೂರ್ವಪದಾರ್ಥವು ಪರಪದವನ್ನು ಸಂಬಂಧಿಸಿದೊಡೆ ಕರ್ಮಧಾರಯ ಸಮಾಸವೆಂದು, ಪೂರ್ವಪದವು ಸಂಖ್ಯೆಯಾಗಿರ್ದೊಡೆ ದ್ವಿಗುಸಮಾಸವೆಂದು, ಅನೇಕಪದಗಳು ಬೇರೊಂದು ವಸ್ತುವನ್ನುಪೇಕ್ಷಿಸಿದೊಡೆ ಬಹುವ್ರೀಹಿ ಸಮಾಸವೆಂದು ವಸ್ತುಗಳ ಸಮೂಹವು ದ್ವಂದ್ವ ಸಮಾಸವೆಂದು, ಪೂರ್ವಪದವು ಮುಖ್ಯಾವ್ಯಯವಾಗಿರ್ದೆಡೆ ಅವ್ಯಯೀಭಾವ ಸಮಾಸವೆಂದು ತಿಳಿವುದು

37: ಸಮಾಸಗಳ ಭೇದಗಳು ಯಾವುವು ?

ಸಂಸ್ಕೃತ ಸಮಾಸವೆಂದು, ಕನ್ನಡ ಸಮಾಸವೆಂದು 2 ಭೇದಗಳು:

38– ಸಂಸ್ಕೃತ ಸಮಾಸವನ್ನು ವಿವರಿಸು ?

(1) ತತ್ಪುರುಷಸಮಾಸದಲ್ಲಿ ಪ್ರಥಮತತ್ಪುರುಷವೆಂದು, ದ್ವಿತೀಯತತ್ಪುರುಷವೆಂದು, ತೃತೀಯತತ್ಪುರುಷವೆಂದು, ಚತುರ್ಥಿತತ್ಪುರುಷವೆಂದು, ಪಂಚಮಿತತ್ಪುರುಷವೆಂದು, ಷಷ್ಠಿತತ್ಪುರುಷವೆಂದು, ಸಪ್ತಮಿತತ್ಪುರುಷವೆಂದು 7 ತೆರನಾಗಿರುವುದು.

ಪ್ರಥಮ ತತ್ಪುರುಷಕ್ಕೆ : ಅರ್ಧ ಪಿಪ್ಪಲಿ, ಪೂರ್ವಕಾಯಂ. (ಪಿಪ್ಪಲಿಯ + ಅರ್ಧಂ)

ದ್ವಿತೀಯ ತತ್ಪುರುಷಕ್ಕೆ: ಅನ್ನಪ್ರದಾತಂ ರೋಗನಿವಾರಕಂ.(ಅನ್ನಮಂ+ ಪ್ರದಾತಂ)

ತೃತೀಯ ತತ್ಪುರುಷಕ್ಕೆ: ಧನಶಾಂತಂ, ವಸ್ತ್ರಶೋಭಿತಂ (ಧನದಿಂ +ಶಾಂತಂ)

ಚತುರ್ಥಿ ತತ್ಪುರುಷಕ್ಕೆ: ಭೂತಬಲಿ, ಲೋಕವೃಷ್ಟಿ. (ಭೂತಕ್ಕೆ+ಬಲಿ)
ಪಂಚಮಿ ತತ್ಪುರುಷಕ್ಕೆ: ವೃಕ್ಷಪತನಂ, ದೇವ ಸುಖಂ (ವೃಷದತ್ತಣಿಂ +ಪತನಂ.)
ಷಷ್ಠಿ ತತ್ಪುರುಷಕ್ಕೆ: ರಾಜಧರ್ಮಂ, ದೇವಲೋಕಂ (ರಾಜನ + ಧರ್ಮಂ)
ಸಪ್ತಮಿ ತತ್ಪುರುಷಕ್ಕೆ : ವಿದ್ಯಾಸಕ್ತಂ, ಅಮೃತೋತ್ಸವಂ. (ವಿದ್ಯೆಯಲ್ಲಿ + ಆಸಕ್ತಂ)

॥ವಿಚಾರಂ॥ ಪೂರ್ವಪದವು ಪರಪದಾರ್ಥವನ್ನು ತಿರಸ್ಕರಿಸಿದೊಡೆ ನಞ್ ತತ್ಪುರುಷ ಸಮಾಸವಾಗುವುದು

ಉದಾಹರಣಂ : ಅನೇಕಂ, ಅಬಲೆ, ಅಗಣನಂ, ಅಸುರಂ.

(1) ಕರ್ಮಧಾರಯ ಸಮಾಸದಲ್ಲಿ, ಪೂರ್ವಪದವು ವಿಶೇಷಣವಾಗಿರ್ದೊಡೆ ವಿಶೇಷಣಪೂರ್ವಪದ ಕರ್ಮಧಾರಯವೆಂದು, ಉತ್ತರಪದವು ವಿಶೇಷಣವಾಗಿರ್ದೊಡೆ ವಿಶೇಷಣೋತ್ತರಪದ ಕರ್ಮಧಾರಯವೆಂದು, ಉಭಯಪದವು ವಿಶೇಷಣವಾಗಿರ್ದೊಡೆ ವಿಶೇಷಣೋಭಯಪದ ಕರ್ಮಧಾರಯವೆಂದು, ಪೂರ್ವಪದವು ಉಪಮಾನವಾಗಿರ್ದೊಡೆ ಉಪಮಾನ ಪೂರ್ವಪದ ಕರ್ಮಧಾರಯವೆಂದು, ಉತ್ತರಪದವು ಉಪಮಾನವಾಗಿರ್ದೊಡೆ ಉಪಮಾನೋತ್ತರಪದಕರ್ಮಧಾರಯವೆಂದು ಪೂರ್ವಪದದಂಕಿತವು ಪರಪದವನ್ನು ಪೇಳ್ದೊಡೆ ಸಂಭಾವನಾಪೂರ್ವಪದ ಕರ್ಮಧಾರಯವೆಂದು ಪೂರ್ವಪದವು ಬಹು ಮುಖ್ಯವಾದೊಡೆ ಅವಧಾರಣಾ ಪೂರ್ವಪದ ಕರ್ಮಧಾರಯವೆಂದು ಏಳು ತೆರನಾಗಿರುವುದು.

ಉದಾಹರಣಂ : ವಿ. ಪೂ. ಕರ್ಮಧಾರಯಕ್ಕೆ : ನೀಲೋತ್ಪಲಂ (ನೀಲವಾದ +ಉತ್ಪಲಂ) ಸಂತಸ ಪಾಡಿಗ
ವಿಶೇಷಣೋತ್ತರ ಪ. ಕ. : ವೈಯ್ಯಾಕರಣಖಸೂಚಿ (ಖಸೂಚಕವಾದ + ವೈಯಾಕರಣಂ)
ವಿಶೇಷಣೋಭಯ ಪ. ಕ. : ಭೋಜ್ಯೋಷ್ಣಂ (ಭೋಜ್ಯವಾದ್ದು + ಉಷ್ಣವಾದ್ದು).
ಉಪಮಾನ ಪೂರ್ವ. ಪ. ಕ : ಲತಾಸಿ (ಲತೆಯಂತಿರುವ + ಅಸಿ)
ಉಪಮಾನೋತ್ತರ ಪ. ಕ. : ಪಾದಕಮಲಂ (ಕಮಲದಂತಿರುವ + ಪಾದಂ)
ಸಂಭಾವನಾ ಪೂರ್ವ ಪ, ಕ : ಮೇರುಪರ್ವತಂ (ಮೇರುವೆಂಬ + ಪರ್ವತಂ)
ಅವಧಾರಣಾಪೂರ್ವ ಪ.ಕ. : ವಿದ್ಯಾಧನಂ (ವಿದ್ಯೆಯೇ + ಧನಂ)

(3) ದ್ವಿಗು ಸಮಾಸದಲ್ಲಿ. ಪೂರ್ವಪದವು ಸಂಖ್ಯೆಯಾಗಿ ನಾಮವಾಚಿಯನ್ನು ವಿಶೇಷಿಸಿದೊಡೆ ಏಕವದ್ಭಾವೀದ್ವಿಗುವೆಂದು, ಪೂರ್ವಪದವು ಸಂಖ್ಯಾನಾಮವಾಚಿಯಾಗಿರ್ದೊಡೆ ಅನೇಕವದ್ಭಾವೀದ್ವಿಗುವೆಂದು ಎರಡು ತೆರನಾಗಿರುವುದು.

ಉದಾಹರಣಂ : ಏಕವದ್ಭಾವೀದ್ವಿಗುವಿಂಗೆ : ಪಂಚವಟಿ, (ಪಂಚ+ ವಟಂಗಳ್) ತ್ರಿಲೋಕಂ,

ಅನೇಕವದ್ಭಾವೀದ್ವಿಗುವಿಂಗೆ : ಷಾಣ್ಮಾತರಂ (ಆರುತಾಯಿಗಳವಂ)

(4) ಬಹುವ್ರೀಹಿ ಸಮಾಸದಲ್ಲಿ. ಎರಡು ಪದಗಳಿಂ ಸಮಾಸವಾಗುವುದು ದ್ವಿಪದ ಬಹುವ್ರೀಹಿಯೆಂದು, ಅನೇಕಪದಂಗಳಿಂ ಸಮಾಸವಾಗುವುದು ಬಹುಪದಬಹುವ್ರೀಹಿಯೆಂದು, ಪೂರ್ವಾಪರ ಪದಗಳು ಸಂಖ್ಯೆಯಾಗಿರ್ದೊಡೆ ಸಂಖ್ಯೋಭಯಪದ ಬಹುವ್ರೀಹಿಯೆಂದು, ಉತ್ತರಪದವು ಸಂಖ್ಯೆಯಾದೊಡೆ ಸಂಖ್ಯೋತ್ತರ ಪದ ಬಹುವ್ರೀಹಿಯೆಂದು, "ಸ, ಸಹ" ಪದವು ಪೂರ್ವವಾಗಿರ್ದೊಡೆ ಸಹ ಪೂರ್ವಪದ ಬಹುವ್ರೀಹಿಯೆಂದು, ಉಭಯಪದಾಂತರಾಳಮಂ ಪೇಳ್ವುದು ದಿಗಂತರಾಳ ಲಕ್ಷಣ ಬಹುವ್ರೀಹಿಯೆಂದು, ಎರಡು ತೃತೀಯಾಂತ ಪದಗಳಿಂ ಕಲಹಮುಖಮಾಗಿ ಸಮಾಸವಾಗುವುದು ವ್ಯತೀಹಾರ ಲಕ್ಷಣ ಬಹುವ್ರೀಹಿಯೆಂದು ಏಳು ತೆರನಾಗಿರುವುದು.

ಉದಾಹರಣಂ : : ದ್ವಿಪದ ಬಹುವ್ರೀಹಿಗೆ, : ದಿವ್ಯಾಂಗಿ (ದಿವ್ಯವಾದ + ಅಂಗವುಳ್ಳವಳ್)

ಬಹುಪದ ಬಹುವ್ರೀಹಿಗೆ : ಮಹೋಜ್ವಲಕಾಯಂ (ಅತಿ + ಪ್ರಕಾಶವಾದ + ಕಾಯವುಳ್ಳವಂ)

ಸಂಖ್ಯೋಭಯಪದ ಬಹುವ್ರೀಹಿಗೆ : ದ್ವಿತ್ರಂ (ಎರಡೂ+ಮೂರೂ ಇವು.)

ಸಂಖ್ಯೋತ್ತರಪದ ಬಹುವ್ರೀಹಿಗೆ : ಉಪದಶಂ (ದಶದ +ಸಮೀಪಂ)

ಸಹಪೂರ್ವ ಪದ ಬಹುವ್ರೀಹಿಗೆ: ಸಗೋತ್ರಂ (ಗೋತ್ರದಿಂ+ಕೂಡಿದ್ದು:) ಸಹಜಾತಂ (ಸಂಗಡ+ಜನಿಸಿದವಂ)

ದಿಗಂತರಾಳ ಲಕ್ಷಣ ಬಹುವ್ರೀಹಿಗೆ : ಉತ್ತರದ+ಪೂರ್ವಂ (ಉತ್ತರದ+ಪೂರ್ವದ + ಮಧ್ಯವಾವುದೊ+ಅದು).

ವ್ಯತೀಹಾರ ಲಕ್ಷಣ ಬಹುವ್ರೀಹಿಗೆ : ನಖಾನಖಿ (ನಖದಿಂ+ ನಖದಿಂ+ ಮಾಡುವ ಯುದ್ಧಮಾವುದು+ಅದು)

(5) ದ್ವಂದ್ವ ಸಮಾಸದಲ್ಲಿ ಎರಡು ವಸ್ತುಗಳಂ ಸಮಾಸಮಾಗಿ ಸಮಾಸಾಂತದಲ್ಲಿ

ಬಹು ವಚನವುಳ್ಳದ್ದು ದ್ವಿಪದೇತರಯೋಗ ದ್ವಂದ್ವವೆಂದು, ಅನೇಕವಸ್ತುಗಳಿಂ ಸಮಾಸಮಾಗಿ ಸಮಾನಾಂತದಲ್ಲಿ ಬಹುವಚನವುಳ್ಳದ್ದು ಬಹುಪದೇತರ ಯೋಗದ್ವಂದ್ವವೆಂದು, ಸಮಾಸಮಾದೆರಡು ವಸ್ತುಗಳ ಕಡೆಯಲ್ಲಿ ಏಕವಚನವಿರ್ದೊಡೆ ದ್ವಿಪದ ಸಮಾಹಾರದ್ವಂದ್ವವೆಂದು, ಸಮಾಸಮಾದನೇಕ ವಸ್ತುಗಳ ಕಡೆಯಲ್ಲಿ ಏಕವಚನವಿರ್ದೊಡೆ ಬಹುಪದ ಸಮಾಹಾರದ್ವಂದ್ವವೆಂದು, ನಾಲ್ಕು ತೆರನಾಗಿರುವುದು.

ಉದಾಹರಣಂ : ದ್ವಿಪದೇತರ ಯೋಗದ್ವಂದ್ವಕ್ಕೆ : ರಾಮ ಲಕ್ಷಣರ್ (ರಾಮನೇನು+ಲಕ್ಷ್ಮಣನೇನು+ಇವರ್)

ಬಹುಪದೇತರ ಯೋಗದ್ವಂದ್ವಕ್ಕೆ : "ಹಸ್ತ್ಯಶ್ವರಥಪದಾತಿಗಳ್" (ಹಸ್ತಿಯೂ+ ಅಶ್ವವೂ + ರಥವೂ +ಪದಾತಿಯೂ +ಇವು)

ದ್ವಿಪದ ಸಮಾಹಾರ ದ್ವಂದ್ವಕ್ಕೆ : ಪಾಣಿಪಾದಂ (ಪಾಣಿಯೇನು+ ಪಾದವೇನು +ಇವು)

ಬಹುಪದಸಮಾಹಾರ ದ್ವಂದ್ವಕ್ಕೆ : ಪಾಣಿಪಾದಗ್ರೀವಂ (ಪಾಣಿಯೂ + ಪಾದವೂ+ ಗ್ರೀವವೂ + ಇವು)

(6) ಅವ್ಯಯ ಸಮಾಸದಲ್ಲಿ. ಪೂರ್ವಪದವು ಅವ್ಯಯವಾಗಿರ್ದೊಡೆ ಅವ್ಯಯ ಪೂರ್ವಪದಾವ್ಯಯೀಭಾವಸಮಾಸವೆಂದು, ಉತ್ತರಪದವು ಅವ್ಯಯವಾಗಿರ್ದೊಡೆ ನಾಮಪೂರ್ವಪದಾವ್ಯಯೀ ಭಾವಸಮಾಸ ಎಂದು ಎರಡು ತೆರನಾಗಿರುವುದು.

ಉದಾಹರಣಂ : : ಅವ್ಯಯ ಪೂ. ಅ.ಭಾ.ಸ.ಕ್ಕೆ : ಯಥಾಶಕ್ತಿ (ಶಕ್ತಿಯಂ + ಅತಿಕ್ರಮಿಸಿದ್ದು).

ನಾಮ ಪೂ. ಅ ಭಾ. ಸ. : ಶಾಕಪ್ರತಿ (ಶಾಕದ + ಲೇಶಂ)

॥ **ವಿಚಾರಂ** ॥ **(1)** ಸಮಾಸಗಳ ಮಧ್ಯ ಪ್ರತ್ಯಯವು ಲೋಪಿಸಿದೊಡೆ ಅಲುಕ್ಸಮಾಸವೆಂಬುದು.

ಉದಾಹರಣಂ : ಕಂಠೇಕಾಲಂ (ಕಂಠೇ=ಕಂಠದಲ್ಲಿ + ಕಾಲಃ =ಕರಿದುಳ್ಳವಂ)

(2) ಸಹಾಯ ಕ್ರಿಯಾನ್ಯೂನಂ ಕಾರಕಾರ್ಥದಿಂ ರೂಪಾಂತರವಂ ಪಡೆದೊಡೆ ಗತಿಸಮಾಸವೆಂಬುದು.

ಉದಾಹರಣಂ : ಅಲಂಕೃತ್ಯ-ಅಲಂಕಾರಮಾಡಿ' (ಅಲಂಕೃತ್ವಾ =ಅಲಂಕರಿಸಿಕೊಂಡು)

(2) ಕಾರ್ಯ ಕಾರ್ಯಸಾಧನಂಗಳೆರಡು ಏಕೀಭವಿಸಿದೊಡೆ ನಿತ್ಯಸಮಾಸ

ವೆಂಬುದು,

ಉದಾಹರಣಂ : ಕುಂಭಕಾರಂ (ಕುಂಭವಂ ಮಾಡುವವಂ)

(4) ಉತ್ತರಪದದೊಳವಯವಾರ್ಥವಿರ್ದೊಡೆ ಸಮರ್ಥಸಮಾಸವೆಂಬುದು

ಉದಾಹರಣಂ : ಶಿವಭಾಗವತಂ (ಭಗವದ್ಭಕ್ತಂ =ಭಾಗವತಂ)

॥ವಿಶೇಷ ಜ್ಞಾಪಕಂ॥ ಪದಾವಯವಾರ್ಥವೃತ್ತಿಯೆನಿಪುದು, ಇದು ಕೃದ್ವೃತ್ತಿಯೆಂದು, ತದ್ಧಿತವೃತ್ತಿಯೆಂದು ಏಕಶೇಷವೃತ್ತಿಯೆಂದು ಸಮಾಸವೃತ್ತಿಯೆಂದು ಐದು ತೆರನಾಗಿರುವುದು.

(1) ಧಾತುವಿಂದವಯವಾರ್ಥವಾದೊಡೆ ಕೃದ್ವೃತ್ತಿಯೆನಿಪುದು.

ಉದಾಹರಣಂ : ಭಕ್ತಂ (ಭಜಿಸುವವಂ), ಮರ್ತ್ಯಂ (ಸಾಯುವವಂ.)

(2) ಧಾತುವಿಲ್ಲದಯವಾರ್ಥಂ ತದ್ಧಿತವೃತ್ತಿಯೆನಿಪುದು,

ಉದಾಹರಣಂ : ಪಾರ್ಥಂ (ಪೃಥೆಯ ಪುತ್ರಂ) , ದಾಶರಥಿ (ದಶರಥನ ಪುತ್ರಂ)

(3) ಧಾತುವು ಒಂದು ನಾಮಪದದಿಂದವಯವಾರ್ಥವಾದೊಡೆ ಸನಾದ್ಯಂತ ಧಾತುವೃತ್ತಿಯೆನಿಪುದು.

ಉದಾಹರಣಂ : ವೈರಾಯತೇ (ವೈರವನಾಚರಿಸುವುದು), ಪಂಕಜಂ.

(4) ಪತ್ನ್ಯಾಧಿಪತಿಯಂ ಪೇಳ್ವುದೇಕಶೇಷವೃತ್ತಿಯೆನಿಪುದು.

ಉದಾಹರಣಂ : ಪಾರ್ವತೀ ಪರಮೇಶ್ವರರ್, ನದೀನದಗಳ್, ಶಚೀಂದ್ರರ್

(5) ಮೇಲೆ ಪೇಳ್ದೆಲ್ಲರೊಳ್ ಸಮಾಸವಾಗಿ ತೋರ್ಪುದು ಸಮಾಸವೃತ್ತಿಯೆನಿಪುದು. ಈ ಸಂಸ್ಕೃತ ಸಮಾಸಮೆಲ್ಲಂ ಕನ್ನಡ ವಿಭಕ್ತಿ ಪ್ರತ್ಯಯಾಂತಮಾಗಿ ಪೇಳಿರ್ಪುವು.

ಕನ್ನಡ ಸಮಾಸವನ್ನು ವಿವರಿಸು ?

(1) ತತ್ಪುರುಷ ಸಮಾಸವು ಸಂಸ್ಕೃತ ಸಮಾಸದಂತೇಳು ತೆರನಾಗಿರುವುದು,

ಉದಾಹರಣಂ : ಪ್ರಥಮ ತತ್ಪುರುಷಕ್ಕೆ : ಅರೆದಿಂಗಳ್(ತಿಂಗಳ ಅರೆ); ಅರೆವಾನಿಸಂ.

ದ್ವಿತೀಯ ತತ್ಪುರುಷಕ್ಕೆ : ಪೊನ್ನೀವವಂ (ಪೊನ್ನಂ + ಈವವಂ) ; ನೆಲಪೊತ್ತವಂ.

ತೃತೀಯ ತತ್ಪುರುಷಕ್ಕೆ : ಪುಲ್ ಮನೆ(ಪುಲ್ಲಿಂ+ ಮನೆ); ಪೂಗಾಯ್.

ಚತುರ್ಥಿ ತತ್ಪುರುಷಕ್ಕೆ : ಪಣಬಡ್ಡಿ (ಪಣಕ್ಕೆ+ಬಡ್ಡಿ) ಮಳೆಮುಗಿಲ್

ಪಂಚಮಿ ತತ್ಪುರುಷಕ್ಕೆ : ಪುಲಿಯೇರ್ (ಪುಲಿಯತ್ತಣಿಂ+ ಏರ್),ಅರಸಳ್ಕು: (ಅರಸತ್ತಣಿಂ+ ಅಳ್ಕು)

ಷಷ್ಠಿ ತತ್ಪುರುಷಕ್ಕೆ : ಮರವಣೆ: (ಮರದ + ಮಣೆ) ಪೊಳೆನೀರ್ (ಪೊಳೆಯ + ನೀರ್)

ಸಪ್ತಮಿ ತತ್ಪುರುಷಕ್ಕೆ : ನೆಲವನೆ (ನೆಲದಲ್ಲಿ + ಮನೆ) ಬಾವಿನೀರ್: (ಬಾವಿಯಲ್ಲಿ + ನೀರ್)

॥ **ವಿವರಂ**॥ **(1)** ಕೆಲವಡೆ ಪೂರ್ವಪದಾಂತವರ್ಣ ಲೋಪವು, ಕೆಲವೆಡೆ ಲೋಪದೊಡನಾಗಮಬರುವುದು.

ಉದಾಹರಣಂ : ಅರಮನೆ (ಅರಸು+ಮನೆ) ತೆಂಗಾಯ್ (ತೆಂಗು + ಕಾಯ್)

(2) ವ್ಯಂಜನಪರವಾದ ಪೂರ್ವಪದಾಂತದ ಡಕಾರಕ್ಕೆ ಕೆಲವೆಡೆ ಟಕಾರಾದೇಶವಾಗುವುದು.

ಉದಾಹರಣಂ : ಕಾಟ್ತುರು (ಕಾಡು + ತುರು)

(3) ಕೆಲವೆಡೆ ರ ಕಾರದಿಂಕೂಡಿದ ವರ್ಣವು ದ್ವಿತ್ವವಾಗುವುದು.

ಉದಾಹರಣಂ : : ಕಾರ್ಮ್ಮುಗಿಲ್, ಪೇರ್ಬ್ಬುಲಿ.

(2) ಕರ್ಮಧಾರಯ ಸಮಾಸವು ಸಂಸ್ಕೃತದಂತೇಳು ತೆರನಾಗಿರುವುದು,

ಉದಾಹರಣಂ : ವಿಶೇಷಣಪೂ. ಕರ್ಮಧಾರಯಕ್ಕೆ : ಪೊಸನುಡಿ (ಪೊಸತು+ನುಡಿ), ಬಿಸಿನೆತ್ತರ್

ವಿಶೇಷಣೋತ್ತರ ಪೂ. ಕರ್ಮಧಾರಯಕ್ಕೆ : ಕುರುಲ್ಗೊಂಕು (ಕೊಂಕು + ಕುರುಲ್):

ವಿಶೇಷಣೋಭಯ ಪೂ. ಕರ್ಮಧಾರಯಕ್ಕೆ : ಬಿಸಿಪಸಿ (ಬಿಸಿಯಾದ್ದು+ ಪಸಿಯಾದ್ದು).

ಉಪಮಾನ ಪೂ. ಕರ್ಮಧಾರಯಕ್ಕೆ : ತುಂಬಿಗುರುಲ್ (ತುಂಬಿಯಂತಿರುವ ಕುರುಲ್).

ಉಪಮಾನೋತ್ತರ ಪೂ. ಕರ್ಮಧಾರಯಕ್ಕೆ : ಕಣ್ ಪೂ (ಪೂವಂತಿರುವ +ಕಣ್).

ಸಂಭಾವನಾ ಪೂ. ಕರ್ಮಧಾರಯಕ್ಕೆ : ಮುಗಿಲಾನೆ (ಮುಗಿಲೆಂಬ + ಆನೆ), ತೆರೆಗುದುರೆ.

ಅವಧಾರಣಾ ಪೂ. ಕರ್ಮಧಾರಯಕ್ಕೆ : ಕಣ್ಮಲರ್ (ಕಣ್ಣೇ +ಮಲರ್)

॥ **ವಿಚಾರಂ** ॥ **(1)** ಪೂರ್ವಪದವು ಕೃತ್ತಾಗಿ ಪರಪದಾದಿಯಲ್ಲಿ "ಗ, ಜ, ದ, ಬ." ಕಾರಗಳು ಬಂದೊಡಿಕಾರಾಂತ ವುಕಾರಾಂತಕ್ಕೆ, ಕೆಲವೆಡೆ ಬಿಂದು ಬರುವುದು.

ಉದಾಹರಣಂ : ತೂಗುಂಜೆಡೆ, ಪಿಡಿಯುಂಪಲಗೆ,

(2), ಸಮಾಸದಲ್ಲಿ ಕೆಲವಡೆ ಪೂರ್ವಪದಾಂತವರ್ಣವು ಲೋಪಿಸುವುದು.

ಉದಾಹರಣಂ : ಪಳಗನ್ನಡಂ (ಪಳದು + ಕನ್ನಡಂ), ಪೊಸನೂಲ್,

(3) ಕೆಲವೆಡೆ ಪದಮಧ್ಯವು ಲೋಪಿಸುವುದು, ಕೆಲವೆಡೆ ಸಮಾಸದಲ್ಲಿ ಅಕಾರವಾಗುವುದು.

ಉದಾಹರಣಂ : ತುಂಬಿಗುರುಲ್ (ತುಂಬಿ+ಅಂತಪ್ಪ+ಕುರುಲ್), ಬಟ್ಟದೊಡೆ (ಬಟ್ಟಿತ್ತು+ತೊಡೆ).

(4) ಕೆಲವೆಡೆ ವಿಶೇಷ್ಯ ಪದವು ಪರದಲ್ಲಿರ್ದೊಡೆ ಪೂರ್ವಪದದ ಕಡೆಯ ವುಕಾರಸಹಿತ ತತ್ಪೂರ್ವ ಸ್ವರವು ಲೋಪಿಸುವುದು,

ಉದಾಹರಣಂ : : ನುಣ್ಗೊರಲ್ (ನುಣ್ಣಿತ್ತು+ಕೊರಲ್), ತಣ್ಗದಿರ್,

(5)ಕೆಲವೆಡೆ ಪೂರ್ವಪದಾದಿ ಯಿಕಾರಕ್ಕೆ, ಸ್ವರ ಪರವಾದೊಡೆ ಪೂರ್ವಪದಾದಿ ಹ್ರಸ್ವಕ್ಕೆ ದೀರ್ಘವು, ಪೂರ್ವಪದಾಂತದಲ್ಲಿ "ಟ, ಣ, ತ, ನ, ಳ" ಕಾರವಿರ್ದು ಸ್ವರಪರವಾದೊಡೆ ದ್ವಿತ್ವವು ಆಗುವುದು.

ಉದಾಹರಣಂ : ಆದಿ ಎಕಾರಕ್ಕೆ : ಪೇರ್ಬುಲಿ(ಪಿರಿದು + ಪುಲಿ)

ಆದಿ ದೀರ್ಘಕ್ಕೆ : ಪೇರಡವಿ(ಪಿರಿದು + ಅಡವಿ), ಪೇರೀಳೆ.

ದ್ವಿತ್ವಕ್ಕೆ : ನಿಟ್ಟೆಸಳ್ (ನಿಡಿದು +ಎಸಳ್) ಕಣ್ಣಾಟಂ, ಕಿತ್ತೀಳೆ, ಇನ್ನುಣಿಸು, ಒಳ್ಳುಣಿಸು.

(6) ಕೆಚ್ಚನೆ, ಬೆಚ್ಚನೆ, ಪಚ್ಚನೆಯೆಂಬುವುಗಳಿಗೆ ವರ್ಗೀಯ ವ್ಯಂಜನಪರವಾದೊಡೆ ಆ ವ್ಯಂಜನಕ್ಕೆ ಅದರನುನಾಸಿಕ ವರ್ಣಬರುವುದು, ಕೆಚ್ಚನೆ ಎಂಬುದರಾದಿಗೆ ಚಕಾರಬರುವುದು, ಕೆಲವೆಡೆ ಪದಾದಿ ಎಕಾರಕ್ಕೆ ಅಕಾರ ಇಕಾರ ಬರುವುದು, ಅನುನಾಸಿಕ ಸಂಬಂಧ ಮಕಾರವು ಸಕಾರವಾಗುವುದು.

ಉದಾಹರಣಂ : ಕೆಮ್ಮಣ್ (ಕೆಚ್ಚನೆ+ಮಣ್), ಬೆಂಬೂದಿ(ಬೆಚ್ಚನೆ + ಬೂದಿ), ಪಂದಲೆ (ಪಚ್ಚನೆ+ತಲೆ): ಚೆಂಗಣಿಗಿಲೆ (ಕೆಚ್ಚನೆ+ ಕಣಿಗಿಲೆ), ಚೆಂಗುಡಿ, ಕಿಸುಗಾಯ್ (ಕೆಚ್ಚನೆ+ಕಾಯ) ಕಿಸುಸಂಜೆ, (ಕೆಚ್ಚನೆ + ಸಂಜೆ)

(7) ಕಿರಿದು, ಬೆಟ್ಟಿತು, ಕೊಂಕು" ಎಂಬುವುಗಳಿಗೆ ಕ್ರಮವಾಗಿ "ಕುರು, ಬಿರು, ಕುಡು." ಎಂದಾದೇಶವಾಗುವುದು.

ಉ : ಕುರುಗಿಡಂ, (ಕಿರಿದು+ಗಿಡಂ), ಬಿರುವೊಯ್ಲು (ಬೆಟ್ಟಿತ್ತು + ಪೊಯ್ಲು), ಕುಡುವಿಲ್ (ಕೊಂಕು+ಬಿಲ್),

(3) ದ್ವಿಗು ಸಮಾಸವು ಸಂಸ್ಕೃತ ಸಮಾಸದಂತೆರಡು ತೆರನಾಗಿರುವುದು.

ಏಕವದ್ಭಾವೀ ದ್ವಿಗು ಸಮಾಸಕ್ಕೆ : ಐಗಂಡುಗಂ (ಐದು +ಕಂಡುಗಗಳ್),

ಮೂಗೊಳಂ

ಅನೇಕವದ್ಭಾವೀ ದ್ವಿಗು ಸಮಾಸಕ್ಕೆ : ಆರುಮೊಗಂ (ಆರು ಮೊಗಗಳವಂ) ಪಲಗಣ್ಣಂ

॥ ವಿವರಂ ॥ (1)ಕೆಲವು ಸಮಾಸದಲ್ಲಿ ಪೂರ್ವಪದಾಂತವರ್ಣವು ಲೋಪಿಸುವುದು, "ಒಂದು, ಎರಡು" ಎಂಬುವುಗಳಿಗೆ "ಒರ್, ಇರ್" ಎಂದಾದೇಶವಾಗುವುದು.

ಉದಾಹರಣಂ: ಪಲಮೊಗಂ (ಪಲವು + ಮೊಗಂ), ಪಲಗಣ್ಣಂ ; ಒರ್ಮಾತು, ಇರ್ಪನಿ.

(2) ಮೂರು ಎಂಬುದರ ಕಡೆಗೆ ವ್ಯಂಜನಪರವಾಗೆ ಲೋಪವು ಕೆಲವೆಡೆ ಕವರ್ಗ ಪವರ್ಗಗಳು ಪರವಾದೊಡೆ ಆದಿಹ್ರಸ್ವದೊಡನೆ ದ್ವಿತ್ವವಾಗುವುದು.

ಉದಾಹರಣಂ : ಮೂವಣ್ಣಂ (ಮೂರು+ ಬಣ್ಣಂ) ಮೂನೂಲ್, ಮುಗ್ಗುಡ್ಡೆ (ಮೂರು+ ಗುಡ್ಡೆ), ಮುಮ್ಮೊನೆ (ಮೂರು+ಮೊನೆ).

(3) ನಾಲ್ಕು, ಐದು; ಎಂಟು, ಎಂಬುವರ ಕಡೆಯವರ್ಣಕ್ಕೆ ಲೋಪವು, ಆರೆಂಬುದರಾದಿಗೆ ಹ್ರಸ್ವವು ಏಳು ಎಂಬುದರ ಕಡೆಯ ಸ್ವರಕ್ಕೆ ಲೋಪವು ಬರ್ಪುದು.

ಉದಾಹರಣಂ: ನಾಗಂಡುಗಂ(ನಾಲ್ಕು+ಕಂಡುಗಂ), ಐಮೊಗಂ(ಐದು+ಮೊಗಂ) ಎಣ್ದೆಸೆ (ಎಂಟು + ದೆಸೆ) ಅರುವತ್ತು (ಆರು +ಪತ್ತು); ಏಳ್ಪನಿ (ಏಳು+ಪನಿ).

॥ ವಿಚಾರಂ ॥ ನಾಲ್ಕು ಎಂಬುದು ನಾಲ್ ಎಂಬುದಾಗುವುದು

ಉದಾಹರಣಂ : : ನಾಲ್ವತ್ತು, ನಾಲ್ಸಾಸಿರಂ

(4) ಒಂಬತ್ತಕ್ಕೆ ಪತ್ತು ಪರವಾದೊಡೆ "ತೊಂ" ಎಂದು; ನೂರು ಮೊದಲಾದುವು ಪರವಾದೊಡೆ "ತೊಂಬಯ್" ಎಂದು ಆದೇಶವಾಗುವುದು.

ಉದಾಹರಣಂ : ತೊಂಬತ್ತು (ಒಂಬತ್ತು+ಪತ್ತು); ತೊಂಬಯ್ ನೂರು (ಒಂಬತ್ತು ನೂರು)

(5) ಪತ್ತೆಂಬುದಕ್ಕೆ ಒಂದು, ಎರಡು" ಪರ ವಾದೊಡೆ "ಪನ್" ಎಂದು, ಮೂರು, ನಾಲ್ಕು, ಪರವಾದೊಡೆ "ಪದಿ" ಎಂದು, ಉಳಿದ ಕೆಲವಕ್ಕೆ "ನ"ಕಾರವು ಸಾಸಿರ ಪರವಾದೊಡೆ "ಪಯಿನ್" ಕಾರವು ಎಂದು,ಆದೇಶವಾಗುವುದು.

ಉದಾಹರಣಂ : : ಪನ್ನೊಂದು (ಪತ್ತು+ಒಂದು), ಪನ್ನೆರಡು; ಪದಿ+ಮೂರು (ಪತ್ತು+ಮೂರು), ಪದಿನಾಲ್ಕು; ಪದಿನ್ನೈದು, ಪದಿನಾರು, ಪದಿನೇಳು,ಪದಿನೆಂಟು; ಪಯಿನ್ಛಾಸಿರಂ (ಪತ್ತು +ಸಾಸಿರಂ).

(4). ಬಹುವ್ರೀಹಿ ಸಮಾಸವು ದ್ವಿಪದ ಬಹುವ್ರೀಹಿಯೆಂದು , ಬಹುಪದ ಬಹುವ್ರೀಹಿಯೆಂದು, ವ್ಯತೀಹಾರಲಕ್ಷಣ. ಬಹುವ್ರೀಹಿಯೆಂದು ಮೂರು ತೆರನಾಗಿರುವುದು.

ಉದಾಹರಣಂ : : ದ್ವಿಪದ ಬಹುವ್ರೀಹಿಗೆ : ನಿಡುಗಣ್ಣಿ, ಕೆಂಗುರುಲಂ, ಪಣೆಗಣ್ಣಂ.

ಬಹುಪದ ಬಹುವ್ರೀಹಿಗೆ : ಪಸುರ್ವಣಿವಚ್ಚಂ, ಕೆಂಬಲ್ ವಾಯಂ.

ವ್ಯತಿಹಾರ, ಬಹುವ್ರೀಹಿಗೆ : ಹಾಣಾಹಾಣಿ, ದಾಳಾದಾಳಿ.

॥ ವಿವರಂ ॥ (1) ಸಮಾಸಾಂತದಲ್ಲಿ ಕೆಲವೆಡೆ "ಆ"ಕಾರವಾಗುವುದು, ಕೆಲವಡೆ "ಇ" ಕಾರವಾಗುವುದು.

ಉದಾಹರಣಂ : ನಿಡುದೋಳಂ, ಪೇರಡಿಯಂ; ನಿಡುಗಣ್ಣಿ, ಕಡುಗೇಡಿ.

(2) ಕಡೆಯಲ್ಲಿ ಇಲ್ಲವೆಂಬರ್ಥದಲ್ಲಿ "ಅ" ಎಂದು, ಕೊಲ್ಲುವರ್ಥದಲ್ಲಿ "ಕುಲಿ" ಎಂದು ಬರುವುದು,

ಉದಾಹರಣಂ : ಪಲ್ಲಿಲಿ, ನಾಣಿಲಿ, ಮೀಂಗುಲಿ.

(3) ವ್ಯತೀಹಾರಲಕ್ಷಣ ಬಹುವ್ರೀಹಿಯಲ್ಲಿ ನಡುವೆ "ಆ"ಕಾರವೂ, ಕಡೆಯಲ್ಲಿ "ಇ"ಕಾರವೂ ಬರುವುದು,

ಹೊಲ್ಲಾಹೊಲ್ಲಿ ಮಲ್ಲಾಮಲ್ಲಿ,

(4) ದ್ವಂದ್ವ ಸಮಾಸವು ಸಂಸ್ಕೃತ ಸಮಾಸದಂತೆ ನಾಲ್ಕು ತೆರನಾಗಿರುವುದು

ಉದಾಹರಣಂ: ದ್ವಿಪದೇತರಯೋಗ ದ್ವಂದ್ವ 2. ಮರಗಿಡುಗಳ್, ಪಳ್ಳಕೊಳ್ಳಂಗಳ್,

ಬಹುಪದೇತರಯೋಗ ದ್ವಂದ್ವ : ಮರಗಿಡುಪಳ್ಳಕೊಳ್ಳಂಗಳ್,

ದ್ವಿಪದ ಸಮಾಹಾರ ದ್ವಂದ್ವ : ಪುಲ್‌ಪೊದೆ, ಕಣ್ಗಿವಿ.

ಬಹುಪದ ಸಮಾಹಾರ ದ್ವಂದ್ವ : ಕೊಡೆಜಡೆಪೊಲನೆಲಂ.

॥ವಿವರಂ॥ ಪೂರ್ವಪದದಕಡೆಯಕ್ಕರವು ಲೋಪಿಸುವುದು.

ಉದಾಹರಣಂ : ನಿಂನಿಂಮಪೂಗಳ್ (ನಿಂಮ ನಿಂಮ ಪೂಗಳ್)

(6) ಅವ್ಯಯೀಭಾವಸಮಾಸವು ಸಂಸ್ಕೃತದಂತೆರಡು ತೆರನಾಗಿರುವುದು.

ಅವ್ಯಯಪೂರ್ವ ಅವ್ಯಯೀಭಾವಸಮಾಸಕ್ಕೆ : ಅಂಗಯ್ , ಮುಂಗಯ್, ಮುಂಗುಡಿ.

ನಾಮಪೂರ್ವ ಅವ್ಯಯೀಭಾವಸಮಾಸಕ್ಕೆ : ಕಾಲ್ದುದಿ, ಮಾತುಮುಂದು.

॥ ವಿವರ॥ (1) ಕೆಲವಡೆ ಪೂರ್ವಪದಾಂತ ವರ್ಣಕ್ಕೆ ಲೋಪವು, ಕೆಲವೆಡೆ

ಲೋಪಂ "ಬೆರಸು' ಬಿಂದುವಾಗುವುದು, ಕೆಳಗು ಎಂಬುದು "ಕಿಳ್, ಕಿನ್" ಎಂದಾಗುವುದು.

ಉದಾಹರಣಂ : : ಮುಂಗಾಲ್' (ಮುಂದು+ ಕಾಲ್), ಪಿಂದೆಸೆ, ಅಂಗಯ್ (ಅಡಿ+ ಕೆಯ್), ಮೇಂಗಾಲ್, ಕಿಳ್ಕೊಂಬು (ಕೆಳಗು+ಕೊಂಬು), ಕಿಳ್ಮರಂ, ಕಿನ್ನೆಲಂ.

(2) ಇಚ್ಛಾಸಮಾಸದ ನಾಂತಾವ್ಯಯದ ಅನುಕರಣಾವ್ಯಯದ ಪೂರ್ವಪದದ ಕಡೆಯ ವರ್ಣಕ್ಕೆ ಲೋಪವು.

ಉದಾಹರಣಂ : : : ಸುಮ್ಮ ಸುಮ್ಮನೆ (ಸುಮ್ಮನೆ ಸುಮ್ಮನೆ); ಗುಳುಗುಳನೆ (ಗುಳನೆ+ಗುಳನೆ)

(3) ಕೆಲವೆಡೆ ಪೂರ್ವಪದಾಂತವರ್ಣದ ಡಕಾರಕ್ಕೆ ಟಕಾರವು, ದಕಾರಕ್ಕೆ ತಕಾರವು ಬರುವುದು.

ಉದಾಹರಣಂ : ಕಟ್ಟಕಡೆ (ಕಡೆ + ಕಡೆ), ತುತ್ತತುದಿ(ತುದಿ + ತುದಿ) ಮೊತ್ತ ಮೊದಲ್

॥ ವಿಚಾರಂ ॥ ಮೊದಲೆಂಬುದರ ಲಕಾರಕ್ಕೆ ಲೋಪವಾಗುವುದು.

(4) ದೂರದಲ್ಲಿ, ಸಮೀಪದಲ್ಲಿ, ಆತುರದಲ್ಲಿ, ಇಚ್ಛೆಯಲ್ಲಿ, ವಿಧಿಕ್ರಿಯೆಯಲ್ಲಿ, ಅನುಕರಣೆಯಲ್ಲಿ, ಚಾಂಚಲ್ಯದಲ್ಲಿ, ದ್ವಿರುಕ್ತಿ ಬರುವುದು.

ಉದಾಹರಣಂ : ದೂರಕ್ಕೆ – ಆವೂರಾವೂರಂ ಮರೆಯದಿರ್,
ಸಮೀಪಕ್ಕೆ – ಇದೆ ಇದೆ ಬಂದುದು ಮಂದಮಾರುತಂ.
ಆತುರಕ್ಕೆ – ಓದಿಯೋದಿ ಮರುಳಾದಂ
ಇಚ್ಛೆಗೆ – ಮನೆದಪ್ಪ ಮನೆದೊಪ್ಪಿದುದು ಮಾರನಪೆಂಪು
ವಿಧಿಕ್ರಿಯೆಗೆ – ನಡೆನಡೆ, ಪೊಯ್‌ಪೊಯ್, ಪುಲಿಯಂ,
ಅನುಕರಣೆಗೆ – ದಡದಡಿ ಪಡಿಪಡಿ ಮಾತಂ.
ಚಾಂಚಲ್ಯಕ್ಕೆ – ಇದೆ ಇದೆ ಬಂದಂ ಕೊಂದಂ,

॥ ವಿಚಾರಂ ॥ ಇವುಗಳಂ ಕೆಲಬರು ಮೂರು ಸೂಳುಚ್ಚರಿಪರು,

ಉದಾಹರಣಂ : ಗಲ್ ಗಲ್ ಗಲ್ಲೆನೆ, ಎಲೆ ಎಲೆಲೆ, ಆರ್ದಾರ್ದಾರ್ದಿಡು.

40. ಇವುಗಳಲ್ಲಿ ಮತ್ತೇನು ವಿಶೇಷವು ಉದಹರಿಸು?

– ಗಮಕಸಮಾಸವೆಂದು, ಕ್ರಿಯಾ ಸಮಾಸವೆಂದು ಅರಿಸಮಾಸವೆಂದು ಮೂರು ವಿಶೇಷವು

(1) ಪೂರ್ವಪದದಲ್ಲಿ ಸರ್ವನಾಮ, ಸಂಖ್ಯಾವಾಚಿ, ಗುಣವಾಚಿ, ಕೃದ್ವಾಚಿ, ಇವುಗಳಿರ್ದೊಡೆ ಗಮಕಸಮಾಸವಾಗುವುದು.

ಉದಾಹರಣಂ : ಸರ್ವನಾಮಕ್ಕೆ, ಆವಮಾತು, ಆವರಾಯಂ.

ಸಂಖ್ಯಾವಾಚಿಕೆಗೆ : ಇಪ್ಪತ್ತೈದು, ಮೂವತ್ತೈದು,

ಗುಣವಾಚಿಕೆಗೆ: ಪಿರಿಯಮಗಂ, ನಿಡಿಯಮೂಗು.

ಕೃದ್ವಾಚಿಗೆ : ಪಾಡುವಪರಮೆ, ತೀಡುವಗಾಳಿ, ಮೂಸುವಗಂಧಂ.

॥ **ವಿವರಂ** ॥ **(1)** ಸರ್ವನಾಮದಲ್ಲಿ ಬರುವ ಅದು, ಇದು, ಉದು ಎಂಬುವುಗಳಿಗೆ ಕ್ರಮವಾಗಿ ಆ, ಈ, ಊ ಎಂದಾಗುವುದು, ನೆನಹಿನಲ್ಲಿಯೂ, ಪ್ರಸಿದ್ಧಿಯಲ್ಲಿಯೂ ಆ ಎಂಬುದು ಬರುವುದು

ಉದಾಹರಣಂ : : ಅದು ಮಾತು (ಆಮಾತು), ಇದುಮನೆ (ಈ ಮನೆ), ಉದುಮರಂ (ಊ ಮರಂ);

ನೆನಹಿಗೆ – ಆ ರಾಮನಾರಕ್ಕಸರಂ ಕೊಂದನಲ್ತೆ.

ಪ್ರಸಿದ್ಧಿಗೆ – ಆ ವಾಜಿಗಳಾ ತೇರುಗಳಾ ಪಿಡಿಗಳ್ ಪ್ರಸಿದ್ಧಂ.

(2) ಗುಣವಾಚಿಯಲ್ಲಿ ಇಕಾರ ಪೂರ್ವ ಅಕಾರ ಬರುವುದು.

ಉದಾಹರಣಂ : : ಪಸಿಯಬಣ್ಣಂ (ಪಸಿ+ಅ+ಬಣ್ಣಂ), ಬಿಸಿಯನೆಯ್.

॥ ವಿಚಾರಂ ॥ ಈ ಗಮಕಸಮಾಸವು ತತ್ಪುರುಷ ಕರ್ಮಧಾರಯದಲ್ಲಿಯೂ ವರ್ತಿಪುದು.

(2) ಮೊದಲಲ್ಲಿ ಕರ್ಮಪದವೂ ಉತ್ತರದಲ್ಲಿ ಕ್ರಿಯಾಪದವೂ ಇರ್ದು ಸಮಾಸವಾದೊಡೆ ಕ್ರಿಯಾ ಸಮಾಸವೆನಿಪುದು.

ಉದಾಹರಣಂ : : ಮರೆವೊಕ್ಕಂ(ಮರೆಯಂ+ ಪೊಕ್ಕಂ), ನಿರ್ಪುಗಿಸಿದಂ

" ॥ವಿವರಂ॥ " ಆಕಾರಾಂತ ಸಂಸ್ಕೃತಪದಕ್ಕೆ ಬಿಂದು ನಿತ್ಯವು ಕನ್ನಡದೊಳನಿತ್ಯವು.

ಉದಾಹರಣಂ : : ವೃಕ್ಷಂಪೇರ್ದಂ, ದೇಹಂ ಸೀಳ್ದಂ, ಬಿಜಯಂಗೈದಂ, ಮರಸಾರ್ದಂ,

(3) ಅರಿಸಮಾಸವು ಮಹಾಕವಿ ಪ್ರಯೋಗದಲ್ಲಲ್ಲದೆ ಪೊಸತಾಗಿ ಮಾಡಲಾಗದು, ಬಿರುದಾದಿಗಳಲ್ಲಿ ಯಥೇಚ್ಛವಾಗಿ ಪೇಳಬಪ್ಪುದು.

ಮಹಾಕವಿಪ್ರಯೋಗಕ್ಕೆ – ಮಂಗಳಾರತಿ, ಅರಸುಕುಮಾರಂ, ಪೂಮಾಲೆ.

ಬಿರುದಿಗೆ – ತುರಗಕಾಳಗಂ, ಮಲ್ಲಧೂಳೀಪಟಲಂ.

॥ **ವಿಚಾರಂ** ॥ ಎಲ್ಲ (ಎಲ್ಲಾ) ಮಹತ್ (ಮಾ)ಎಂಬುವುಗಳಿಗೆ ಸಂಸ್ಕೃತಪದ

ಸೇರಿದೊಡೆ ದೋಷವಿಲ್ಲ.

ಉದಾಹರಣಂ : ಎಲ್ಲಧನಂಗಳ್, ಎಲ್ಲಾ ಧರ್ಮಂಗಳ್, ಮಹಾಕೆಲಸಂ, ಮಾರಾಜಂ.

ಇದಲ್ಲದೆ, ಗಮಕ, ಕ್ರಿಯಾಸಮಾಸಂಗಳಲ್ಲಿ ಅರಿಸಮಾಸವೆಂಬ ದೋಷವಿಲ್ಲ.

ಕೆಲವು ಸಮಾಸೋದಾಹರಣಂ :

ತತ್ಪುರುಷಕ್ಕೆ : ಅಲರ + ಪಕ್ಕಿ=ಅಲರ್ವಕ್ಕಿ, ತೆಂಕಣ + ಎಲರ್ =-ತೆಂಬೆಲರ್, ಆವು + ಕೊಳಗು = ಆಂಗೊಳಗು, ಕಾಡು + ತುರು = ಕಾಳ್ತುರು.

ಕರ್ಮಧಾರಯಕ್ಕೆ : ತೂಗುವತೊಟ್ಟಿಲ್-ತೂಗುಂದೊಟ್ಟಿಲ್, ಏರುವ+ಜವ್ವನಂ =ಏರುಂಜವ್ವನಂ, ಅರಸು + ಗಿಳಿ = ಅರಗಿಳಿ, ಬಟ್ಟಿತ್ತು+ಮೊಗಂ = ಬಟ್ಟಮೊಗಂ, ಪಿರಿದು + ಮರಂ-ಪೇರ್ಮರಂ, ತಣ್ಣಿತ್ತು+ನೀರ್= ತಣ್ಣೀರ್, ಪೆರೆ +ಅಂತಪ್ಪ+ಮೊಗಂ = ಪೆರೆಮೊಗಂ, ನಿಡಿದು + ಎಸಳ್=ನಿಟ್ಟೆಸಳ್, ಕಿರಿದು+ ಈಳೆ = ಕಿತ್ತೀಳೆ, ಪಿರಿದು + ಆನೆ = ಪೇರಾನೆ, ಕಿರಿದು +ಅಡಿ = ಕಿತ್ತಡಿ, ಕಿರಿದು + ಗಿಡಂ= ಕುರುಗಿಡಂ, ಪಸಿ+ ಅಡಕೆ-ಪಚ್ಚಡಕೆ, ಬಿಳಿದು+ಓಲೆ = ಬಿಚ್ಚೋಲೆ, ಕೆಚ್ಚನೆ +ಉರಿ-ಕೇಸುರಿ, ಕೆಚ್ಚನೆ+ ಕಾಯ್=ಚೆಂಗಾಯ್, ಕೆಚ್ಚನೆ + ಕಲ್= ಕಿಸುಗಲ್, ಪಚ್ಚನೆ+ ತಲೆ =ಪಂದಲೆ, ಬೆಚ್ಚನೆ +ನೀರ್ =ಬಿಸುನೀರ್ = ಬೆನ್ನೀರ್, ಕೊಂಕು+ ಕೋಲ್-ಕುಡುಗೋಲ್, ಇನಿದು+ಮಾವು=ಇಂಮಾವು, ಬಿಳಿದು + ತಿಂಗಳ್= ಬೆಳ್ದಿಂಗಳ್,

ದ್ವಿಗುವಿಂಗೆ : ಒಂದು+ನುಡಿ-ಒರ್ನುಡಿ, ಎರಡು+ಪಣಂ_ಇಪ್ಪಣಂ, ಮೂರು+ ಕಂಡುಗಂ-ಮೂಗಂಡುಗಂ, ನಾಲ್ಕು+ಕಂಡುಗಂ-ನಾಗಂಡುಗಂ, ನಾಲ್ಕು+ ಮೊಗಂ-ನಾಲ್ಮೊಗಂ, ಐದು ನೂರು-ಐನೂರು, ಆರು-ಮೊಗಂ-ಅರುಮೊಗಂ, ಏಳು+ನೂರು-ಏಳ್ನೂರು, ಎಂಟು +ಮೆಯ್ = ಎಣ್ಮೆಯ್ , ಒಂಬತ್ತು+ಐದು =ತೊಂಬತ್ತೈದು, ಒಂಬತ್ತು+ನೂರು=ಒಂಬಯ್‌ನೂರು, ಪತ್ತು+ಒಂದು- ಪನ್ನೊಂದು, ಪತ್ತು+ಈರ್ವರ್ = ಪನ್ನೀರ್ವರ್ , ಪತ್ತು+ಮೂರು= ಪದಿಮೂರು, ಪತ್ತು+ ಸಾಸಿರಂ = ಪಯಿನ್‌ಛಾಸಿರಂ, ಪಲವು +ದಿನಂ =ಪಲದಿನಂ,

ಬಹುವ್ರೀಹಿಗೆ : ಹರಿದ + ತಲೆಉಳ್ಳವಂ= ಹರಿದಲೆಯಂ, ಮಲ್ಲನಿಂ+ಮಲ್ಲನಿಂ +ಆಗುವ ಕಾಳಗಂ ಆವುದು+ಅದು-ಮಲ್ಲಾಮಲ್ಲಿ, ಪಲ್+ಲಿ+ಬಾಯ್+ಉಳ್ಳವಂ=ಪಲ್ಲಿಲಿಬಾಯಂ, ಮೀನ್ + ಕುಲಿ = ಮೀಂಗುಲಿ,

ದ್ವಂದ್ವಕ್ಕೆ : ಪುಲ್ಲೂ+ಪೊದರೂ+ಇವು=ಪುಲ್ಪೊದರ್‌ಗಳ್, ಮರಂಗಳ್ +ಗಿಡಂಗಳ್+ ಪಕ್ಕಿಗಳ್+ ಮಿಗಂಗಳ್ ಇವು=ಮರಗಿಡಪಕ್ಕಿಮಿಗಂಗಳ್, ಪುಲ್ಲೂ

+ ಪೊದರ್-ಇವು = ಪುಲ್ಪೊದರ್, ಪಾವ್ಗಳ್+ಪಕ್ಕಿಗಳ್+ +ಮಿಗಂಗಳ್+ಇವು = ಪಾವ್ಪಕ್ಕಿಮಿಗಂ, ನಿಂಮ+ ನಿಂಮ+ಮಾತು=ನಿಂನಿಂಮಾತು.

ಅವ್ಯಯಕ್ಕೆ : ಅಡಿ + ಕಯ್ = ಅಂಗಯ್, ಮೇಗು +ಕುಡಿ=ಮೇಂಗುಡಿ, ಮುಂದು+ಚೂಣಿ=ಮುಂಚೂಣಿ, ಪಿಂದು+ನೆಲೆ=ಪಿನ್ನೆಲೆ, ಘಟ್ಟನೆ+ಘಟ್ಟನೆ = ಘಟ್ಟಘಟ್ಟನೆ, ಕಡೆ+ಕಡೆ = ಕಟ್ಟಕಡೆ, ತುದಿ+ತುದಿ = ತುತ್ತತುದಿ, ಮೊದಲ್+ಮೊದಲ್ ಮೊತ್ತಮೊದಲ್, ಕೆಳಗು+ ಜಂತೆ= ಕಿಳ್ಜಂತೆ, ಕೆಳಗು +ನೆಲ = ಕಿನ್ನೆಲ

ಗಮಕಕ್ಕೆ : ತೊಂಬತ್ತ್ಯೆದು, ಆವಕಾಂತೆ, ಬಿಸಿಯಟಿಸಿಲ್, ನೀಡುವಪಣ್, ಆರಾಯಂ, ಈ ದೇವಿ, ಊಮರಂ

ಕ್ರಿಯಾಸಮಾಸಕ್ಕೆ : ಯದ್ಧಂಗೊಳ್, ಮಾತುಂಗುಟ್ಟು, ಮಾತುಪೇಳ್, ಬಿಜಯಂಗಯ್.

ಅರಿಸಮಾಸಕ್ಕೆ : ಪೂಮಾಲೆ, ಮಂಗಳವರೆ, ಕೂರಸಿ, ಅರಸುಪುತ್ರಂ

ನಿತ್ಯ ಸಮಾಸಕ್ಕೆ : ಸೋರ್ಮುಡಿ, ಬಾಯ್ದೆರೆ.

ಸಮಾಸಪ್ರಕರಣಂ ಸಂಪೂರ್ಣ೦.

V. ತದ್ಧಿತ ಪ್ರಕರಣಂ

41. ತದ್ಧಿತವೆಂದೊಡೇನು ?

ನಾಮ ಪ್ರಕೃತಿಗಳ ಮೇಲೆ ನಾನಾವಿಧವಾದ ಪ್ರತ್ಯಯಗಳು ಸೇರಿ ತನ್ಮೂಲಕ ಜಾತ್ಯಂತರಾದಿಗಳಂ ತಿಳಿಸುವುದು.

42. ಇದರ ಭೇದಗಳು ಯಾವುವು ?

ಸಂಸ್ಕೃತ ತದ್ಧಿತವೆಂದು, ಕನ್ನಡ ತದ್ಧಿತವೆಂದು 2 ಭೇದಗಳು.

43. ಸಂಸ್ಕೃತ ತದ್ಧಿತವನ್ನು ವಿವರಿಸು ?

(1) ನಾಮ ಪ್ರಕೃತಿಯಮೇಲೆ "ತ್ವ, ತಾ" ಎಂಬುವು ಸೇರಿದೊಡೆ ಭಾವನಾಮಗಳಾಗುತ್ತವೆ.

ಉದಾಹರಣಂ : : ಅಮರ=ಅಮರತ್ವ, ಅಮರತಾ ; ಏಕ=ಏಕತ್ವ, ಏಕತಾ ; ಬಹು = ಬಹುತ್ವ, ಬಹುತಾ.

(2) ಪ್ರಕೃತಿಯ ಪ್ರಥಮವರ್ಣವಂ ವೃದ್ಧಿಮಾಡಿ "ಯ" ಎಂಬುದಂ ಸೇರಿಸಿದೊಡೆ ಭಾವನಾಮವಾಗುವುದು,

ಉದಾಹರಣಂ : ಕ್ರೂರ = ಕ್ರೌರ್ಯ, ಚೋರ = ಚೌರ್‍ಯ, ಧೀರ–ಧೈರ್‍ಯ.

(3) ಪ್ರಕೃತಿಯ ಪ್ರಥಮವರ್ಣವು ವೃದ್ಧಿಯಾದೊಡೆ ಕೆಲವೆಡೆ ಭಾವನಾಮವಾಗುವುದು.

ಉದಾಹರಣಂ : ಶಿವ–ಶೈವ, ಜಿನ=ಜೈನ, ಸೂರ = ಸೌರ, ಬುದ್ಧ= ಬೌದ್ಧ

॥ ವಿಚಾರಂ ॥ ಪ್ರಕೃತಿಯು ಉಕಾರಾಂತವಾಗಿರ್ದೊಡೆ ಉಕಾರಕ್ಕೆ ಕಕಾರಾದೇಶವು ಕಡೆಗೆ ವಕಾರಾಗಮ ಬರುವುದು.

ಉದಾಹರಣಂ : ಶಿಶು =ಶೈಶವ, ವಿಷ್ಣು =ವೈಷ್ಣವ, ಮೃದು=ಮಾರ್ದವ,

(4) ಪ್ರಕೃತ್ಯಂತಲೋಪದಿಂ ಪ್ರಥಮವರ್ಣವು ವೃದ್ಧಿಯಾಗಿ, "ಏಯ" ಎಂಬುದು ಸೇರಿದೊಡೆ ಭಾವನಾಮವಾಗುವುದು.

ಉದಾಹರಣಂ : ದಕ್ಷಿಣ–ದಾಕ್ಷಿಣೇಯ

(5) ಪ್ರಕೃತ್ಯಂತಲೋಪದಿಂ "ಈಯ" ಎಂಬುದು ಸೇರಿದೊಡೆ ಸಂಬಂಧಾರ್ಥ ಭಾವನಾಮವಾಗುವುದು.

ಉದಾಹರಣಂ : ದೇಶ = ದೇಶೀಯ, ಆತ್ಮ–ಆತ್ಮೀಯ.

॥ವಿಚಾರಂ ॥ ಕೆಲವೆಡೆ ಕಕಾರಾಗಮ ಬರುವುದು,

ಉದಾಹರಣಂ : : ರಾಜಕೀಯ

(6) ಪ್ರಕೃತಿ ಪ್ರಕೃತಿಗಳಿಗೆ ಕೆಲವೆಡೆ "ತನ" ಎಂಬುದು ಸೇರಿದೊಡೆ ಸಂಬಂಧಾ

ಭಾವನಾಮವಾಗುವುದು.

ಉದಾಹರಣಂ : ಪುರಾ=ಪ್ರಾಕ್ತನ, ಚಿರಂ=ಚಿರಂತನ.

(7) ಕೆಲವಡೆ ಉಳ್ ಎಂಬರ್ಥದಲ್ಲಿ ಪ್ರಕೃತ್ಯಂತವು ಲೋಪಿಸಿ "ಇ" ಎಂಬುದ ಸೇರುವುದು.

ಉದಾಹರಣಂ : ಧರ್ಮ=ಧರ್ಮಿ, ರಥ=ರಥಿ, ಧನ=ಧನಿ,

(8) ಪ್ರಕೃತ್ಯಂತಲೋಪದಿಂ ಪ್ರಥಮವರ್ಣವು ವೃದ್ಧಿಯಾಗಿ, "ಇಕ" ಎಂಬುದ ಕೂಡಿದೊಡೆ ಉಳ್ ಎಂಬರ್ಥವಾಗುವುದು,

ಉದಾಹರಣಂ : ಧರ್ಮ =ಧಾರ್ಮಿಕ, ಶಷ್ಕುಲಿ– ಶಾಷ್ಕುಲಿಕ.

(9) ಕೆಲವಡೆ ಸ್ವಾರ್ಥದಲ್ಲಿ "ಕ" ಪ್ರತ್ಯಯ ಬರುವುದು.

ಉದಾಹರಣಂ : ಚೈತ್ರ–ಚೈತ್ರಕ; ಕೌಂಡಿನ್ಯ=ಕೌಂಡಿನ್ಯಕ.

(10) ಪ್ರಕೃತಿಗೆ "ಮೆಯ್" ಎಂಬುದು ಸೇರಿದೊಡೆ ವ್ಯಾಪಕಾರ್ಥವಾಗುವುದು,

ಉದಾಹರಣಂ : ತೇಜಸ್= ತೇಜೋಮಯ, ಜ್ಯೋತಿಸ್=ಜೋತಿರ್ಮಯ, ಮಣಿ = ಮಣಿಮಯ.

(11) ಪ್ರಕೃತಿಗೆ "ಮಾತ್ರ" ಎಂಬುದು ಸೇರಿದೊಡೆ ಪ್ರಮಾಣಾರ್ಥ ಕೊಡುವುದು, ರೇಣು–ರೇಣುಮಾತ್ರ, ಕ್ಷಚಿತ್=ಕ್ವಚಿನ್ಮಾತ್ರ. ಇಂತುಳಿದುವನೂಹಿಪುದು. ಇವುಗಳಲ್ಲಿ ಸಮಾನಾರ್ಥ ಚಿಹ್ನೆಯ ಪೂರ್ವದಲ್ಲಿರುವುವಂ ಪ್ರಕೃತಿಯೆಂದು ತಿಳಿವುದು.

44. ಕನ್ನಡ ತದ್ಧಿತವನ್ನು ವಿವರಿಸು?

1. ಸೇವಿಸುವನಲ್ಲಿ "ಅಡಿಗ" ಪ್ರತ್ಯಯ ಬರುವುದು,

ಉದಾಹರಣಂ : ಮಾವಟಿಗಂ, ಕೊಲ್ಲಟಿಗಂ, ದೀವಟಿಗಂ.

2. ಜಾತ್ಯಾಚರಣೆಯವನಲ್ಲಿ "ಅಡಿಗ" ಪ್ರತ್ಯಯ ಬರುವುದು,

ಉದಾಹರಣಂ : ಗಾರುಡಿಗಂ, ಪೂವಡಿಗಂ, ದೇವಡಿಗಂ.

3. ಕಾರ್ಯಮಂ ಮಾಡುವವನಲ್ಲಿ "ಆಯ್ತ" ಪ್ರತ್ಯಯ ಬರುವುದು,

ಉದಾಹರಣಂ : ಕಲ್ಲಾಯ್ತಂ, ಅಚ್ಚಳಾಯ್ತಂ

4. ಕಾರ್ಯಮಂ ಸಾಧಿಸುವನಲ್ಲಿ "ಆಳಿ" ಪ್ರತ್ಯಯ ಬರುವುದು. ಜೂದಾಳಿ ಮಾತಾಳಿ, ಕೇಡಾಳಿ.

5. ಸ್ವ ಕಾರ್ಯಾಚರಣೆಯವನಲ್ಲಿ "ಇಕ" ಪ್ರತ್ಯಯ ಬರುವುದು.

ಉದಾಹರಣಂ : ಪತಿಕಂ, ಕುಡಿಕಂ, ಆಟವಿಕಂ.

6. ಸೇವಿಸುವನಿಗೂ, ನಿರ್ಮಿಸುವನಿಗೂ, ಮಾರುವನಿಗೂ, ಪರಾಧೀನನಿಗೂ ಜ್ಞಾನಿಗೂ, ಮೊದಲಾಗಿ "ಇಗ" ಪ್ರತ್ಯಯ ಬರುವುದು.

ಉದಾಹರಣಂ : ಚವರಿಗಂ, ಎಕ್ಕಡಿಗಂ ಕಬ್ಬಿಗಂ, ಅಕ್ಕಸಾಲಿಗಂ, ಗಂಧಿಗಂ, ದೂಸಿಗಂ, ಹಂಗಿಗಂ, ಸಾಲಿಗಂ, ಲೆಕ್ಕಿಗಂ, ಅರುಹಿಗಂ.

7. ವಸ್ತುವಿನೊಳ್ ಪುಟ್ಟಿದವನಿಗೆ "ಉಚ" ಪ್ರತ್ಯಯ ಬರುವುದು.

ಉದಾಹರಣಂ : ಎಲರಿಚಂ, ಕಾಲೂರಿಚಂ...

8. ಒಂದು ಕಾರ್ಯಮಂ ಮಾಡಲ್ ತಕ್ಕವಂಗೆ "ಇಲ" ಪ್ರತ್ಯಯ ಬರುವುದು

ಉದಾಹರಣಂ : ಗಾವಿಲಂ,.

9. ಕಾರ್ಯಮಂ ಸಾಧಿಪಂಗೆ "ಉಕ" ಪ್ರತ್ಯಯ ಬರುವುದು.

ಉದಾಹರಣಂ : ಬಂದುಕಂ, ಕಾರುಕಂ, ಕಂಟುಕಂ

10. ವ್ಯಾಪಕನಾದವನಲ್ಲಿ ಉಗ ಪ್ರತ್ಯಯ ಬರುವುದು.

ಉದಾಹರಣಂ : ಮಾತುಗಂ, ಬದುಕುಗಂ.

11. ತಿನ್ನುವನೊಳ್ "ಉಣಿ" ಪ್ರತ್ಯಯ ಬರುವುದು,

ಉದಾಹರಣಂ : ಎಲರುಣಿ, ಬಂಡುಣಿ

12. ವಸ್ತುವಿದ್ದವನಲ್ಲಿ "ಉಳ್ಳ" ಪ್ರತ್ಯಯ ಬರುವುದು.

ಉದಾಹರಣಂ : ರನ್ನಮುಳ್ಳಂ, ಪೂವುಳ್ಳಂ

13. ಬದುಕುವನೊಳ್ "ಉಳಿಗ" ಪ್ರತ್ಯಯ ಬರುವುದು.

ಉದಾಹರಣಂ : ಮಾತುಳಿಗಂ, ಮಣ್ಣುಳಿಗಂ,

14. ವಸ್ತುವುಳ್ಳವನಲ್ಲಿ "ಒಡೆಯ" ಪ್ರತ್ಯಯ ಬರುವುದು.

ಉದಾಹರಣಂ : ನೆಲದೊಡೆಯಂ, ಸಾಸದೊಡೆಯಂ.

15. ಸ್ವಭಾವಮುಳ್ಳವನಲ್ಲಿ "ಕ" ಪ್ರತ್ಯಯ ಬರುವುದು.

ಉದಾಹರಣಂ : ಬಡಕಂ, ಪಸಿಕಂ, ನೋಟಕಂ,

16. ವಸ್ತುವುಳ್ಳವನಲ್ಲಿ ಪ್ರವೇಶಿಪಂಗೆ "ಕಾರ' ಪ್ರತ್ಯಯ ಬರುವುದು.

ಉದಾಹರಣಂ : ನುಡಿಕಾರಂ ಬಂಡಿಕಾರಂ, ಕೋಲ್ಕಾರಂ

17. ವಸ್ತುವೊಳ್ ಸೇರ್ದು ತನ್ಮೂಲಕ ಜೀವಿಪಂಗೆ "ಕುಟಿಗ" ಪ್ರತ್ಯಯಬರುವುದು

ಉದಾಹರಣಂ : ನೀರ್ಗುಟಿಕಂ, ಮರಗುಟಿಕಂ

18. ಆಚರಣಾರ್ಥದಲ್ಲಿ "ಕುಳಿ" ಪ್ರತ್ಯಯ ಬರುವುದು.

ಉದಾಹರಣಂ : ಮರಕುಳಿ, ತಿರುಕುಳಿ

19. ವಸ್ತುವೊಳ್ವರ್ತಿಪಂಗೆ "ಗ" ಪ್ರತ್ಯಯ ಬರುವುದು.

ಉದಾಹರಣಂ : : ಕೇಡುಗಂ, ಮಾತುಗಂ, ಬಿತ್ತೆ(ಗಂ).

20. ಮಾಡುವನಲ್ಲಿಯೂ ಉಳ್ಳವನಲ್ಲಿಯೂ "ಗಾರ" ಪ್ರತ್ಯಯಬರುವುದು.

ಉದಾಹರಣಂ : : ಮಾಲೆಗಾರಂ, ಪಣಗಾರಂ, ಬೋಗಾರಂ

॥ವಿಚಾರ॥ ಕೆಲವೆಡೆ ಪ್ರತ್ಯಯಾದ್ಯಕ್ಷರವು ಲೋಪಿಸುವುದು,
ಉದಾಹರಣಂ : ಕುಂಬರಂ, ಕಂಮರಂ
21. ಆಚರಣ ಸ್ವಭಾವದವನಲ್ಲಿ ಗುಳಿ ಪ್ರತ್ಯಯ ಬರುವುದು.
ಉದಾಹರಣಂ : ಮಾತುಂಗುಳಿ, ಸೋಲುಂಗುಳಿ,
22. ವಸ್ತುವಂ ಕೊಡುವುವನಲ್ಲಿ "ವಡಿಗ" ಪ್ರತ್ಯಯ ಬರುವುದು.
ಉದಾಹರಣಂ : ಪೂವಡಿಗಂ.
23. ಊಟವೇ ಮುಖ್ಯವಾದವನಲ್ಲಿ "ಪೋತ, "ವಣಿಗ" ಪ್ರತ್ಯಯ ಬರುವುದು.
ಉದಾಹರಣಂ : ತಿಂಡಿಪೋತಂ ಲಂಚವಣಿಗಂ, ಕೂಳ್ವಣಿಗಂ
24. ವಸ್ತುವುಳ್ಳವನಲ್ಲಿ "ವಂತ" ಪ್ರತ್ಯಯಬರುವುದು.
ಉದಾಹರಣಂ : ನೆಲವಂತಂ, ಸಿರಿವಂತಂ.
25. ನಡೆಸವನಲ್ಲಿ "ವಳ, ವಳ್ಳ ಪ್ರತ್ಯಯ ಬರುವುದು.
ಉದಾಹರಣಂ : ಮಡಿವಳಂ, ಮಡಿವಳ್ಳಂ ಪಡೆವಳಂ ಪಡೆವಳ್ಳಂ
26. ವಸ್ತುವಿನ ಸ್ವಭಾವದಲ್ಲಿ. ವಳಿ ಪ್ರತ್ಯಯ ಬರುವುದು,
ಉದಾಹರಣಂ : ನಡೆವಳಿ, ನಿಲ್‌ವಳಿ, ಕೊಡುವಳಿ, ತರುವಳಿ
27. ಸಂಸ್ಕೃತದಲ್ಲಿಯೂ, ಕನ್ನಡದಲ್ಲಿಯೂ "ಆಯ್ಲ" ಪ್ರತ್ಯಯ ಬರುವುದು
ಉದಾಹರಣಂ : ಗಾಡಾಯ್ಲರ್, ಪಚ್ಚಾಯ್ಲರ್
28. ಪದಾಂತದಲ್ಲಿ- ವಳ್, ಇತಿ, ತಿ, ಎ ಪ್ರತ್ಯಯಗಳಿರ್ದೊಡೆ ಸ್ತ್ರೀವಾಚಕವೆಂದ
ತಿಳಿವುದು.
ಉದಾಹರಣಂ : : ಅವಳ್, ಇವಳ್, ಉವಳ್, ಗಾಣಿಗಿತಿ, ಮಾತುಗಿತಿ: ಪೊಲತಿ
ಸಿತಗೆ, ಪಾಣ್ಬೆ
29. ನಾಮಪ್ರಕೃತಿಗಳಿಗೆ ಆಮೆ, ಇಕೆ, ಉ, ಉಮೆ, ಕೆ, ಗೆ, ತನ, ಮೆ, ಪು, ವ
ಮೊದಲಾದ ಪ್ರತ್ಯಯಗಳು ಸೇರಿದೊಡೆ ಭಾವನಾಮವಾಗುವುವು
ಉದಾಹರಣಂ : ತಿರಮೆ, ಬಂಟಿಕೆ, ಬೀಡಿಕೆ; ಕುರುಚು, ದದ್ದು; ತಕ್ಕುಮೆ; ತಳ್ಕೆ,
ಬಳಲ್ಕೆ; ತೊಡಿಗೆ, ನಡೆಗೆ;
ಆಳ್‌ತನಂ, ಕಲಿತನಂ, ಬಲ್ಮೆ, ನಲ್ಮೆ
ಉಲಿಪು, ಪೆಂಪು, ನಿಲವು, ಅಳವು
(30) ಕೆಲವು ಧಾತುಗಳು ಮೇಲೆ ಪೇಳ್ದಂತೆ ಭಾವನಾಮವಾಗುವುವು.
ಉದಾಹರಣಂ : : ತೋರ್ಕೆ, ಸಾರ್ಕೆ ಮೊದಲಾದುವನೂಹಿಪುದು.

ತದ್ಧಿತ ಪ್ರಕರಣಂ ಸಂಪೂರ್ಣಂ

VI. ಆಖ್ಯಾತಪ್ರಕರಣಂ

45. ಆಖ್ಯಾತವೆಂದೊಡೇನು?

ಕರ್ತೃಪದಾನುಸಾರವಾಗಿ ಧಾತುವಿಗೆ ಆಖ್ಯಾತ ಪ್ರತ್ಯಯಗಳು ಸೇರಿದೊಡೆ ಆಖ್ಯಾತವೆನಿಪುದು.

46. ಧಾತುವಿನ ಭೇದಗಳು ಯಾವುವು?

ಸಂಸ್ಕೃತ ಧಾತುವೆಂದು ಕನ್ನಡ ಧಾತುವೆಂದು ಎರಡು ಭೇದಗಳು.

47. ಸಂಸ್ಕೃತಧಾತುಗಳು ಯಾವುವು? ಉದಹರಿಸು?

ಪ್ರಾಯೇಣ ಶಬ್ದಗಳೆಲ್ಲಾ ಧಾತುಗಳ ಮೇಲೆ ಪುಟ್ಟುವುವು, ಕೆಲವು ಶಬ್ದಗಳು ಪೂರ್ವಪ್ರತ್ಯಯ (ಉಪಸರ್ಗ)ವನ್ನೂ ಪರಪ್ರತ್ಯಯ (ವರ್ಣಕ)ವನ್ನೂ ತಾಳುವುವು. ಅವು ಯಾವುವೆಂದೊಡೆ

ಪೂರ್ವಪ್ರತ್ಯಯಂ,	ತದರ್ಥ.	ತದುದಾಹರಣಂ
ಅ	ಇಲ್ಲದ್ದು.	ಅಕ್ರಮ
ಅಂತಃ	ಒಳಗೆ	ಅಂತಃಪುರಿ
ಅತಿ	ಮೀರುವುದು	ಅತಿಕ್ರಮ
ಅಧಃ	ಕೆಳಗು	ಅಧೋಭುವನ
ಅಧಿ	ಮೇಗು	ಅಧಿಸ್ಥಾನ
ಅನ್	ಕೆಟ್ಟದ್ದು	ಅನರ್ಥ
ಅನು	ಅನುಸರಣೆ	ಅನುನಾಸಿಕ
ಅಪ	ಕೆಟ್ಟದ್ದು.	ಅಪಶಬ್ದ.
ಅಭಿ.	ಮುಂದು.	ಅಭಿವೃದ್ಧಿ.
ಅವ	ಕೆಟ್ಟದ್ದು.	ಅವಕೇಶಿ
ಆ	ಸ್ಮರಣೆ	ಆಮೂಲಾಗ್ರ
ಉತ್	ಮೇಗು	ಉದಗ್ರ
ಉಪ	ಸಂಬಂಧ	ಉಪಕಥಾ
ಕು	ಕೆಟ್ಟದ್ದು	ಕುಭಾಷೆ,
ದುರ್	ಕೆಟ್ಟದ್ದು	ದುರ್ವಾಕ್ಯ

ನ, ನಿ	ಇಲ್ಲ	ನಗ, ನಿಧನ,
ನಿಃ	ಇಲ್ಲ	ನಿಃಶಂಕೆ.
ಪರಿ	ಸುತ್ತು	ಪರಿಧಿ
ಪ್ರ	ದೊಡ್ಡಿತು	ಪ್ರಕರಣ
ಪ್ರತಿ	ಬೇರೆ	ಪ್ರತಿವಾಕ್ಯ
ವಿ	ಕೆಡಕು.	ವಿಗತ
ಸಂ	ಒಡನೆ	ಸಂತುಷ್ಟಿ
ಸತ್	ಒಳ್ಳಿತು	ಸತ್ಪುರುಷ
ಸು	ಒಳ್ಳಿತು	ಸುಮತಿ

ಪರಪ್ರತ್ಯಯಗಳು ತದ್ಧಿತ ಪ್ರಕರಣಾದಿಯಲ್ಲಿ ಪೇಳಿರ್ಪುವು

48. ಕನ್ನಡ ಧಾತುವನ್ನು ವಿವರಿಸು?

ಕನ್ನಡಧಾತುವಿನ ಮೇಲೆ ಆಖ್ಯಾತ ವಿಭಕ್ತಿಗಳು ಸೇರಿದೊಡೆ ಕ್ರಿಯಾಪದವಾಗುವುದು ಕ್ರಿಯಾಪದದಲ್ಲಿ ನಿಷೇಧ ಪ್ರತ್ಯಯವನುಳಿದಲ್ಲಿ ಧಾತು ನಿಲ್ಲುವುದು.

49. ಕ್ರಿಯಾಪದದ ಭೇದಗಳು ಯಾವುವು ? ವಿವರಿಸು?

ಪುರುಷತ್ರಯಾತ್ಮಕ ಕ್ರಿಯಾರೂಪವೆಂದು, ಅವ್ಯಯಾತ್ಮಕ ಕ್ರಿಯಾರೂಪವೆಂದು ಸಂಯುಕ್ತ ಕ್ರಿಯಾರೂಪವೆಂದು, ಮೂರು ತೆರನಾಗಿರುವುದು.

50. ಪುರುಷತ್ರಯಾತ್ಮಕ ಕ್ರಿಯಾ ರೂಪವನ್ನು ವಿವರಿಸು ?

ಇದು ಸಮವಾಗಿ ರೂಪನಿಷ್ಪತ್ತಿಯಂ ತಾಳ್ದೊಡೆ ಸಾಮಾನ್ಯ ಕ್ರಿಯಾಪದವೆಂದು ವ್ಯತ್ಯಾಸವಾಗಿ ರೂಪನಿಷ್ಪತ್ತಿಯಂ ತಾಳ್ದೊಡೆ ವಿಕೃತಿ ಕ್ರಿಯಾಪದವೆಂದು ಎರಡು ತೆರನಾಗಿರುವುದು.

51. ಸಾಮಾನ್ಯ ಕ್ರಿಯಾಪದವನ್ನು ವಿವರಿಸು?

ಸಾಮಾನ್ಯಕ್ರಿಯಾಪದದ ಧಾತುವು ಪುರುಷತ್ರಯ, ವಚನತ್ರಯ, ಕಾಲತ್ರಯ ರೂಪದ್ವಯದಲ್ಲು ಸಮವಾಗಿ ಆಖ್ಯಾತ ವಿಭಕ್ತಿಗಳಂ ಪಡೆವುದು,

52. ಆಖ್ಯಾತವಿಭಕ್ತಿಗಳನ್ನು ವಿವರಿಸು?

(1) ಪ್ರಥಮ, ಮಧ್ಯಮೋತ್ತಮಪುರುಷಗಳಲ್ಲಿ ಏಕವಚನ ಬಹುವಚನಗಳೊಳ ಕ್ರಮವಾಗಿ, ಅಮ್, ಅರ್, ಅಯ್, ಇರ್,ಎನ್, ಎವು." ಎಂದು ಬರುವುವು.

(2) ಇವು ಸರ್ವನಾಮ, ಸಂಖ್ಯಾವಾಚಿ, ಸಂಸ್ಕೃತ ಕನ್ನಡ ಗುಣವಾಚಿಯ

ಪ್ರಯೋಗಿಸುವುವು, ಒಂದಾನೊಂದು ಸಮಯಂ ಸಮುಚ್ಚಯದಲ್ಲಿಯುಂಟು.

ಉದಾಹರಣಂ : ಸರ್ವನಾಮಕ್ಕೆ – ಪೆರಂ, ಪೆರರ್, ಪೆರಯ್, ಪೆರಿರ್, ಪೆರೆನ್, ಪೆರೆವು.

ಸಂಖ್ಯಾವಾಚಿಗೆ – ಒರ್ವಂ, ಒರ್ವರ್, ಒರ್ವಯ್, ಒರ್ವಿರ್, ಒರ್ವೆನ್, ಒರ್ವೆವು.

ಸಂಸ್ಕೃತ ಗುಣವಾಚಿಗೆ – ಕ್ರುದ್ಧಂ, ಕ್ರುದ್ಧರ್, ಕ್ರುದ್ಧಯ್, ಕ್ರುದ್ಧರಿರ್; ಕ್ರುದ್ಧನೆನ್, ಕ್ರುದ್ಧರೆವು,

ಕನ್ನಡ ಗುಣವಾಚಿಗೆ– ಮೆಲ್ಲಿದಂ, ಮೆಲ್ಲಿದರ್; ಮೆಲ್ಲಿದಯ್, ಮೆಲ್ಲಿದಿರ್, ಮೆಲ್ಲಿದೆನ್, ಮೆಲ್ಲಿದೆವು

ಸಮುಚ್ಚಯಕ್ಕೆ – ಪಗೆಯನ್ ಪಗೆಪಡೆಯೆನ್.

(3) ಪ್ರಥಮಪುರುಷ ಸ್ತ್ರೀಲಿಂಗಕ್ಕೇಕವಚನದಲ್ಲಿ "ಅಳ್" ಎಂದು, ನಪುಂಸಕ್ಕೈಕ ವಚನದಲ್ಲಿ "ಉದು"

ಇತು, ಇತ್ತು, ಅತ್ತು" ಎಂದು, ಬಹುವಚನದಲ್ಲಿ "ಉವು" ಎಂದು ಆದೇಶವಾಗುವುದು.

ಉದಾಹರಣಂ : ಸ್ತ್ರೀಲಿಂಗಕ್ಕೆ– ಪೆರಳ್, ಮಾಡಿದಳ್, ಒರ್ವಳ್‌ಬಂದಳ್

ನಪುಂಸಕೈಕವಚನಕ್ಕೆ– ಅದುಮಾಡಿದುದು, ಇದು ಮಾಡಿತು, ಉದು ಮಾಡಿತ್ತು. ಅದುಮಾಡಿದತ್ತು. ,

ಬಹುವಚನಕ್ಕೆ– ಅವುಮಾಡಿದುವು, ಇವುನುಡಿದುವು, ಉವುಬಂದುವು.

53. ಪುರುಷತ್ರಯವನ್ನು ವಿವರಿಸು?

ಇದು "ತಾಂ,ನೀಂ,ಆಂ" ಎಂಬ ಪ್ರಥಮ ಮಧ್ಯಮೋತ್ತಮ ಪುರುಷಗಳು ಮೂರು ತೆರನಾಗಿ ಆಖ್ಯಾತವಿಭಕ್ತಿಗಳಂ ಪಡೆವುವು. ಕೂಡಿಪೇಳುವುದರೊಳ್ ಪುರುಷತ್ರಯದಲ್ಲು ಉತ್ತಮಪುರುಷವು ಮುಖ್ಯವು; ಉಳಿದುವುಗಳಲ್ಲಿ ಮಧ್ಯಮಪುರುಷವು ಮುಖ್ಯವು; ಪ್ರಥಮಪುರುಷವು ಉಳಿದುವಂ ಪೇಳದು.

ಉದಾಹರಣಂ : ಉತ್ತಮಪುರುಷಕ್ಕೆ– ಆನುಂ ನೀನುಮವನುಂ ಬಂದೆವು.

ಮಧ್ಯಮ ಪುರುಷಕ್ಕೆ – ನೀನುಮವನುಂ ಪೇಳ್ದಿರ್.

ಪ್ರಥಮ ಪುರುಷಕ್ಕೆ – ಅವಂ ಪೇಳ್ದಂ

54. ವಚನವನ್ನು ವಿವರಿಸು?

ಪುರುಷತ್ರಯ ಲಿಂಗತ್ರಯ ಕಾಲತ್ರಯ ರೂಪದ್ವಯಗಳಲ್ಲಿ ಏಕತ್ವವಂ ಪೇಳುವುದು ಏಕವಚನವು, ಬಹುತ್ವವಂ ಹೇಳುವುದು ಬಹುವಚನವು.

55. ಕಾಲತ್ರಯ ರೂಪದ್ವಯಗಳನ್ನು ವಿವರಿಸು?

(1) ಕಳೆದುದಂ ಪೇಳುವುದು ಭೂತಕಾಲವು. ಇದಕ್ಕೆ "ದ" ಕಾರಾಗಮ ಬರುವುದು, ಈಗ ನಡೆವುದಂ ಹೇಳುವುದು ವರ್ತಮಾನ ಕಾಲವು ಇದಕ್ಕೆ "ದಪ" ಕಾರಾಗಮ ಬರುವುದು, ಮುಂದೆ ಬರುವುದಂ ಹೇಳುವುದು ಭವಿಷ್ಯತ್ಕಾಲವು ಇದಕ್ಕೆ "ವ" ಕಾರಾಗಮ ಬರುವುದು.

ಉದಾಹರಣಂ : ಭೂತಕ್ಕೆ – ನುಡಿ+ಅಂ=ನುಡಿದಂ, ತಿಳಿ+ಅರ್=ತಿಳಿದರ್

ವರ್ತಮಾನಕ್ಕೆ – ನುಡಿ+ಅಂ=ನುಡಿದಪಂ, ತಿಳಿ+ಅರ್= ತಿಳಿದಪರ್.

ಭವಿಷ್ಯತ್ತಿಗೆ – ನುಡಿ+ಅಂ=ನುಡಿವಂ, ತಿಳಿ+ಅಂ = ತಿಳಿವಂ.

(2) ಆಜ್ಞಾಪಿಸುವುದರಲ್ಲಿ ಬರುವುದು ವಿಧಿರೂಪವು, ಇದು ಆಶೀರಾದಿಗಳಿಗೂ ಬರುವುದು, ತಿರಸ್ಕಾರಾರ್ಥದಲ್ಲಿ ಬರುವುದು ನಿಷೇಧವು.

ಉದಾಹರಣಂ : ವಿಧಿಗೆ – ಮಾಡಯ್, ನುಡಿವಿರ್,

ನಿಷೇಧಕ್ಕೆ – ಮಾಡಂ, ನುಡಿಯಂ.

56. ಧಾತುವಿಗೆ ಆಖ್ಯಾತ ವಿಭಕ್ತಿಗಳು ಸೇರುವಾಗ ವಿಧಿಯೇನು?

(1) ಉಕಾರಾಂತಧಾತುವು "ದ, ದಪ" ಗಳು ಪರವಾದೊಡೆ ಇಕಾರಾಂತವಾಗುವುದು.

ಉದಾಹರಣಂ: ಮಾಡು+ದ+ಅಂ=ಮಾಡಿದಂ,ಮಾಡು+ದಪ+ಆಂ = ಮಾಡಿದಪಂ.

(2) ಆಖ್ಯಾತವಿಭಕ್ತಿಗಳೊಡನೆ ಕೂಡಿದ "ಕುಂ, ಗುಂ" ಗಳು "ದಪ, ವ" ಕಾರಗಳಿಗಾದೇಶವಾಗಿ ಬಂದು ಪ್ರಥಮ ಪುರುಷದ ಲಿಂಗವಚನಗಳಲ್ಲಿ ವ್ಯತ್ಯಾಸವಾಗದೆ ಕಾಲತ್ರಯದಲ್ಲು ಏಕವಾಗಿ ಬರುವುದು.

ಉದಾಹರಣಂ : ತ್ರಿಲಿಂಗಕ್ಕೆ – ಅವಂ ಮಾಳ್ಕುಂ, ಅವಳ್ ಮಾಡುಗುಂ, ಅದುಮಾಳ್ಕುಂ

ವಚನಕ್ಕೆ– ಓರ್ವಂ ಬರ್ಕುಂ, ಎಲ್ಲರ್ಮಾಡುಗುಂ.

ಕಾಲತ್ರಯಕ್ಕೆ – ಪಿಂತೆಮಾಳ್ಕುಂ, ಇಂದುಮಾಳ್ಕುಂ, ನಾಳೆಮಾಳ್ಕುಂ, ಪಿಂತೆಮಾಡುಗುಂ, ಈಗಮಾಡುಗುಂ, ನಾಳೆಮಾಡುಗುಂ

(3) ಇಸುಪರವಾದ ಧಾತುವಿಗೆ "ಕುಂ" ಪರವಾದೊಡೆ ಕಡೆಯಸುಕಾರಂ ಲೋಪವಾಗುವುದು,

ಉದಾಹರಣಂ : ನೋಡಿಸು+ಕುಂ–ನೋಡಿಕುಂ

॥ ವಿಚಾರಂ ॥ – ಕೆಲವೆಡೆ : "ಕುಂ, ಗುಂ " ಗಳೆರಡೂ ಪತ್ತುವುವು, ಕೆಲವೆಡೆ "ಕುಂ" ದ್ವಿತ್ವವಾಗುವುದು.

ಉದಾಹರಣಂ : ಪೇಳ್ಕುಂ =ಪೇಳ್ಗುಂ, ಬಿಡಿಕುಂ=ಬಿಡಿಕ್ಕುಂ.

(4) ವಿಧಿರೂಪದಲ್ಲಿ ಪ್ರಥಮ ಪುರುಷಕ್ಕೆ ವಚನವ್ಯವಸ್ಥೆಯಿಲ್ಲದೆ "ಕೆ, ಗೆ, ಉದು" ಗಳು ಬರುವುವು.

ಉದಾಹರಣಂ : ಅವಂಮಾಳ್ಕೆ, ಅವಳ್ ಮಾಳ್ಕೆ, ಅವರ್ಮಾಳ್ಕೆ, ಅದು ಮಾಳ್ಕೆ,

ಅವು ಮಾಳ್ಕೆ , ಅವಂಮಾಡುಗೆ ಅವಳ್ ಮಾಡುಗೆ, ಅವರ್‌ಮಾಡುಗೆ, ಅದು ಮಾಡುಗೆ, ಅವುಮಾಡುಗೆ.

॥ ವಿಚಾರಂ॥ ಕೆಲವೆಡೆ "ಕೆ" ಎಂಬುದಕ್ಕೆ ದ್ವಿತ್ವವು, "ಪೋಗು, ಆಗು"ಯೆಂಬುವುಗಳ ಕಡೆಯಕ್ಕರಕ್ಕೆ ಲೋಪವು, ಆಗು ಎಂಬುದರ ಮೊದಲ್ಗೆ ಹ್ರಸ್ವವು ಬರುವುದು, ಕೆಲವೆಡೆ ಅಲ್ ಬರುವುದು. ಮಾಳ್ಕೆ = ಮಾಡಿಕ್ಕೆ, ಪೋಗು-ಪೋಕೆ, ಆಗು-ಅಕ್ಕೆ; ನುಡಿಯಲಿಂ.

(5) ಮಧ್ಯಮಪುರುಷೈಕವಚನವು ಧಾತುಸ್ವರೂಪದಲ್ಲಿ ನಿಲ್ಲುವುದು, ಕೆಲಕೆಡೆ ಧಾತುವಿನಕಡೆಗೆ "ಅ" ಕಾರಾದೇಶವು "ಉದು" ಎಂಬುದು ಬಹುವಚನದಲ್ಲಿ "ಇಂ, ಇದು" ಎಂಬುವು ಬರುವುವು.

ಉದಾಹರಣಂ : ಏಕವಚನಕ್ಕೆ; ನೀಂಮಾಡ, ನೀಂಮಾಡುವುದು,

ಬಹುವಚನಕ್ಕೆ, ನೀವೆಲ್ಲರ್ ಕೇಳಿಂ, ನೀವೆಲ್ಲರ್ ಕೇಳ್ವುದು.

(6) ಉತ್ತಮಪುರುಷೈಕವಚನ ವಿಭಕ್ತಿಗೆ "ವನ್" ಎಂದು, ಬಹುವಚನ ವಿಭಕ್ತಿಗೆ "ವಂ" ಎಂದು ಆದೇಶವಾಗುವುದು.

ಉದಾಹರಣಂ : ಏಕವಚನಕ್ಕೆ – ಅಂ ಮಾಡುವೆಂ, ಆನೀವೆಂ.

ಬಹುವಚನಕ್ಕೆ – ಆವ್ ಮಾಡುವಂ, ಅವರೆಲ್ಲರ್ ಮಾಡುವರ್.

(7) ನಿಷೇಧ ರೂಪದಲ್ಲಿ ಕಾಲತ್ರಯದ ಕ್ರಿಯೆಯು ಭೂತರೂಪದಲ್ಲಿ ನಿಲ್ಲುವುದು, ಉದಾಹರಣಂ : ನೋಡಿದಂ= ನೋಡಂ, ನೋಡಿದಪಂ=ನೋಡಂ, ನೋಡುವಂ=ನೋಡಂ.

57. ಧಾತುವಿನಲ್ಲಿ ಮತ್ತೇನು ವಿಶೇಷವು?

ಸಕರ್ಮಕಕ್ಕೆ ಪ್ರೇರಕಧಾತುಗಳಿಗೂ, ಕನ್ನಡದಲ್ಲಿ ಬರುವ ಸಂಸ್ಕೃತ ಧಾತುಗಳಿಗೂ "ಇಸು" ಪ್ರತ್ರಯ ಬರುವುದು,

ಉದಾಹರಣಂ : ಸಕರ್ಮಕಕ್ಕೆ- ಪಾಳಿಸಿದಂ, ಬೆಟ್ಟಸಿದಂ, ತೋಯಿಸಿದಂ.

ಪ್ರೇರಕಕ್ಕೆ – ಓದಿಸಿದಂ. ಪೇಳಿಸಿದಂ, ಮಾಡಿಸಿದಂ

ಸಂಸ್ಕೃತಕ್ಕೆ – ರಂಜಿಸಿದಂ, ರಕ್ಷಿಸಿದಂ, ಭಕ್ಷಿಸಿದಂ

॥ ವಿಚಾರಂ ॥ ಅಕರ್ಮಕ ಸಕರ್ಮಕಧಾತುಗಳಿಗೆ "ಇಸು" ಸೇರಿದೊಡೆ ಪ್ರೇರಕ ಧಾತುವಾಗುವುದು.

ಉದಾಹರಣಂ : ನಡೆ+ಇಸು= ನಡೆಸು, ಬರ್+ಇಸು = ಬರಿಸು, ನೋಡು+ ಇಸು= ನೋಡಿಸು, ಕೇಳ್+ ಇಸು= ಕೇಳಿಸು

ಆಖ್ಯಾತ ವಿಭಕ್ತಿ ರೂಪಮಾಲೆ "ಮಾಡು" ಧಾತು

ಪುರುಷ	ಲಿಂಗ	ಭೂತಕಾಲ		ವರ್ತಮಾನಕಾಲ		ಭವಿಷ್ಯತ್‌ಕಾಲ		ವಿಧಿರೂಪ		ನಿಷೇಧರೂಪ	
ಪ್ರಥಮ ಪುರುಷ		ಏ	ಬ	ಏ	ಬ	ಏ	ಬ	ಏ	ಬ	ಏ	ಬ
"	ಪುಲ್ಲಿಂಗ	ಮಾಡಿದಂ	ಮಾಡಿದರ್	ಮಾಡಿದಪಂ	ಮಾಡಿ ದಪರ್	ಮಾಡುವಂ	ಮಾಡು ವರ್	ಮಾಳ್ಕೆ, ಮಾಡುಗೆ ಮಾಳ್ಪುದು ಮಾಡುವುದು ಮಾಡಲಿಂ		ಮಾಡಂ	ಮಾಡರ್
"	ಸ್ತ್ರೀಲಿಂಗ	ಮಾಡಿ ದಳ್	ಮಾಡಿದರ್	ಮಾಡಿಪದಪಳ್	ಮಾಡಿ ದಪರ್	ಮಾಡುವಳ್	ಮಾಡು ವರ್	''		ಮಾಡಳ್	ಮಾಡರ್
"	ನಪುಂಸಕ ಲಿಂಗ	ಮಾಡಿದುದು ಮಾಡಿತು ಮಾಡಿತ್ತು ಮಾಡಿದತ್ತು	ಮಾಡಿದವು	ಮಾಡಿಪುದು	ಮಾಡಿ ದವು	ಮಾಡುವುದು	ಮಾಡು ವುವು			ಮಾಡದು	ಮಾಡವು
ಮಧ್ಯಮ ಪುರುಷ		ಮಾಡಿದಯ್	ಮಾಡಿದಿರ್	ಮಾಡಿದವಯ್	ಮಾಡಿ ದಪಿರ್	ಮಾಡುವಯ್	ಮಾಡು ವಿರ್	ಮಾಡು ಮಾಡ ಮಾಳ್ಪುದು ಮಾಡುವುದು	ಮಾಡಿಂ ಮಾಳ್ಪುದು ಮಾಡುವುದು	ಮಾಡಯ್	ಮಾಡಿರ್
ಉತ್ತಮ ಪುರುಷ		ಮಾಡಿದಂ	ಮಾಡಿದೆವು	ಮಾಡಿದಪೆಂ	ಮಾಡಿ ದಪೆವು	ಮಾಡುವೆಂ	ಮಾಡು ವೆವು	ಮಾಡುವೆಂ	ಮಾಡು ವಂ	ಮಾಡೆಂ	ಮಾಡೆವು

58. ವಿಕೃತಿ ಕ್ರಿಯಾಪದವನ್ನು ವಿವರಿಸು ?

ಕೆಲವು ಧಾತುಗಳು ಕಾಲತ್ರಯ ಸೂಚಕಂಗಳಾದ "ದ, ದಪ, ವ" ಎಂಬ ಪ್ರತ್ಯಯಗಳು ಪರವಾದೊಡೆ ಲೋಪಾಗಮಾದೇಶಗಳನ್ನು ಪಡೆವುವು.

(1) ಧಾತುವಿನ ಪ್ರಥಮ ವರ್ಣವು , "ಇ, ಉ" ಕಾರಾಂತವಾಗಿರ್ದು "ದ, ದಪ" ಗಳು ಪರವಾದೊಡೆ. ಕೆಲವಡೆ ಅವಕ್ಕೆ "ಎ ಒ" ಕಾರಾದೇಶವಾಗುವುದು.

ಉದಾಹರಣಂ : : ಇಸು+ದ +ಅಂ = ಎಚ್ಚಂ, ಇಸು+ ದಪ+ ಅಂ= ಎಚ್ಚಪಂ, ಕುಡು+ ದ+ಅಂ = ಕೊಟ್ಟಂ, ಕುಡು+ದ+ಪ+ಅಂ = ಕೊಟ್ಟಪಂ,

(2) ತರ್, ಬರ್ ಎಂಬ ಧಾತುಗಳಿಗೆ ನಿಷೇಧರೂಪದಲ್ಲಿ ಮೊದಲಕ್ಕರಕ್ಕೆ ದೀರ್ಘವೂ, ವಿಧಿರೂಪ ಬಹು ವಚನದಲ್ಲಿ ಕಡೆಯಕ್ಕರಕ್ಕೆ ನಕಾರಾದೇಶವೂ ಬರುವುದು, ನಿಷೇಧರೂಪಕ್ಕೆ – ತರ್=ತಾರಂ, ಬರ್=ಬಾರಂ; ತರ್=ತನ್ನಿ, ಬರ್=ಬನ್ನಿ.

(3) ವರ್ಗ ತೃತೀಯ ವರ್ಣಾಂತ ಕೆಲವು ಧಾತುಗಳಿಗೆ "ದ, ದಪ"ಗಳು ಪರವಾದೊಡೆ ಕಡೆಯಕ್ಕರಕ್ಕೆ ವರ್ಗ ಪ್ರಥಮ ವರ್ಣಾದೇಶ ಬರುವುದು.

ಉದಾಹರಣಂ : : ಮಿಗು+ದ + ಅಂ=ಮಿಕ್ಕಂ, ಬಿಡು +ದಪ+ ಅಂ = ಬಿಟ್ಟಪಂ.

(4) ಕೆಲವು ಸಕಾರಾಂತ ಧಾತುಗಳಿಗೆ "ದ, ದಪ" ಗಳು ಪರವಾದೊಡೆ ದಕಾರಕ್ಕೆ ಚಕಾರಾದೇಶವಾಗುವುದು

ಉದಾಹರಣಂ : : ಇಸು+ ದ+ ಅಂ= ಎಚ್ಚ, ಬಿಸು + ದಪ+ ಅಂ = ಬೆಚ್ಚಪಂ

(5) "ದ ದಪ" ಗಳು ಪರವಾದ ಕೆಲವು ರಕಾರಾಂತದ ಕಡೆಯವರ್ಣಗಳಿಗೂ, ಈ, ಸಾಯ್, ಆನ್, ಓ, ನೋನ್, ಸೀನ್, ಪೂ, ಬಾ, ಬೀ, ನಿಲ್, ಕಲ್, ಬಲ್, ಸೋಲ್, ನೂಲ್, ಪೇಲ್, ಉಳ್, ಮೊದಲಾದ ಧಾತುಗಳಿಗೂ ತಕಾರ ಬರುವುದು.

ಉದಾಹರಣಂ : : ಇತ್ತಂ, ಸತ್ತಪಂ, ಆಂತಂ, ಇಂತೂಹಿಪುದು.

॥ **ವಿಚಾರಂ** ॥ ಈ, ಸಾಯ್ ಎಂಬುವುಗಳ ಮೊದಲಿಗೆ ಹ್ರಸ್ವವು ಸಾಯ್ ಎಂಬುದರ ಕಡೆಗೆ ಲೋಪವು, ನೋನ್, ಸೀನ್ ಎಂಬುವುಗಳ ನಕಾರಕ್ಕೆ ಲೋಪವು, ನಿಲ್, ಸೋಲ್, ನೂಲ್, ಪೇಲ್, ಉಳ್ ಇವುಗಳಿಗೆ ತಕಾರ ವಿಕಲ್ಪವು ಬರುವುದು,

(6) ಆಗು ಪೋಗು ಎಂಬುವುಗಳ ಕಡೆಯ ವರ್ಣಕ್ಕೆ ಲೋಪವು ಬರುವುದು.

ಉದಾಹರಣಂ : : ಆಗು+ದ+ಅಂ=ಆದಂ, ಪೋಗು+ದಪ+ಅಂ ಪೋದಪಂ.

(7) ಕೊಲ್, ಸಲ್, ನಿಲ್, ತರ್, ಬರ್, ಗಳಿಗೆ , "ದ ದಪ"ಗಳು ಪರದೊಳಿರೆ ಕಡೆಯಕ್ಕರಕ್ಕೆ
ನಕಾರಾದೇಶವಾಗುವುದು.

ಉದಾಹರಣಂ : ಕೊಲ್+ ದ + ಅಂ = ಕೊನ್ದಂ, ಸಲ್+ದ+ಅಂ= ಸನ್ದಂ, ನಿಲ್ + ದ+ಅಂ= ನಿನ್ದಂ, ಬರ್+ದಪ+ಅಂ=ಬನ್ದಪಂ.

(8) ಉಣ್ ಕಾಣ್ ಎಂಬುವುಗಳಿಗೆ "ದ,ದಪ"ಗಳು ಪರವಾದೊಡೆ ಉಭಯ ದಕಾರಕ್ಕೆ ಡಕಾರಾದೇಶವು, ಕಾಣ್, ಎಂಬುದರ ಮೊದಲಕ್ಕರಕ್ಕೆ ಹ್ರಸ್ವವು ಬರುವುದು.

ಉದಾಹರಣಂ : ಉಣ್+ದ+ಅಂ = ಉಣ್ಡಂ, ಕಾಣ್+ದಪ+ ಅಂ= ಕಣ್ಡಪಂ.
(9) 'ಕಳ್' ಎಂಬುದಕ್ಕೆ. "ದ, ದಪ"ಗಳು ಪರವಾದೊಡೆ ಳಕಾರ ಲೋಪಿಸುವುದು,
ಉದಾಹರಣಂ : ಕಳ್ + ದ+ಅಂ = ಕದ್ದಂ= ಕಳ್ದಂ , ಕಳ್ + ದಪ+ಅಂ = ಕದ್ದಪಂ= ಕಳ್ದಪಂ.
(10) ಬೇ, ನೋ, ಮೀ ಎಂಬುವುಗಳಿಗೆ "ದ, ದಪ" ಗಳು ಪರವಾದೊಡೆ ದೀರ್ಘಕ್ಕೆ ನ ಕಾರಾದೇಶವಾಗುವುದು.
ಉದಾಹರಣಂ : ಬೇ+ದ+ಅಂ=ಬೆನ್ದಂ, ನೋ+ದಪ+ಅಂ = ನೊನ್ದಪಂ, ಮೀ+ದ+ಅಂ=ಮಿನ್ದಂ.
(11) ಕೊಳ್ ಧಾತುವಿಗೆ "ದ, ದಪ" ಗಳು ಪರವಾದೊಡೆ ಳಕಾರಕ್ಕೆ ಣಕಾರಾದೇಶವೂ, ಪರವಾದ ದಕಾರಕ್ಕೆ ಡಕಾರಾದೇಶವೂ ಆಗುವುದು.
ಉದಾಹರಣಂ : ಕೊಳ್+ದ + ಅಂ= ಕೊಣ್ಡಂ , ಕೊಳ್ + ದಪ+ಅಂ = ಕೊಣ್ಡಪಂ.
(12) ಉಳ್ ಧಾತುವು ಸತ್ತಾರ್ಥವಾದಲ್ಲಿ ಳಕಾರಕ್ಕೆ ಣಕಾರಾದೇಶವು, ಪರವಾದ "ಉದು" ಗೆ ಟುಕಾರಾದೇಶವು, ನಿಷೇಧಕ್ರಿಯೆಯಲ್ಲಿ "ಉದು, ಉವು" ಎಂಬುವುಗಳಿಗೆ "ಅದು, ಅವು" ಎಂದು ಬರುವುವು.
ಉದಾಹರಣಂ : ಉಳ್+ಉದು-ಉಣ್ಟು; ಉಳಿಯದು, ಉಳಿಯವು.
(13) ಉಳ್ ಧಾತುವು ಪುರುಷತ್ರಯದಲ್ಲಿ ಪ್ರಯೋಗಿಸಿದೊಡೆ ಮೊದಲಕ್ಕರಕ್ಕೆ ಒಕಾರಾದೇಶವಾಗುವುದು.
ಉದಾಹರಣಂ : ಒಳಂ, ಒಳಳ್, ಒಳರ್, ಒಳದು, ಒಳವು, ಒಳಯ್, ಒಳಿರ್, ಒಳೆನ್, ಒಳೆವು.
(14) ಕೆಲವಡೆ ಓ ಕಾರಾಂತ ಗಕಾರಾಂತ ನಕಾರಾಂತ ರಕಾರಾಂತ ಸಕಾರಾಂತ ಆಕಾರಾಂತ ಧಾತುಗಳಿಗೆ ಭವಿಷ್ಯತ್ಕಾಲದ "ವ" ಕಾರ ಪರವಾದೊಡೆ ಆ ವಕಾರಕ್ಕೆ ಸಕಾರಾದೇಶವು, ಕೆಲವಡೆ "ಬ" ಕಾರಾದೇಶವು ಆಗುವುದು;
ಉದಾಹರಣಂ : ಓ+ವ+ಅಂ = ಓಪಂ; ಆಗು + ವ+ಅಂ= ಅಪ್ಪಂ, ಮುನಿ+ ವ+ಅಂ=ಮುನಿಪಂ; ತರ್+ವ+ಅಂ = ತರ್ಪಂ, ಬಿಡಿಸು+ವ+ಅಂ_ಬಿಡಿಪಂ; ಸೀಳ್+ವ+ಅಂ= ಸೀಳ್ಪಂ; ಉಣ್+ವ+ಅಂ= ಉಂಬಂ; ತಿನ್+ವ+ಅಂ = ತಿಂಬಂ.

(15) ತವು ಎಂಬ ಧಾತುವಿಗೆ "ವ" ಕಾರಪರವಾದೊಡೆ "ಪ" ಕಾರವಾಗುವುದು, ಕಾಲತ್ರಯಸೂಚಕಂಗಳಾದ "ದ, ದಪ, ವ" ಕಾರಗಳು ಕೆಲವೆಡೆ ದ್ವಿತ್ವವಾಗುತ್ತವೆ.
ಉದಾಹರಣಂ : ತವು+ವ+ಅಂ = ತಪ್ಪಂ; ಬಿದ್ದಂ, ಕದ್ದಂ; ತಂದಪ್ಪಂ, ಮಿಂದಪ್ಪಂ; ಬರ್ಪ್ಪಂ, ಇರ್ಪ್ಪಂ .

ಆಖ್ಯಾತ ವಿಭಕ್ತಿ ರೂಪಮಾಲೆ (ಇರ್ = ಇರು)

ಪುರುಷ	ಲಿಂಗ	ಭೂತಕಾಲ		ವರ್ತಮಾನಕಾಲ		ಭವಿಷ್ಯತ್‌ಕಾಲ		ವಿಧಿರೂಪ		ನಿಷೇಧರೂಪ	
ಪ್ರಥಮ ಪುರುಷ		ಏ	ಬ	ಏ	ಬ	ಏ	ಬ	ಏ	ಬ	ಏ	ಬ
"	ಪುಲ್ಲಿಂಗ	ಇರ್ದಂ	ಇರ್ದರ್	ಇರ್ದಪಂ	ಇರ್ದಪರ್	ಇರ್ಪಂ	ಇರ್ಪರ್	ಇರ್ಕೆ	ಇರ್ಪುದು	ಇರಂ	ಇರರ್
"	ಸ್ತ್ರೀಲಿಂಗ	ಇರ್ದಳ್	ಇರ್ದರ್	ಇರ್ದಪಳ್	ಇರ್ದಪರ್	ಇರ್ಪಳ್	ಇರ್ಪರ್	ಇರುವುದು	ಇರಲಿಂ	ಇರಳ್	ಇರರ್
"	ನಪುಂಸಕ ಲಿಂಗ	ಇರ್ದುದು ಇತ್ತು	ಇರ್ದುವು	ಇರ್ದಪುದು	ಇರ್ದಪುವು	ಇರುವುದು	ಇರುವುವು			ಇರದು	ಇರರ್
ಮಧ್ಯಮ ಪುರುಷ		ಇರ್ದೆಯ್	ಇರ್ದಿರ್	ಇರ್ದಪೆಯ್	ಇರ್ದಪಿರ್	ಇರ್ಪೆಯ್	ಇರ್ದಪಿರ್	ಇರ್, ಇರು, ಇರಿಂ, ಇರ, ಇರ್ಪುದು, ಇರುವುದು		ಇರಯ್	ಇರೆರ್
ಉತ್ತಮ ಪುರುಷ		ಇರ್ದೆಂ	ಇರ್ದೆವು	ಇರ್ದಪೆಂ	ಇರ್ದಪೆವು	ಇರ್ಪೆಂ	ಇರ್ಪೆವು	ಇರ್ಪಂ	ಇರುವಂ	ಇರೆಂ	ಇರೆವು

ವಿಕೃತಿ ಕ್ರಿಯಾಪದೋದಾಹರಣಂ

ಧಾತು.	ಭೂತ	ವರ್ತಮಾನ	ಭವಿಷ್ಯತ್
ಈ	ಇತ್ತಂ	ಇತ್ತಪಂ	ಈವಂ
ಓ	ಓತಂ	ಓತಪಂ	ಓವಂ
ಪುಗು	ಪೊಕ್ಕಂ	ಪೊಕ್ಕಪಂ	ಪೊಗುವಂ
ನಗು	ನಕ್ಕಂ	ನಕ್ಕಪಂ	ನಗುವಂ
ಉಗು	ಒಕ್ಕಂ	ಒಕ್ಕಪಂ	ಒಗುವಂ
ಮಿಗು	ಮಿಕ್ಕಂ	ಮಿಕ್ಕಪಂ	ಮಿಗುವಂ
ಪೋಗು	ಪೋದಂ	ಪೋದಪಂ	ಪೋಪಂ
ಆಗು	ಆದಂ	ಆದವಂ	ಆಗುವಂ
ಅಡು	ಅಟ್ಟಂ	ಅಟ್ಟಪಂ	ಅಡುವಂ
ಸುಡು	ಸುಟ್ಟಂ	ಸುಟ್ಟಪಂ	ಸುಡುವಂ
ತುಡು	ತೊಟ್ಟಂ	ತೊಟ್ಟಪಂ	ತೊಡುವಂ
ಕುಡು	ಕೊಟ್ಟಂ	ಕೊಟ್ಟಪಂ	ಕೊಡುವಂ
ಬಿಡು	ಬಿಟ್ಟಂ	ಬಿಟ್ಟಪಂ	ಬಿಡುವಂ
ಉಡು	ಉಟ್ಟಂ	ಉಟ್ಟಪಂ	ಉಡುವಂ
ನಡು	ನಟ್ಟಂ	ನಟ್ಟಪಂ	ನಡುವಂ
ಪಡು	ಪಟ್ಟಂ	ಪಟ್ಟಪಂ	ಪಡುವಂ
ಇಡು	ಇಟ್ಟಂ	ಇಟ್ಟಪಂ	ಇಡುವಂ
ಕಿಡು	ಕೆಟ್ಟಂ	ಕೆಟ್ಟಪಂ	ಕೆಡುವಂ
ಉಣ್	ಉಣ್ಡಂ	ಉಣ್ಡಪಂ	ಉಣ್ಬಂ
ಕಾಣ್	ಕಣ್ಡಂ	ಕಣ್ಡಪಂ	ಕಾಣ್ಬಂ
ಆನ್	ಆನ್ತಂ	ಆನ್ತಪಂ	ಆನ್ವಂ
ನೋನ್	ನೋತಂ	ನೋತಪಂ	ನೋಪಂ
ಸೀನ್	ಸೀತಂ	ಸೀತಪಂ	ಸೀನ್ವಂ
ನೋ	ನೊಂದಂ	ನೊಂದಪಂ	ನೊಯ್ವಂ
ಪೂ	ಪೂತಂ	ಪೂತಪಂ	ಪೂವಂ
ಬೀ	ಬೀತಂ	ಬೀತಪಂ	ಬೀವಂ
ಬೇ	ಬೆಂದಂ	ಬೆಂದಪಂ	ಬೇವಂ
ಬಾ	ಬಾತಂ	ಬಾತಪಂ	ಬಾಪಂ
ಮೀ	ಮಿಂದಂ	ಮಿಂದಪಂ	ಮೀವಂ

ಧಾತು.	ಭೂತ	ವರ್ತಮಾನ	ಭವಿಷ್ಯತ್
ಸಾಯ್	ಸತ್ತಂ	ಸತ್ತಪಂ	ಸಾವಂ
ತರ್	ತಂದಂ	ತಂದಪಂ	ತರ್ಪಂ
ಬರ್	ಬಂದಂ	ಬಂದಪಂ	ಬರ್ಪಂ
ನಿಲ್	ನಿಂದಂ	ನಿಂದಪಂ	ನಿಲ್ವಂ
ಕಲ್	ಕಲ್ತಂ	ಕಲ್ತಪಂ	ಕಲಿವಂ
ಬಲ್	ಬಲ್ತಂ	ಬಲ್ತಪಂ	ಬಲಿವಂ
ಕೊಲ್	ಕೊಂದಂ	ಕೊಂದಪಂ	ಕೊಲ್ವಂ
ತವು	ತವ್ಧಂ	ತವ್ಧಪಂ	ತವ್ಪಂ
ಇಸು	ಎಚ್ಚಂ	ಎಚ್ಚಪಂ	ಎಸುವಂ
ಬಿಸು	ಬೆಚ್ಚಂ	ಬೆಚ್ಚಪಂ	ಬೆಸುವಂ
ಪಿಸು	ಪೆಚ್ಚಂ	ಪೆಚ್ಚಪಂ	ಪಿಸುವಂ
ಪೆರು	ಪೆತ್ತಂ	ಪೆತ್ತಪಂ	ಪೆರುವಂ
ತಿರು	ತಿತ್ತಂ	ತಿತ್ತಪಂ	ತಿರುವಂ
ಪೊರು	ಪೊತ್ತಂ	ಪೊತ್ತಪಂ	ಪೊರುವಂ
ಎಳ್ಚರು	ಎಳ್ಚತ್ತಂ	ಎಳ್ಚತ್ತಪಂ	ಎಳ್ಚರುವಂ
ಬೇಸರು	ಬೇಸತ್ತಂ	ಬೇಸತ್ತಪಂ	ಬೇಸರ್ವಂ
ಎರು	ಎತ್ತಂ	ಎತ್ತಪಂ	ಎರುವಂ
ಉಳ್	ಉತ್ತಂ	ಉತ್ತಪಂ	ಉಳ್ವಂ
ಕಳ್	ಕದ್ದಂ	ಕದ್ದಪಂ	ಕಳ್ವಂ
ಕೊಳ್	ಕೊಣ್ಡಂ	ಕೊಣ್ಡಪಂ	ಕೊಳ್ವಂ
ಬೀಳ್	ಬಿದ್ದಂ	ಬಿದ್ದಪಂ	ಬೀಳ್ವಂ

59. ಅವ್ಯಯಾತ್ಮಕ ಕ್ರಿಯಾರೂಪ ಭೇದಗಳು ಯಾವುವು ?

ಇದು ನಾಮಪದಾಧೀನ ಕ್ರಿಯೆಯೆಂದು, ಆಖ್ಯಾತ ಪದಾಧೀನ ಕ್ರಿಯೆಯೆಂದು, ರೂಪವಿಹೀನ ಕ್ರಿಯೆಯೆಂದು ಮೂರು ತೆರನಾಗಿರುವುದು.

60 ನಾಮಪದಾಧೀನಕ್ರಿಯೆಯನ್ನು ವಿವರಿಸು?

ಧಾತುವು ಆಖ್ಯಾತ ವಿಭಕ್ತಿಯಿಂ ಕೂಡದೆ ಭೂತ ಭವಿಷ್ಯತ್ಕಾಲಗಳಲ್ಲಿಯೂ, ನಿಷೇಧರೂಪದಲ್ಲಿಯೂ, ವಚನ ಭೇದವಿಲ್ಲದೆ ನಾಮಪದವನಪೇಕ್ಷಿಸಿದೊಡೆ ಕೃದ್ವಾಚಿಯೆಂದು; ಈ ಕೃದ್ವಾಚಿಯು ಪ್ರಥಮ ಪುರುಷದೊಡನೆ ಕೂಡಿದೊಡೆ ಕೃನ್ನಾಮವೆಂದು ಎರಡು ತೆರನಾಗಿರುವುದು.

ಕೃದ್ವಾಚಿ

ಉದಾಹರಣಂ : ಭೂತಕ್ಕೆ – ಕರೆದ, ತಿಂದ; ಕರೆದ ಪಾಲ್, ತಿಂದ ಪಣ್ಗಳ್
ಭವಿಷ್ಯತ್ತಿಗೆ – ಮಾಳ್ಪ, ಪೊಡೆವ, ಮಾಳ್ಪಮನೆ, ಪೊಡೆವ ಭೇರಿಗಳ್
ನಿಷೇಧಕ್ಕೆ – ಕೇಳದ, ಪೇಳದ, ಕೇಳದ ಕಿವಿ, ಪೇಳದ ನುಡಿಗಳ್.

ಕೃನ್ನಾಮ

ಉದಾಹರಣಂ :ಭೂತಕ್ಕೆ– ಮಾಡಿದವಂ, ಮಾಡಿದವಳ್; ಮಾಡಿದವರ್; ಮಾಡಿದದು, ಮಾಡಿದವು.
ಭವಿಷ್ಯತ್ತಿಗೆ – ಮಾಡುವವಂ, ಮಾಡುವವಳ್, ಮಾಡುವವರ್,; ಮಾಡುವದು, ಮಾಡುವವು
ನಿಷೇಧಕ್ಕೆ– ಮಾಡದವಂ, ಮಾಡದವಳ್, ಮಾಡದವರ್, ಮಾಡದದು, ಮಾಡದವು.

61. ಆಖ್ಯಾತ ಪದಾಧೀನ ಕ್ರಿಯೆಯನ್ನು ವಿವರಿಸು ?

ಕ್ರಿಯಾತ್ಮಕವಾದ ಕರ್ತೃಪದವು ತನಗಧೀನವಾದ ಕ್ರಿಯೆಯನ್ನಾಶ್ರೈಸಿದೊಡೆ ಭಾವರೂಪವೆಂದು, ಅಧೀನಕ್ರಿಯೆಯು ಕ್ರಿಯಾತ್ಮಕವನ್ನಾಶ್ರೈಸಿದೊಡೆ ನ್ಯೂನರೂಪವೆಂದು ಎರಡು ತೆರನಾಗಿರುವುದು.

ಭಾವರೂಪ

(1) ಭಾವರೂಪದಲ್ಲಿ. ಪುರುಷತ್ರಯ ಕಾಲತ್ರಯ ವಚನತ್ರಯವೆನ್ನದೆ ಧಾತುವಿನಮೇಲೆ "ಅಲ್" ಎಂಬುದು ಬರುವುದು, ನಿಷೇಧ ಕ್ರಿಯೆಯು ಬಾರದೊಡೆ "ಅಲ್ ಎಂಬುದರ ಕಡೆಗೆ "ಕೆ." ಎಂಬುದು ಬರುವುದು, ಕೆಲವೆಡೆ, "ಲ್, ಕೆ" ಗಳು ಲೋಪಿಸುವುವು.

ಉದಾಹರಣಂ : ಮಾಡು, ಮಾಡಲ್, ಮಾಡಲ್ಕೆ, ಮಾಡ; ಮಾಡಲ್ ಪೋದಂ, ಮಾಡಲ್ಕೆ ಪೋದಂ, ಮಾಡಪೋದಂ

(2) ಸತಿಸಪ್ತಮಿಯ "ಎ"ಕಾರದಿಂದಾದ "ಅಂನಂ, ಅಂನೆಗಂ, ಅಲೊಡಂ, ಇನಂ, ಇನೆಗಂ, ಉದುಂ" ಎಂಬುವು ಬರುವುವು.

ಉದಾಹರಣಂ : ಬರುವಂನಂ, ಮಾಡುವಂನೆಗಂ, ನೋಡಲೊಡಂ, ತೀಡುವಿನಂ, ಪಿಡಿವಿನೆಗಂ, ನೋಡುವುದುಂ

॥ **ವಿಚಾರಂ** ॥ "ಅಂನಂ, ಅನೆಗಂ, ಇನಂ, ಇನೆಗಂ ಎಂಬುವು ವರ್ತಮಾನ ಭವಿಷ್ಯತ್ಕಾಲಗಳಲ್ಲಿಯೂ; ಅಲೊಡಂ, ಉದುಂ ಎಂಬುದು ಭೂತಕಾಲದಲ್ಲಿಯೂ ಬರುವುವು.

(3) ಅಂನೆಗಂ, ಇಂನೆಗಂ, ಎಂನೆಗಂ ಎಂಬುವುಗಳಿಗೆ "ವರಂ, ವರೆಗಂ" ಎಂಬುವುಗಳು ಪರವಾದೊಡೆ ಕಡೆಯ "ಗಂ" ಎಂಬುದಕ್ಕೆ ಲೋಪವು,

ಉದಾಹರಣಂ : ಮಾಡುವಂನೆವರಂ ಬರ್ಪಂ, ಪಿಡಿವಿಂನೆವರಂ ನೋಳ್ಪಂ,

ಎಂನೆವರಂ ಬರ್ಪಿರ್.

(4) ಮುಟ್ಟೆಯೆಂಬುದುಂ ಸತಿಸಪ್ತಮಿಯಲ್ಲಿ ಬರ್ಪುದು.

ಉದಾಹರಣಂ : ನೆಲಮುಟ್ಟೆ ಆಗಸಮುಟ್ಟೆ ಬೆಳೆದುದಾ ಗಿರಿಶರೂಪಂ.

(5) ಉಭಯಕರ್ತೃ ಪದಾಂತರದಲ್ಲಿ ಸತಿಸಪ್ತಮಿಯ "ಎ" ಕಾರವು, "ಅಲೊಡಂ" ಎಂಬುದು, ಪಕ್ಷಾರ್ಥದೆಕಾರಾಂತಮಾದ "ಒಡೆ" ಎಂಬುದು ಬರುವುದು

ಉದಾಹರಣಂ : ಮಂದಿ ತೊಲಗೆ ಮಾತು ನಿಂದುದು, ಆನೆಬರಲೊಡನರಸಂ ಬಂದಂ, ನೋಡುವೊಡೆ ಪೋದಂ,

ನ್ಯೂನರೂಪ

(1) ನ್ಯೂನರೂಪದಲ್ಲಿ ಧಾತುವು ಸಂಪೂರ್ಣಾರ್ಥವನ್ನು ಕೊಡದೆ ಪುರುಷತ್ರಯ ಲಿಂಗತ್ರಯ ವಚನತ್ರಯಗಳಲ್ಲಿಯೂ ವ್ಯತ್ಯಾಸವಾಗದೆ, ಆಖ್ಯಾತಪದವನಾಶ್ರೈಸುವುದು. ಕೆಲವು ಏಕಾಕ್ಷರಧಾತುಗಳಿಗೂ, ಆಕಾರಾಂತ ಯೆಕಾರಾಂತ ಧಾತುಗಳಿಗೂ, ಭೂತಕಾಲದಲ್ಲಿ ಭೂತಪ್ರತ್ಯಯದೊಡನೆ ಉ ಕಾರ ಬರುವುದು, ಉ ಕಾರಾಂತಧಾತುವಿಗೆ ಭೂತಪ್ರತ್ಯಯವಿಲ್ಲದೆ, ಇಕಾರ ಬರುವುದು, ಕೆಲವೆಡೆ ವ್ಯಂಜನಾಂತ ಧಾತುಗಳಿಗೆರಡೂ ಬರುವುವು.

(2) ವರ್ತಮಾನಭವಿಷ್ಯತ್ಕಾಲಗಳಲ್ಲಿ "ಉತುಂ, ಉತ್ತುಂ, ಉತೆ, ಉತ್ತೆ" ಎಂಬುವು ಬರುವುವು, ನಿಷೇಧರೂಪದಲ್ಲಿ "ಆದ" ಎಂಬುದು ಬರುವುದು.

ಉದಾಹರಣಂ : ಭೂತಕ್ಕೆ – ಇತ್ತು, ಓತು: ಕಾದು, ಬೆಂದು; ಕಡಿದು, ಪಿಡಿದು; ಪೊಡೆದು, ತೊಡೆದು; ಓದಿ, ತೋಡಿ;

ಸೀಳ್ದು=ಸೀಳಿ, ಪೇಳ್ದು = ಪೇಳಿ. ಇತ್ತು ಬಂದಂ, ಓತು ಪೋದರ್; ಕಾದುಕೊಟ್ಟಳ್, ಬೆಂದುಪೋದುದು; ಕಡಿದುಪೋದುವು, ಪಿಡಿದುಬಂದಯ್; ಪೊಡೆದು ಪಿಡಿದಿರ್, ತೊಡೆದುಕೊಟ್ಟೆಂ ; ಓದಿತಿಳಿದಂ, ತೋಡಿತರ್ಪರ್; ಸೀಳ್ದು(ಸೀಳಿ)ಬಿಡು, ಪೇಳ್ದು(ಪೇಳಿ) ಪೋಪರ್.

ವರ್ತಮಾನಭವಿಷ್ಯತ್ತಿಗೆ – ಈವತುಂ, ಓವತ್ತುಂ ಕಾವುತೆ, ಬೇವುತ್ತೆ, ಕಡಿವುತುಂ, ಪಿಡಿವುತ್ತುಂ; ಪೊಡೆವುತೆ, ತೊಡೆವುತ್ತೆ; ಓದುತುಂ, ತೋಡುತ್ತುಂ; ಸೀಳುತೆ, ಪೇಳುತ್ತೆ. ಇವುಗಳಿಗೆ ಆಖ್ಯಾತಪದಗಳಂ ಸೇರಿಸುವುದು.

ಉದಾಹರಣಂ : ಈವುತುಂ ಪೋದಂ ಇತ್ಯಾದಿ.

ನಿಷೇಧಕ್ಕೆ – ಈಯದೆ, ಓವದೆ; ಕಾಯದೆ, ಬೇಯದೆ; ಕಡಿಯದೆ, ಪಿಡಿಯದೆ; ಪೊಡೆಯದೆ, ತೊಡೆಯದೆ; ಓದದೆ, ತೋಡದೆ; ಬೀಳದೆ, ಹೇಳದೆ. ಇವುಗಳಿಗೆ ಆಖ್ಯಾತಪದಗಳಂ ಸೇರಿಸುವುದು.

ಉದಾಹರಣಂ : ಈಯದೆ ಬಂದಂ, ಇತ್ಯಾದಿ.

62. ರೂಪ ವಿಹೀನ ಕ್ರಿಯೆಯನ್ನು ವಿವರಿಸು?

ಕೆಲವು ಧಾತುವಿಲ್ಲದೆ ರೂಪಭೇದಾದಿಗಳಿಲ್ಲದೆ ಕ್ರಿಯಾರ್ಥವಂ ಕೊಡುವುವು. ಕೆಲವು ಧಾತುಗಳು ನಿಷೇಧರೂಪದಲ್ಲಿ ಬಂದೊಡೆ ರೂಪವಿಹೀನ ಕ್ರಿಯೆಗಳಾಗುವುವು. ಇವು ಸ್ವತಂತ್ರವಾಗಿಯೂ, ಭಾವರೂಪದೊಳ್ ಬೇರೆ ಕ್ರಿಯೆಯಲ್ಲಿಯೂ, ಪ್ರಯೋಗಿಸುವುವು.

ಒಲ್ಲೆ, ಬಲ್ಲೆ, ಅಲ್ಲ, ಇಲ್ಲ, ಸಾಕು, ಸಾಲದು, ಬೇಕು, ಬೇಡ, ಇತ್ಯಾದಿಗಳು, ಇವುಗಳಂ ಪ್ರಯೋಗ ಮುಖದಿಂದ ತಿಳಿವುದು.

63. ಸಂಯುಕ್ತ ಕ್ರಿಯಾರೂಪವನ್ನು ವಿವರಿಸು?

ಇದು ಪ್ರಾಯೇಣ ಯೆರಡುಧಾತುಗಳಿಂ ಸಂಪೂರ್ಣಾರ್ಥವಂ ಕೊಡುವುದು, ಕ್ರಿಯಾಪದವು ಕರ್ತೃಪದಾನುಸಾರವಾಗಿರುವುದದು. ಎಲ್ಲಿ ಏನೆಂಬ ಪ್ರಶ್ನೆಯಿಂದ ಕರ್ಮಕ ಸಕರ್ಮಕಗಳಂ ತಿಳಿಸುವುದು, ಧಾತುವಿನ ಕೊನೆಯಲ್ಲಿ "ಅಲ್" ಎಂಬುದಿರ್ದು ಪಡು ಧಾತುವಿನಿಂದ ಕರ್ಮಕದೊಳ್ ಕರ್ತೃಪದವು ಕ್ರಿಯಾರ್ಥವನಿತ್ತೊಡೆ ಕರ್ತ್ರರ್ಥಕ ಕ್ರಿಯೆಯೆಂದು, ತೃತೀಯಾಂತ ಕರ್ತೃಪದವೂ ಪ್ರಥಮಾಂತ ಕರ್ಮಪದವೂ ಧ್ವಾಂತಂತದ "ಅಲ್ " ಗೆ "ಪಡು" ಧಾತು ಬರಲ್ ಸಕರ್ಮಕದೊಳ್ ಕ್ರಿಯಾರ್ಥವನಿತ್ತೊಡೆ ಕರ್ಮಣ್ಯರ್ಥಕ ಕ್ರಿಯೆಯೆಂದು ಎರಡು ತೆರನಾಗಿರುವುದು. ಇವು ಪುರುಷತ್ರಯ ಕಾಲತ್ರಯ ವಚನದ್ವಯದಲ್ಲಿಯೂ ರೂಪದ್ವಯದಲ್ಲಿಯೂ ಪ್ರಯೋಗಿಸುವುವು.

ಕರ್ತ್ರರ್ಥಕಕ್ರಿಯೆಗೆ : ಅವಂ ಬರಲ್ಪಟ್ಟಂ, ಇವಳ್ ನುಡಿಯಲ್ಪಟ್ಟಳ್; ಇದು ನೆನೆಯಲ್ಪಟ್ಟುದು, ನೀನಿರಲ್‌ಪಟ್ಟೆಯ್, ನೀವಿರಲ್ಪಟ್ಟಿರ್, ಆನೋದಲ್ ಪಟ್ಟೆಂ, ಆವೋದಲ್ಪಡುವೆವು.

ಸಾಧಾರಣ ರೂಪದಲ್ಲಿ (ಅವಂ ಬರಲ್ಪಟ್ಟಂ – ಅವಂ ಬಂದಂ)

ಕರ್ಮಣ್ಯರ್ಥಕಕ್ರಿಯೆಗೆ : ಕಬ್ಬಿಗನಿಂ ಕಬ್ಬವಾಗಲ್ಪಟ್ಟುದು, ತಾಯಿಂ ಮಗು ಪೊರೆಯಲ್ಪಟ್ಟುದು' (ಕಬ್ಬಿಗನಿಂ ಕಬ್ಬವಾಗಲ್ಪಟ್ಟುದು–ಕಬ್ಬಿಗ ಕಬ್ಬಮಂ ಆಗಿಸಿದಂ) ಇತ್ಯಾದಿಗಳಂ ಪ್ರಯೋಗಮುಖ ದಿಂದರಿವುದು.

ಆಖ್ಯಾತ ಪ್ರಕರಣಂ ಸಂಪೂರ್ಣಂ

VII ಅಪಭ್ರಂಶಪ್ರಕರಣಂ

64. ಅಪಭ್ರಂಶದ ಭೇದಗಳು ಯಾವುವು?

ಶಬ್ದಗಳು ವ್ಯತ್ಯಾಸವಾಗದೆ ಸಂಸ್ಕೃತದಲ್ಲಿಯೂ, ಕನ್ನಡದಲ್ಲಿಯೂ ಸಮವಾಗಿ ಪ್ರಯೋಗವಾದೊಡೆ ತತ್ಸಮವೆಂದು, ಸಂಸ್ಕೃತ ಶಬ್ದಗಳು ವಿಕೃತಿಯನ್ನು ಹೊಂದಿ ಕನ್ನಡದಲ್ಲಿ ಪ್ರಯೋಗವಾದೊಡೆ ತದ್ಭವ ಎಂದು, ಎರಡು ಭೇದವಾಗುವುದು.

65. ತತ್ಸಮವನ್ನು ವಿವರಿಸು?

ಮಣಿ, ಮಂಚಂ, ಪಟ್ಟಂ, ಅಟ್ಟಂ, ಘಟ್ಟಂ, ಸಬಳಂ, ಅಂಗಣಂ, ಗೋಣಿ, ಗಾಳಂ, ಗಂಡಂ, ಮಾಲೆ, ಬಂದಿ, ತೋರಣಂ, ಬಲಂ, ಬಿಲಂ, ಕಾಲಂ, ಅಂಕಂ, ಲತೆ, ಕೋಂಟೆ, ಗಲ್ಲಂ, ಮಲ್ಲಂ, ಕಂಕಣಂ, ತಳಂ. ಇವು ಮೊದಲಾಗಿ ತತ್ಸಮಶಬ್ದಗಳು.

ಉದಾಹರಣಂ : ಸಂಸ್ಕೃತಕ್ಕೆ – ಗಗನಮಣಿ, ಮೌಕ್ತಿಕಮಣಿ, ರತ್ನಮಂಚಂ, ಸುವರ್ಣಮಂಚಂ, ಪಟ್ಟಮಹಿಷಿ, ಪಟ್ಟಗಜಂ. ಇತ್ಯಾದಿಗಳನೂಹಿಪುದು.

ಕನ್ನಡಕ್ಕೆ – ಮುತ್ತುಮಣಿ, ಮಣಿಸರ, ಪಟ್ಟೆಮಂಚ, ಸೆಳೆಮಂಚ; ಪಟ್ಟಸಾಣೆ: ಪಟ್ಟಕತ್ತಿ ಇತ್ಯಾದಿಗಳನೂಹಿಪುದು.

66. ತದ್ಭವವನ್ನು ವಿವರಿಸು ?

(1) ಅಕಾರಕ್ಕೆ "ಇ, ಉ, ಎ, ಐ, ಹ" ಕಾರಗಳು ಬರುವುವು.

ಉದಾಹರಣಂ : ಸಸ್ಯಂ = ಸಸಿ, ಪಾಟಳಂ=ಪಾದರಿ, ರೂಪಂ_ರೂಹು ; ಶ್ರಾಣಂ = ಸಾಣೆ, ಹಂಸಂ–ಅಂಚೆ; ಮಹಿಮೆ–ಮೈಮೆ; ಅಗ್ನಿ=ಹಗ್ಗಿ

(2) ಆಕಾರಕ್ಕೆ "ಎ" ಕಾರ ಬರುವುದು.

ಉದಾಹರಣಂ : ಅನ್ಯಾಯ್ಯಂ = ಅನ್ನೆಯಂ

(3) ಇಕಾರಕ್ಕೆ " ಉ,ಎ, ಏ" ಕಾರಗಳು ಬರುವುವು.

ಉದಾಹರಣಂ : : ಗ್ರಂಥಿ–ಗಂಟು ; ಇಳೆ = ಎಳೆ, ವಿನಾಯಕಂ–ಬೆನಕಂ; ನಿಯಮಂ–ನೇಮಂ.

(4) ಈಕಾರಕ್ಕೆ ಅ ಕಾರಬರುವುದು.

ಉದಾಹರಣಂ : : ಮರೀಚಂ = ಮೆಣಸು.

(5) ಉಕಾರಕ್ಕೆ "ಅ, ಇ, ಒ ಓ" ಕಾರಗಳು ಬರುವುವು.

ಉದಾಹರಣಂ : ಮಾನುಷಂ = ಮಾನಸಂ;

ಖರ್ಜುರ= ಗಜ್ಜಿ; ತುಲಸಿ=ತೊಳಸಿ: ಕುರಂಟಂ= ಗೋರಂಟೆ.

(6) ಊಕಾರಕ್ಕೆ ಓ ಕಾರ ಬರುವುದು.

ಉದಾಹರಣಂ : : ಮೂಢಂ = ಮೋಡಂ

(7). ಋಕಾರಕ್ಕೆ "ಅ, ಇ, ಉ, ಎ, ರಿ" ಕಾರಗಳು ಬರುವುವು.

ಉದಾಹರಣಂ: ಪ್ರಾಕೃತಂ_ಪಾಗದಂ; ಮೃಗಂ= ಮಿಗಂ; ಸೃಗಾಲಂ-ಸುಗಾಲಂ; ದೃಢಂ=ದಡಂ; ಋಣಂ=ರಿಣಂ, ಋಷಿ=ರಿಸಿ.

(8). ಏಕಾರಕ್ಕೆ ಅ" ಕಾರ ಬರುವುದು.

ಉದಾಹರಣಂ : : ಅಲೇಖಂ =ಅಳಕಂ.

(9). ಐಕಾರಕ್ಕೆ "ಎ, ಏ" ಕಾರ ಬರುವುದು.

ಉದಾಹರಣಂ : : ವೈದ್ಯಂ= ಬೆಜ್ಜಂ; ವೈಶಾಖಂ = ಬೇಸಿಗೆ.

(10) ಓಕಾರಕ್ಕೆ "ಉ"ಕಾರ ಬರುವುದು.

ಉದಾಹರಣಂ : : ಉದ್ಯೋಗಂ = ಉಜ್ಜುಗಂ.

(11) ಔಕಾರಕ್ಕೆ "ಒ ಓ"ಕಾರಗಳು ಬರುವುವು

ಉದಾಹರಣಂ : : ಕ್ರೌಂಚಂ-ಕೊಂಚೆಂ; ಕೌಪೀನಂ= ಕೋವಣಂ; ಸೌಭಾಗ್ಯಂ - ಸೋಬಾಗ್ಯಂ.

(12) ಕ ಕಾರಕ್ಕೆ ಗಕಾರವೂ, ಖ ಕಾರಕ್ಕೆ "ಕೆ, ಗೆ" ಕಾರಗಳೂ, ಘ ಕಾರಕ್ಕೆ ಗ ಕಾರವೂ ಬರುವುವು.

ಉದಾಹರಣಂ : ಮಲ್ಲಿಕೆ=ಮಲ್ಲಿಗೆ, ಪೇಟಿಕೆ-ಪೇಟಿಗೆ, ವಿಶಾಖಂ=ವಿಸಾಕೆ, ಶೃಂಖಲಂ=ಸಂಕೋಲೆ, ಮುಖಂ = ಮೊಗಂ, ಖರ್ಜು= ಗಜ್ಜಿ, ಘೂರ್ಜರಂ-ಗುಜ್ಜರಂ, ಮಾಘಂ = ಮಾಗಂ

(13) ಚಕಾರಕ್ಕೆ "ಜ, ದ, ಸ" ಕಾರಗಳೂ, ಛ ಕಾರಕ್ಕೆ ಚ ಕಾರವೂ, ಜ ಕಾರಕ್ಕೆ "ತ, ಯ,ಸ" ಕಾರಗಳೂ, ಝುಕಾರಕ್ಕೆ ಜಕಾರವೂ ಬರುವುವು.

ಉದಾಹರಣಂ : ಕಾಚಂ-ಗಾಜು, ಲಾಮಚಂ-ಲಾಮಜಂ ಉಚ್ಚಂ=ಉದ್ದಂ, ಚರ್ಮಂ= ಸಮ್ಮಂ, ಚಾರಣಂ=ಸಾರಣಂ, ಗುಚ್ಛಂ = ಗುಚ್ಚಂ, ಛಲಂ =ಚಲಂ; ಬೀಜಂ= ಬಿತ್ತು, ರಾಜಂ=ರಾಯಂ, ಕುಟಜಂ= ಕೊಡಸಿಗೆ; ಝುರಂ=ಜರಂ, ಝುಳಂ = ಜಳಂ.

(14) ಟಕಾರಕ್ಕೆ ಡಕಾರವೂ, ಠ ಕಾರಕ್ಕೆ "ಟ ಡ" ಕಾರಗಳೂ, ಢಕಾರಕ್ಕೆ,ಡ. ಕಾರವೂ ಬರುವುವು

ಉದಾಹರಣಂ : ಕಟಕಂ = ಕಡಗಂ, ಘಟಿಕೆ = ಗಡಿಗೆ, ಪಠಂ=ಪಟಂ, ಜಠರಂ=ಜಟರಂ, ಕುಠಾರಂ = ಕೊಡಲಿ, ಮೂಢಂ=ಮೂಡಂ, ರೂಢಿ-ರೂಡಿ.

(15) ತಕಾರಕ್ಕೆ "ಗ,ಚ,ಟ,ದ"ಕಾರಗಳೂ, ಥ ಕಾರಕ್ಕೆ "ತ"ಕಾರವು, ದಕಾರಕ್ಕೆ, "ಜ,ಯ,ವ" ಕಾರಗಳು ಧಕಾರಕ್ಕೆ "ದ" ಕಾರವೂ, ನಕಾರಕ್ಕೆ "ಣ" ಕಾರವೂ ಬರುವುವು,

ಉದಾಹರಣಂ : ಅತಸಿ=ಅಗಸೆ, ನಿತ್ಯಂ=ನಿಚ್ಚಂ, ಪತ್ತನಂ=ಪಟ್ಟಣಂ, ಭೂತಿ-ಬೂದಿ, ಜಾತಿ=ಜಾದಿ; ಪಥಂ=ಪತಂ, ಕಥೆ-ಕತೆ, ದಂತಂ=ಜಂತಂ, ಪಾದಂ=ಪಾಯಂ, ಪಾದುಕೆ=ಹಾವುಗೆ; ಧೂಳಿ= ದೂಳಿ, ವೀಧಿ=ಬೀದಿ; ಕೌಪೀನಂ= ಕೋವಣಂ, ಪತ್ತನಂ=ಪಟ್ಟಣಂ.

(16)ಪಕಾರಕ್ಕೆ "ವ,ಹ" ಕಾರಗಳೂ, ಫಕಾರಕ್ಕೆ "ಪ, ಹ" ಕಾರಗಳೂ, ಬಕಾರಕ್ಕೆ "ವ" ಕಾರವೂ, ಭಕಾರಕ್ಕೆ "ಬ, ವ" ಕಾರಗಳೂ, ಮಕಾರಕ್ಕೆ "ವ" ಕಾರವೂ ಬರುವುವು.

ಉದಾಹರಣಂ : ದೀಪಿಕೆ = ದೀವಿಗೆ, ವಾಪಿ = ಬಾವಿ, ಪಶು=ಹಸು ಪಥಂ=ಹಾದಿ, ಫಾಲಂ= ಪಾಲಂ, ಫಲಂ=ಪಲಂ, ಫಲಕ=ಹಲಗೆ; ನಿಬಿಡಂ=ನಿವಿಡಂ, ಕಬಲಂ=ಕವಳಂ, ಕುಂಭಂ=ಕುಂಬಂ, ಸ್ತಂಭಂ=ಕಂಬಂ, ವೃಷಭಂ=ಬಸವಂ ; ಕಾಮಂ = ಕಾವಂ, ಭೀಮಂ= ಬೀವಂ

(17) ಯಕಾರಕ್ಕೆ – "ಗ, ಜ, ನ" ಕಾರಗಳು ಬರುವುವು.

ಉದಾಹರಣಂ : : ದ್ವಯಂ=ದುಗಂ, ತ್ರಯಂ=ತಿಗಂ; ಯೋಗಿ= ಜೋಗಿ, ಯಮಂ=ಜವಂ, ಯುಗಂ= ನಗಂ.

(18). ರಕಾರಕ್ಕೆ "ಲ,ಳ" ಕಾರಗಳು ಬರುವುವು,

ಉದಾಹರಣಂ : ಕುಠಾರಂ = ಕೊಡಲಿ, ಮರೀಚಂ = ಮೆಳಸು(ಮೆಣಸು)

(19) ವಕಾರಕ್ಕೆ "ಬ" ಕಾರವು ಬರುವುದು.

ಉದಾಹರಣಂ : ಶವಂ=ಸಬಂ, ವಿಷಂ= ಬಿಸಂ,

(20) "ಶ,ಷ" ಕಾರಗಳಿಗೆ "ಚ, ಸ"ಕಾರಗಳು ಬರುವುವು,

ಉದಾಹರಣಂ : ವಂಶಂ= ಬಂಚಂ, ಕೋಶಂ=ಕೋಸಂ, ರಾಶಿ= ರಾಸಿ, ದೇಶಂ=ದೇಸಂ; ಷಷ್ಠಿ – ಚಟ್ಟಿ, ದೋಷಂ=ದೋಸಂ, ಮಷಿ=ಮಸಿ, ದೂಷಣಂ=ದೂಸಣಂ.

(21) ಸಕಾರಕ್ಕೆ "ಚ" ಕಾರಬರುವುದು,

ಉದಾಹರಣಂ : ಹಂಸ-ಅಂಚೆ, ಕಂಸಂ=ಕಂಚು,

(22) ಹಕಾರಕ್ಕೆ "ಅ, ಗ ಣ, ಯ, ವ" ಕಾರಗಳು ಬರುವುವು,

ಉದಾಹರಣಂ : ಹಂಸ = ಅಂಚೆ, ಸಿಂಹಂ =ಸಿಂಗಂ; ಸನ್ನಾಹಂ=ಸನ್ನಣಂ; ಕುಹಕಂ= ಕೊಯಕಂ, ದೇಹಂ= ದೇಯಂ, ರಾಹು =ರಾವು, ಬಾಹು, =ಬಾವು,

(23) ಸಂಯುಕ್ತಾಕ್ಷರದಲ್ಲಿ ಅರ್ಧಾಕ್ಷರವು ಪೂರ್ಣಾಕ್ಷರವಾಗುವುದು.

ಉದಾಹರಣಂ : ರತ್ನಂ-ರತುನಂ ಮುಕ್ತಿ-ಮುಕುತಿ, ಶ್ರೀ = (ಶ್ರೀ) ಸಿರಿ

(24) ಸಂಯುಕ್ತಾಕ್ಷರಗಳಲ್ಲಿ ಮೇಲಿನ "ದ, ಧ" ಕಾರಗಳು ಲೋಪಿಸಿ ಒತ್ತಕ್ಷರ ಯಕಾರವು ಜಕಾರವಾಗುವುದು.

ಉದಾಹರಣಂ : : ವಿದ್ಯೆ=ಬಿಜ್ಜೆ, ಉದ್ಯೋಗಂ= ಉಜ್ಜುಗಂ; ಸಂಧ್ಯೆ=ಸಂಜೆ, ಧ್ಯಾನಂ= ಜಾನಂ

(25) ಕೆಲವಡೆ ದ್ವಿತ್ವಾಕ್ಷರದ ರೇಫೆಯು ಲೋಪಿಸುವುದು.

ಉದಾಹರಣಂ : : ಕ್ರಮಂ= ಕ್ರಮಂ, ಕ್ರೂರಂ = ಕೂಳ್; ಕರ್ಪೂರಂ-ಕಪ್ಪುರಂ

(26) ಕ್ಷಕಾರದಲ್ಲಿ ಷಕಾರವು ಲೋಪಿಸಿ ಮೇಲಿನ ಕಕಾರವು ಪೂರ್ಣಾಕ್ಷರವಾಗುವುದು, ಕೆಲವೆಡೆ ಚ ಕಾರವಾಗುವುದು,

ಉದಾಹರಣಂ : ಕ್ಷಾರಂ= ಕಾರಂ, ಕ್ಷೀರಂ = ಕೀರಂ; ಪಕ್ಷಿ-ಪಕ್ಕಿ, ರಕ್ಷೆ-ರಕ್ಕೆ, ಅಕ್ಷಯಂ-ಅಚ್ಚಯಂ, ಭಿಕ್ಷೆ=ಬಿಚ್ಚೆ, ರಕ್ಷಣೆ-ರಚ್ಚಣೆ:

(27) ತಕಾರದೊಡನೆ ಕೂಡಿದ ಮೇಲಿನ "ಕ,ಪ, ಸ " ಕಾರಗಳು ಲೋಪಿಸಿ ತಕಾರವಾಗುವುವು.

ಉದಾಹರಣಂ : ವಿರಕ್ತಿ-ವಿರತ್ತಿ, ಸಕ್ತಿ-ಸತ್ತಿ ; ಗುಪ್ತಂ=ಗುತ್ತಂ, ಸಪ್ತ ವಿ=ಸತ್ತವಿ; ಕಸ್ತೂರಿ =ಕತ್ತುರಿ, ಪುಸ್ತಕ = ಹೊತ್ತಗೆ

(28) ದ್ವಿತ್ವದಿಂ ಕೂಡಿದ ಹಕಾರವು "ನ,ಮ" ಕಾರವಾಗುವುದು.

ಉದಾಹರಣಂ : ಚಿಹ್ನಂ=ಚಿನ್ನಂ; ಬ್ರಹ್ಮಂ= ಬೊಮ್ಮಂ.

(29) ಕೆಲವೆಡೆ ಸಂಯುಕ್ತಾಕ್ಷರದಲ್ಲಿ ಕೆಳಗಿನ ಒತ್ತು ಲೋಪಿಸುವುದು.

ಉದಾಹರಣಂ : ಅಗ್ನಿ-ಅಗ್ಗಿ, ಪ್ರತ್ಯಯಂ = ಪತ್ಯಯಂ, ಪ್ರಜ್ವಳಂ =ಪಜ್ಜಳಂ.

(30). ದ್ವಿತ್ವಾಕ್ಷರದ "ಸ"ಕಾರವು ಲೋಪಿಸಿ ಕೆಳಗಿನ "ಫ" ಕಾರವು ನಿಲ್ಲುವುದು.

ಉದಾಹರಣಂ : ಸ್ಫಟಿಕಂ=ಪಟಿಕಂ, ಸ್ಪಟ=ಪಟ, ಸ್ಫಾರಂ=ಪಾರಂ

(31) ಕೆಲವು ದ್ವಿತ್ವಾಕ್ಷರದಲ್ಲಿ ಕೆಳಗಿನ "ವ" ಕಾರವು ಲೋಪಿಸುವುದು,

ಉದಾಹರಣಂ : ಶ್ವಾನಂ=ಸಾನಂ, ಸ್ವರಿತಂ=ಸರಿತಂ ಸ್ಮರಂ-ಸರಂ, ಧ್ವನಿ-ದನಿ

(32) ಕೆಲವೆಡೆ ದೀರ್ಘಕ್ಕೆ ಹ್ರಸ್ವವೂ ಹ್ರಸ್ವಕ್ಕೆ ದೀರ್ಘವೂ ಬರುವುದು,

ಉದಾಹರಣಂ : : ಆಷಾಢಂ=ಆಸಡಂ, ದ್ವಿತೀಯಂ-ಬಿದಿಗೆ, ದುಕೂಲಂ-ದುಗುಲಂ, ನವಮಿ-ನಾಮಿ ಕುವಲಯಂ=ಕೋವಳೆ, ಶೃಂಖಲಂ=ಸಂಕೋಲೆ

(33) ಕೆಲವಡೆ ವರ್ಣಗಳು ಲೋಪಾಗಮಗಳಾಗುವುವು,

ಉದಾಹರಣಂ : : ನವಮಿ =ನಾಮಿ, ವಿನಾಯಕಂ – ಬೆನಕಂ, ಕುವಲಯಂ-ಕೋವಳೆ, ಕುಟಜಂ-ಕೊಡಸಿಗೆ.

ಅಪಭ್ರಂಶಪ್ರಕರಣಂ ಸಂಪೂರ್ಣಂ.

VIII ಅವ್ಯಯ ಪ್ರಕರಣಂ

67. ಅವ್ಯಯವೆಂದೊಡೇನು?

ನಾಮಪ್ರತ್ಯಯ ಕ್ರಿಯಾಪ್ರತ್ಯಯಗಳನ್ನು ಹೊಂದದೆ ಮೊದಲಿನಂತಿದ್ದು, ಸಂದರ್ಭಾನುಸಾರವಾಗಿ ಪರಿಣಮಿಸುವುದು.

68. ಇದರ ಭೇದಗಳು ಯಾವುವು?

ಕ್ರಿಯಾವಿಶೇಷಣಾವ್ಯಯವೆಂದು, ಸಂಬಂಧಕಾವ್ಯಯವೆಂದು, ಅನುಕರಣಾವ್ಯಯವೆಂದು, ಭಾವ ಬೋಧಕಾವ್ಯಯವೆಂದು ನಾಲ್ಕು ಭೇದವಾಗಿರುವುದು.

69. ಕ್ರಿಯಾವಿಶೇಷಣಾವ್ಯಯವನ್ನು ವಿವರಿಸು ?

ಇದು ಕ್ರಿಯೆಯೆಯನ್ನು ಏಶ್ಲೇಪಿಸುವ, ಕಾಲ, ಸ್ಥಾನ, ದಿಕ್ಕು, ರೀತಿ, ಮೌನ, ಹೆಚ್ಚಿಗೆ, ಜಾಗ್ರತೆ, ನಿಜ, ಭ್ರಮಣೆ, ಸಂಖ್ಯೆ, ಆಕಸ್ಮಿಕ ಮೊದಲಾದುವುಗಳಲ್ಲಿ ಪ್ರಯೋಗಿಪುದು?

ಉದಾಹರಣಂ :

ಕಾಲಕ್ಕೆ – ಅಂದು, ಇಂದು, ಉಂದು, ಆಗ, ಈಗಳ್, ನಿನ್ನೆ, ಮೊನ್ನೆ, ನಾಳೆ, ನಾಳಿದು, ಆನುಂ, ಅಣಂ.

ಸ್ಥಾನಕ್ಕೆ – ಅಲ್ಲಿ, ಇಲ್ಲಿ, ಉಲ್ಲಿ, ಆನುಂ, ಅಣಂ.

ದಿಕ್ಕಿಗೆ – ಅತ್ತಲ್, ಇತ್ತಲ್, ಉತ್ತಲ್; ಅತ್ತ, ಇತ್ತ, ಉತ್ತ.

ರೀತಿಗೆ – ಅಂತು, ಇಂತು, ಎಂತು, ಎಹಗೆ.

ಮೌನಕ್ಕೆ – ಸುಮ್ಮನೆ, ಬಿನ್ನನೆ, ಗುರುಗುಮ್ಮನೆ.

ಹೆಚ್ಚಿಗೆಗೆ – ನೀಡುಂ, ಕರಂ, ಆದಂ, ಮಿಗೆ.

ಜಾಗ್ರತೆಗೆ – ಭೋರನೆ, ಬೇಗನೆ, ಚಡುಪುಡನೆ

ನಿಜಕ್ಕೆ – ದಲ್, ವಲಂ.

ಭ್ರಮಣಕ್ಕೆ – ತಿರ್ರನೆ, ಘರ್‌ರನೆ.

ಸಂಖ್ಯೆಗೆ – ಆನುಂ, ಅಣಂ. (ಒಂದಾನುಂ, ಮೂರಣಂ)

ಆಕಸ್ಮಿಕಕ್ಕೆ – ಪವ್ವನೆ, ಚಕ್ಕನೆ ಇತ್ಯಾದಿಗಳನೂಹಿಪುದು.

70. ಸಂಬಂಧಕಾವ್ಯಯವನ್ನು ವಿವರಿಸು?

ಇದು ಪದಗಳನ್ನೂ, ವಾಕ್ಯಗಳನ್ನೂ ಪೋಣಿಸುವುದರಲ್ಲಿ ಬರುವುದು.

ಉದಾಹರಣಂ : ಮತ್ತೆ, ಮತ್ತಂ, ಮೇಣ್, ಆದೊಡೆ, ಬಳಿಕ, ಬಳಿ, ಇವು ಮೊದಲಾದುವನರಿವುದು...

71. ಅನುಕರಣಾವ್ಯಯವನ್ನು ವಿವರಿಸು?

ಇವು ಚೇತನಾಚೇತನಗಳಿಂದುಂಟಾದ ಧ್ವನಿಗಳ ದ್ವಿರುಕ್ತಿಗಳಿಂ ಕ್ರಿಯೆಯನ್ನು ವಿಶ್ಲೇಷಿಸುವುದು.

ಉದಾಹರಣಂ : ಗಳಗಳನೆ, ಫಲ್ ಫಲ್ಲನೆ, ಸಳಸಳನೆ, ಗುಳುಗುಳನೆ. ಇತ್ಯಾದಿ

72, ಭಾವಬೋಧಕಾವ್ಯಯಗಳನ್ನು ವಿವರಿಸು ?

ಇದು ದುಃಖ , ಅಸಹ್ಯ, ಆಶ್ಚರ್‍ಯ, ಕರುಣ, ನಿವಾರಣೆ, ಹಾಸ್ಯ, ಸ್ಮರಣೆ, ವಿಚಾರ, ಸಂಬೋಧನೆ ಮೊದಲಾದುವರಲ್ಲಿ ವರ್ತಿಸಿ ಪದಗಳನ್ನೂ ಕ್ರಿಯೆಯನ್ನೂ ವಿಶೇಷಿಸುವುದು.

ಉದಾಹರಣಂ : ದುಃಖಕ್ಕೆ – ಅಹ, ಅಹಹ, ಅಕ್ಕಟಾ, ಅಯ್ಯೋ
ಅಸಹ್ಯಕ್ಕೆ– ಚೀಃ, ಇಸಿ.
ಆಶ್ಚರ್ಯಕ್ಕೆ – ಐಸಲೆ, ಅಮಮ.
ಕರುಣಕ್ಕೆ – ಅಯ್ಯೋ, ಅಕ್ಕಟಾ.
ನಿವಾರಣೆಗೆ – ಓಹೋ, ಹೋ.
ಹಾಸ್ಯಕ್ಕೆ – ಗಹಗಹ, ಕಿಲಿಕಿಲಿ. (ಗಹಗಹಿಸಿದಂ)
ಸ್ಮರಣಕ್ಕೆ, ಎಲೆ, ಏ,
ವಿಚಾರಕ್ಕೆ – ಎಲೆ, ಏ.
ಸಂಬೋಧನೆಗೆ – ಎಲೆ. ಏ! ಇತ್ಯಾದಿಗಳನೂಹಿಪುದು.

॥ವಿವರಂ॥ ಪದಗಳಲ್ಲಿ ಅನುಕರಣೆಯಿರ್ದೊಡಂ "ಅದು, ಅನೆ " ಇರ್ದೊಡಂ ಅವ್ಯಯವೆಂದು ತಿಳಿವುದು.

ಉದಾಹರಣಂ : : ನೂಂಕದು, ಕಮ್ಮನೆ, ಇತ್ಯಾದಿಗಳನೂಹಿಪುದು.

ಅವ್ಯಯ ಪ್ರಕರಣಂ ಸಂಪೂರ್ಣಂ

IX ಪ್ರಯೋಗ(ವಾಕ್ಯಾನ್ವಯ) ಪ್ರಕರಣಂ

73. ವಾಕ್ಯವೆಂದೊಡೇನು?

ಕರ್ತೃಪದವು ತನ್ನ ಕಾರ್ಯಾನುಸಾರಮಾದ ಕ್ರಿಯೆಯಿಂ ಸಂಪೂರ್ಣಾರ್ಥವಿತ್ತೊಡೆ ವಾಕ್ಯವೆನಿಪುದು.

74. ಇದರ ಭೇದಗಳು ಯಾವುವು ವಿವರಿಸು?

ಸಾಮಾನ್ಯವಾಕ್ಯವೆಂದು, ವಿಶೇಷಿತವಾಕ್ಯವೆಂದು, ಸಂಯುಕ್ತವಾಕ್ಯವೆಂದು ಮೂರು ಭೇದಗಳಾಗಿರುವುವು.

(1) ಸಕರ್ಮಕ ವಾಕ್ಯವಾಗಲಿ ಅಕರ್ಮಕವಾಕ್ಯವಾಗಲಿ ಸ್ವತಂತ್ರವಾಗಿ ಪ್ರಯೋಗಿಸಿದೆಡೆ ಸಾಮಾನ್ಯವಾಕ್ಯವೆನಿಪುದು.

ಉದಾಹರಣಂ : ರಾಯಂ ರಾಜಿಸಿದಂ, ರಾಯಂ ರಾಜ್ಯಮಂ ರಕ್ಷಿಸಿದಂ. ಇಲ್ಲಿ ರಾಯಂ ಎಂಬ ಕರ್ತೃಪದವು ರಾಜಿಸಿದ್ದು ಎಂಬ ಕ್ರಿಯಾಪದವು ಬಂದು ಸ್ವತಂತ್ರಾರ್ಥವಿತ್ತುದರಿಂ ಸಾಮಾನ್ಯ ವಾಕ್ಯವು.

(2) ಅಕರ್ಮಕವಾಕ್ಯವಾಗಲಿ ಸಕರ್ಮಕವಾಕ್ಯವಾಗಲಿ ಸಂಪೂರ್ಣಾರ್ಥವನ್ನು ಕೊಡದೆ ಪರತಂತ್ರದಿಂ ಸಂಪೂರ್ಣವಾದೊಡೆ ವಿಶೇಷಿತ ವಾಕ್ಯವೆನಿಪುದು.

ಉದಾಹರಣಂ : : ರಾಯಂರಕ್ಷಿಸೆ ರಾಜ್ಯಂ ರಾಜಿಸಿದುದು. ಇಲ್ಲಿ ರಾಜ್ಯಂ ಸ್ವತಂತ್ರವಾಗಿ ರಾಜಿಸದೆ, ರಾಯಂರಕ್ಷಿಸೆ ರಾಜಿಸಿದುದಾಗಿ ವಿಶೇಷಿತ ವಾಕ್ಯವು.

(3) ಅನೇಕ ಪ್ರಧಾನವಾಕ್ಯಗಳು ಸಮುಚ್ಚಯಾನುಸಾರವಾದ ಸಂಬಂಧಕಾನ್ವಯದಿಂದ ಸೇರಿದೊಡೆ ಸಂಯುಕ್ತವಾಕ್ಯವಾಗುವುದು.

ಉದಾಹರಣಂ : ರಾಯರಾಜಿಸಿದಂ ಮತ್ತುಂ ರಾಜ್ಯಂ ರಾಜಿಸಿದುದು. ಇಲ್ಲಿ ಉಭಯವಾಕ್ಯವು ಮತ್ತು ಎಂಬುದರಿಂದ ಸೇರಿರುವುದರಿಂದ ಸಂಯಕ್ತವಾಕ್ಯವು.

75. ಈ ವಾಕ್ಯಗಳನ್ನು ಪ್ರಯೋಗಿಸುವಾಗ ವಿಧಿಯೇನು ?

ಇದರಲ್ಲಿ "ಲಿಂಗ, ವಿಭಕ್ತಿ, ವಚನ, ವಿಶೇಷಣ, ವಿಶೇಷ್ಯ, ಕರ್ತೃ, ಕರ್ಮ, ಕ್ರಿಯೆ" ಇವುಗಳಿಗನುಸಾರವಾಗಿ ಪ್ರಯೋಗಿಪುದು,

76. ಇವುಗಳನ್ನು ವಿವರಿಸು?

ಲಿಂಗದಲ್ಲಿ

(1) ಸಂಸ್ಕೃತದಲ್ಲಿ ಪುರುಷ ಸ್ತ್ರೀಯರಿಗೆ ಉಳಿದ ಪುಂಸ್ತ್ರೀನಪುಂಸಕ ಲಿಂಗಗಳು

ಕನ್ನಡದಲ್ಲಿ ನಪುಂಸಕವಾಗುವುದು.

ಉದಾಹರಣಂ : : ಮೃಗವಿರ್ದುದು, ಗಿರಿಯಿರ್ದುದು, ನದಿಯಾದುದು, ಬುದ್ಧಿಯಿರ್ದುದು, ಫಲವಾದುದು, ಜ್ಞಾನಮಾದುದು.

(2) ವಿಶೇಷ್ಯಲಿಂಗವು ವಿಶೇಷಣಕ್ಕೂ ವಿಶೇಷಣಲಿಂಗವು ವಿಶೇಷ್ಯಕ್ಕೂ ಬರುವುದು,

ಉದಾಹರಣಂ : :

ವಿಧುವಿರಹಿಣಿ ನವಕುಮುದಿನಿ ।
ಮಧುಮಿತ್ರನಿರೂಪಣಾತಿಭೀಕರ ವಿಚರ ।
ನ್ಮಧುಕರಮರಾಳದರ್ಶನ ।
ವಿಧುರಿತೆಸುಗಿದಂತೆ ಮುಗಿದುದಸಿತಾಂಭೋಜಂ ॥ಕಂ॥

ಇಲ್ಲಿ"ವಿರಹಿಣಿ, ಕುಮುದಿನಿ, ವಿಧುರಿತೆ" ಎಂಬ ವಿಶೇಪಣಪದಗಳು ಸ್ತ್ರೀಲಿಂಗವಾಗಿ ಅಸಿತಾಂಭೋಜಂ ಎಂಬ ವಿಶೇಷ್ಯಪದವು ನಪುಂಸಕವಾಗಿರುವದರಿಂದ ವಿಶೇಷಣಗಳೆಲ್ಲ ನಪುಂಸಕವೆಂದು ತಿಳಿವುದು;

ಇಳೆಯಂ ಪಾಲಿಪಸೈಪಿನೊಂದು ಬೆಳೆಯಂ ಚಂದ್ರಾತ್ಮ ಸದ್ವೃತ್ತಿ ನಿ
ರ್ಮಳೆಯಂ ನಿರ್ಮಿತಕರ್ಮಧರ್ಮ ಸಳೆಯಂ ಪದ್ಮೋತ್ಪಲೋತ್ಫುಲ ಸಂ ।
ಕುಳೆಯಂ ಕೋಕ ಬಳಾಕ ಹಂಸ ಬಳೆಯುಂ ಡಿಂಡೀರ ಪಿಂಡೌಘಮಂ ।
ಜುಳೆಯಂ ಪೆಂಪಿನಲಂಪನಾಳ್ದ ಪೊಳೆಯಂಪೇಳ್ಬಂಣಿಸಲ್ಪರ್ಕುಮೇ ॥ ಮ ॥

ಇಲ್ಲಿ ನಿರ್ಮಳೆಯಂ, ಫಳೆಯಂ, ಸಂಕುಳೆಯಂ, ಬಳೆಯಂ, ಜುಳೆಯಂ ಎಂಬ ವಿಶೇಷಣ ಪದಗಳಾಗಿರುವುದರಿಂದ ಪೊಳೆಯಂ ಎಂಬ ವಿಶೇಷ್ಯಪದವನ್ನು ನದೀನಾರೀ ಎಂಬಂತೆ ಸ್ತ್ರೀಲಿಂಗವೆಂದು ತಿಳಿವುದು.

(3) ಅಗಸ್ತ್ಯ ಜನಕಂಗಳನೇಕಂಗಳ್, ಇಲ್ಲಿ ಜನಕ ಶಬ್ದವು ಪುಲ್ಲಿಂಗವಾಗಿದ್ದು ಅನೇಕಂಗಳ್ ಎಂಬಲ್ಲಿ ನಪುಂಸಕವಾಯ್ತು.

ವಿಭಕ್ತಿಯಲ್ಲಿ–

(1)ಸಂಬೋಧನ ವಿಭಕ್ತಿಯು ಬಹುವಚನಕ್ರಿಯೆಯಲ್ಲಿ ಏಕವಚನವಾಗುವದು, ಕೆಲವೆಡೆ ಧಾತುವು ಅಕಾರಾಂತವಾಗುವುದು.

ಉದಾಹರಣಂ : ನೀಮೆ ಬಿಡಿಸಿದಿರಲ್ತೆ, ಎಲೆ ಸುಕುಮಾರ ಶಂಕರ ಕುಮಾರಕ ಬಾರ.

(2) ಕರ್ತೃವಿಭಕ್ತಿಯು ಕರ್ತೃಪದದಲ್ಲಿಯೂ ಕಾರಕ ಕ್ರಿಯೆಯಲ್ಲಿಯೂ ಸಂಬೋಧನೆಯಲ್ಲಿಯೂ ಬರುವುದು.

ಉದಾಹರಣಂ : ಅವಂಬಂದಂ, ಆತನೇಯಿವಂ, ಎಲೆತುಂಬಿ

(3) ಕರ್ಮವಿಭಕ್ತಿಯು ಕರ್ಮಪದದಲ್ಲಿ ಬರುವುದು–

ಉದಾಹರಣಂ : ಕಾಣ್ಕೆಯನಿಕ್ಕಿದಂ

(4) ಕರಣವಿಭಕ್ತಿಯು ಕರ್ತೃವಿನಲ್ಲಿಯೂ, ಕರಣದಲ್ಲಿಯೂ, ಹೇತುವಿನಲ್ಲಿಯೂ ಬರುವುದು,

ಉದಾಹರಣಂ : ಅರಿಯಿಂ ಶರಂ ಬಿಡಲ್ಪಟ್ಟುದು, ಕತ್ತಿಯಿಂ ಪೊಡೆದಂ, ಪೆಜ್ಜೆಯಿಂ ತಿಳಿದಂ.

(5) ಸಂಪ್ರದಾನ ವಿಭಕ್ತಿಯು ಕ್ರಿಯಾವಿಶೇಷಣಕ್ಕೂ, ಉಪಮಾನಕ್ಕೂ, ಬರುವುದು.

ಉದಾಹರಣಂ : ಶರಕ್ಕೀಡಾದಂ, ಆತಂಗೀತನೋರಗೆ

(6) ಅಪಾದಾನ ವಿಭಕ್ತಿಯು ಬಿಡುವುದರಲ್ಲಿಯೂ, ಪ್ರಾಪ್ತಿಯಲ್ಲಿಯೂ ಬರುವುದು,

ಉದಾಹರಣಂ : ಮರದತ್ತಣಿಂಪಣ್ಣುದಿರ್ದುದು, ರಾಯನತ್ತಣಿಂ ಸಿರಿಬಂದುದು.

(7) ಸಂಬಂಧವಿಭಕ್ತಿಯು ಸಂಬಂಧದಲ್ಲಿಯೂ, ಸಂಬಂಧದ ಸಂಬಂಧದಲ್ಲಿಯೂ, ಜಾತಿ ಯಲ್ಲಿಯೂ ಕುರುವು ಮೊದಲಾದುದರಲ್ಲಿಯೂ ಬರುವುದು.

ಉದಾಹರಣಂ : : ಮರದ ಪೂ, ಮೊಗದ ಕಯ್, ಬಿಸಿಲತೊರೆಯ ಕಡುಪು ; ಆನೆಯ ಜಂತದ ಬಿಣ್ಪು; ಪಿಡಿಯಪೋತಂ, ನವಿಲಪಿಂಡು; ಪಲಗೆಯವೀರಂ.

(8) ಅಧಿಕರಣವಿಭಕ್ತಿಯು ಕ್ರಿಯಾಪದಾದಿಯಲ್ಲಿಯೂ, ಆಧಾರದಲ್ಲಿಯೂ ಬರುವುದು,

ಉದಾಹರಣಂ : ಮಾತಿನೊಳಿರ್ದಂ, ರಣದೆಮಡಿದಂ, ನೆಲದೊಳಿರ್ದಂ.

॥ವಿಚಾರಂ॥ ಪ್ರಥಮೆಯು ದ್ವಿತೀಯೆಯಲ್ಲಿಯೂ ಸಪ್ತಮಿಯಲ್ಲಿಯೂ ಬರುವುದು.

ಉದಾಹರಣಂ: (1) ಕಲಶಮಂಪಿಡಿದು, (ಕಲಶಂಪಿಡಿದು) ತತ್ಕ್ಷಣದೊಳ್ ನೋಡಿ (ತತ್ಕ್ಷಣಂ ನೋಡಿ).

(2) ದ್ವಿತೀಯೆಯು ಪ್ರಥಮೆಯಲ್ಲಿಯೂ, ತೃತೀಯೆಯಲ್ಲಿಯೂ, ಚತುರ್ಥಿಯಲ್ಲಿಯೂ ಬರುವುದು.

ಉದಾಹರಣಂ : ಕಯ್‌ಗೊಟ್ಟಂ (ಕಯ್ಯಂ ಕೊಟ್ಟಂ); ತುಡುಗುಣಿಯಂ ಕೋಲಿಂಪೊಡೆದಂ (ಕೋಲಂಪೊಡೆದಂ) ; ಮನೆಗೆ ಪೊಕ್ಕಂ (ಮನೆಯಂ ಪೊಕ್ಕಂ)

(3) ತೃತೀಯೆಯು ಪಂಚಮಿಯಲ್ಲಿಯೂ, ಸಪ್ತಮಿಯಲ್ಲಿಯೂ ಬರುವುದು.

ಉದಾಹರಣಂ : : ಕೆರೆಯತ್ತಣಿಂಬಂದ (ಕೆರೆಯಿಂ ಬಂದಂ); ಮಾತೊಳ್

ನಗಿಸಿದಂ(ಮಾತಿಂ ನಗಿಸಿದಂ)

(4) ಚತುರ್ಥಿಯು ದ್ವಿತೀಯೆಯಲ್ಲಿಯೂ ಷಷ್ಠಿಯಲ್ಲಿಯೂ, ಸಪ್ತಮಿಯಲ್ಲಿಯೂ ಬರುವುದು,

ಉದಾಹರಣಂ : ಜೇನ್ಗೂಡಮಂ ಕಾಣ್ಕೆಯನಿತ್ತಂ (ಕಾಣ್ಕೆಗಿತ್ತಂ), ತೊರೆಯರೆಯಂ (ತೊರೆಗೆರೆಯಂ) ಮಾತೊಳಾದುದು (ಮಾತಿಗಾದುದು).

(5) ಪಂಚಮಿಯು ದ್ವಿತೀಯೆಯಲ್ಲಿಯೂ, ತೃತೀಯೆಯಲ್ಲಿಯೂ, ಬರುವುದು.

ಉದಾಹರಣಂ : ಗೋವಂಪಾಲಂ ಕರೆದಂ, (ಗೋವತ್ತಣಿಂಪಾಲಂಕರೆದಂ); ಮನೆಯಿಂ ಬಂದುದು (ಮನೆಯತ್ತಣಿಂಬಂದುದು).

(6) ಷಷ್ಠಿಯು ಪ್ರಥಮೆಯಲ್ಲಿಯೂ ದ್ವಿತೀಯೆಯಲ್ಲಿಯೂ ಚತುರ್ಥಿಯಲ್ಲಿಯೂ ಸಪ್ತಮಿಯಲ್ಲಿಯೂ ಬರುವುದು.

ಉದಾಹರಣಂ : ಮಾತುಬಲ್ಲಹಂ (ಮಾತಿನಬಲ್ಲಹಂ) ಪೂವಂ ಮೂಸಿದಂ (ಪೂವಮೂಸಿದಂ), ತೋಳಿಗೆ ಬಾಳ್ (ತೋಳಬಾಳ್), ಪಕ್ಕಿಗಳೊಳ್ ದೊರೆ (ಪಕ್ಕಿಗಳ ದೊರೆ)

(7) ಸಪ್ತಮಿಯು ಪ್ರಥಮೆಯಲ್ಲಿಯೂ, ತೃತೀಯೆಯಲ್ಲಿಯೂ ಚತುರ್ಥಿಯಲ್ಲಿಯೂ ಷಷ್ಠಿ ಯಲ್ಲಿಯೂ ಬರುವುದು.

ಉದಾಹರಣಂ : ಕ್ಷಣಂ ಬಂದಂ (ಕ್ಷಣದೊಳ್ ಬಂದಂ) ಮಾತಿಂ ನಗಿಸಿದಂ (ಮಾತೊಳ್ ನಗಿಸಿದಂ) ಮುನ್ನೀರಿಂಗೆ ಪುಟ್ಟಿದಂ (ಮುನ್ನೀರೊಳ್ ಪುಟ್ಟಿದಂ) ನೀರ ಮಿಂದಂ (ನೀರೊಳ್ ಮಿಂದಂ)

ವಚನದಲ್ಲಿ

(1) ಕರ್ತೃಪದವು ಜಾತ್ಯೈಕವಚನವಾದೊಡೆ ಕ್ರಿಯೆಯು ಬಹುವಚನವಾಗುವುದು; ಅದು ಬಹುವಚನವಾದೊಡೆ ಕ್ರಿಯೆಯು ಯೇಕವಚನವಾಗುವುದು.

ಉದಾಹರಣಂ : ಕುದುರೆ ಬಂದುವು (ಕುದುರೆಗಳ್ ಬಂದುವು.); ಎಲೆಗಳುದಿರ್ದುದು (ಎಲೆಗಳುದಿರ್ದುವು)

॥ವಿಚಾರಂ ॥ ಕೆಲವೆಡೆ ಭಿನ್ನ ಜಾತಿಗಳಿಗೇಕವಚನ ಬರುವುದು.

ಉದಾಹರಣಂ : ಆನೆಕುದುರೆ ಕಾಲಾಳ್ಗಳ್ ಕವಿದುದು.

(2) ಸರ್ವನಾಮದಲ್ಲಿಯೂ, ಸಂಖ್ಯೆಯಲ್ಲಿಯೂ, ಕಾರಕದಲ್ಲಿಯೂ ಏಕವಚನಕ್ಕೆ ಬಹುವಚನವು ಬಹುವಚನಕ್ಕೇಕವಚನವು ಬರುವುದು.

ಉದಾಹರಣಂ : ಆ ಬನಂಗಳ್, ಈ ಮಾತುಗಳ್, ಅವು ಬನಂಗಳ್,

ಇವುಮಾತುಗಳ್, ಇವು ಅವು ಬನಂ, ಇವು ಮಾತು, ಒಂದು ಮೂರು (ಒಂದು ಮೂರುಗಳ್), ಪನ್ನೆರಡುರಾಶಿ (ಪನ್ನೆರಡು ರಾಶಿಗಳ್) ನುಡಿಮುತ್ತು, ನುಡಿಗಳ್ ಮುತ್ತುಗಳ್.

ವಿಶೇಷಣವಿಶೇಷ್ಯಕ್ಕೆ – ವಿಶೇಷಪದವು ಯಾವ ಲಿಂಗ ಯಾವ ವಚನ ಯಾವ ವಿಭಕ್ತಿಯುಳ್ಳದಾಗಿರುವುದೊ ವಿಶೇಷಣಪದವು ಆ ಲಿಂಗ ಆ ವಚನ ಆ ವಿಭಕ್ತಿಯುಳ್ಳದಾಗಿರುವುದು.

ಉದಾಹರಣಂ :

ಆನಂದನಮಂವಿಜಿತ ಮ ।
ಹಾನಂದನಮಂ ನಿಜಾಂತರಾಳಾಶ್ರಿತ ಲೋ ।
ಕಾನಂದಮಂ ತೋಷಿತ ।
ಮಾನಂದನಮಂ ನಿರೀಕ್ಷಿಸಲ್ಕಡೆ ನೃಪತೀ ॥ಕಂ॥

ಇಲ್ಲಿ ಆನಂದನಮಂ ವಿಶೇಷ್ಯಪದವು ವಿಶೇಷಣಪದಗಳೂ ತದನುಗುಣವಾಗಿರುವುವು.

॥ವಿಚಾರಂ॥ ಈ ಸೂತ್ರಕ್ಕೆ ವಿರೋಧವಾಗಿ ಕೆಲವೊಳವವನೂಹಿಪುದು.

ಕರ್ತೃಪದದಲ್ಲಿ – ಇದು ನಾಮವಾಚಿ ಸರ್ವನಾಮ ಗುಣವಾಚಿ ಮೊದಲಾದುವರೊಳ್ ಪ್ರಥಮಾಂತವಾಗಿ ಬರುವುದು.

ಉದಾಹರಣಂ : ಮರಂ ಬೆಳೆದುದು; ಅವಂ ಪೋದಂ; ಇನಿಯಂ ಬರ್ಪಂ

ಕರ್ಮಪದದಲ್ಲಿ : ಇದು, ಕರ್ತೃಪದಾಂತದಲ್ಲಿ ಕ್ರಿಯಾಪದದ ಕಾರ್ಯಂ ತೋರಿ ದ್ವಿತೀಯೆಯಲ್ಲಿ ಬರುವುದು.

ಉದಾಹರಣಂ : ಪಕ್ಕಿ ಪಣ್ಣಂ ತಿಂದುದು.

ಕ್ರಿಯಾಪದದಲ್ಲಿ– (1) ತ್ರಿಲಿಂಗನಾಮಪದವನ್ನು ಕೂಡಿಸಿ ನುಡಿವಲ್ಲಿ ಕಡೆಯಲ್ಲಿ ಯಾವ ಲಿಂಗದ ಪದ ಬರುವುದೂ ಅದನನುಸರಿಸಿ ಕ್ರಿಯಾಪದವು ಬರುವುದು.

ತಂದೆಯುಂ ತಾಯಿಯಂ ಮಗುವುಂ ಬಂದುವು.
ತಂದೆಯುಂ ಮಗುವುಂ ತಾಯಿಯುಂ ಬಂದರ್;
ಮಗುವು ತಾಯಿಯಂ, ತಂದೆಯುಂ ಬಂದರ್

(2) ಮೊದಲೊಳನೇಕ ಪ್ರಥಮಾಂತ ಕರ್ತೃಪದಗಳು ಬಂದು ಕಡೆಯಲ್ಲಿ ಬಹುವಚನ ಕ್ರಿಯೆಯು ಬರುವುದು,

ಉದಾಹರಣಂ :

ಗರಿಮೀನ್ ಸೀಗುಡಿ ಗೆಂಡೆಮೀನ್ ಪವಳವಾಯಂ ಬಾಳೆಮೀನ್ ಪಾವುಮೀನ್,
ಕಿರುಮೀನ್, ಕೆಂಗರಿಯಚ್ಚೆ ಕುಚ್ಚಲತಿಕಂಕಾಗೆಂಡೆಕೆಂಕಲ್ ಸರಿಲ್॥
ಕೊರವಂಚೇಳ್ ಪಸಿಗಂ ಸಸಿಲ್ ಗೊದಳೆ ಮೀನ್ ಪೊಂಬೊಪ್ಪು ಮೀನ್ ॥
ಪೆರೆಮೀನ್ ಬೆಗ್ಗಡೆ ಬಣ್ಣ ಮೀನೆನಿಪಿವೆಲ್ಲಂ ಬೀಳ್ದವಾತಾಣದೊಳ್ ॥ ಮ ॥

ಇಲ್ಲಿ ಇವೆಲ್ಲಂ ಬೀಳ್ದುವುಯೆಂದು ಬಹುವಚನ ಕ್ರಿಯೆಯು ಬಂದಿರುವುದು.

(3) ಕೆಲವೆಡೆ ಕ್ರಿಯೆಗೂ, ಕಾರಕಕ್ಕೂ, ಅಧ್ಯಾಹಾರ್ಯ(ನೇಯ)ವುಂಟು.

ಉದಾಹರಣಂ : ಪೋದೊಡಂಬರ್ಪನೆಯೆನಲಿಲ್ಲವೆಂಬುದಧ್ಯಾ ಹಾರಂ.

ನಗರಿಪುಗೆ ಚಿಂತೆ ಸಂತತ
ಮೊಗೆದುದುರ ವಿರಾಗವಳಿದನಸುರಾರಿಯ ನಿ।
ದ್ರೆಗೆ ಮುಳಿದಳ್ ರಮೆ ಕವಿ ಮಿಗೆ
ನಗುತಿರ್ದಂ ಚಿಂತೆಗೆಯ್ದನಮರಾಚಾರ್ಯಂ ॥ಕಂ॥

ಇಲ್ಲಿ ಸೇನಾರಜನಿದಿನಾದುದೆಂದಧ್ಯಾಹಾರ್ಯಂ

(4) ಕ್ರಿಯಾಪದವು ಭೂತ ವರ್ತಮಾನ ಭವಿಷ್ಯದ್ವಿಧಿನಿಷೇಧಗಳಲ್ಲಿ ರೂಪಾಂತರಮಂ ಪೊಂದುವುದು.

ಭೂತಕ್ಕೆ – ಅವಂ ಮಾಡಿದಂ, ಅವಳ್ ಮಾಡಿದಳ್, ಅದು ಮಾಡಿದುದು.

ವರ್ತಮಾನಕ್ಕೆ – ಅವರ್ ಮಾಡಿದಪರ್ ಅವು ಮಾಡಿದಪವು

ಭವಿಷ್ಯತ್ತಿಗೆ – ಆತಂ ಮಾಡುವಂ, ಆಕೆ ಮಾಡುವಳ್, ಆದುಮಾಡುವುದು.

ವಿಧಿಗೆ – ಅವಂ ಮಾಳ್ಕೆ, ಅವಳ್ ಮಾಡುಗೆ, ಅದು ಮಾಳ್ಪುದು; ನೀಂ ಮಾಡ, ನೀಂ ಮಾಳ್ಪುದು, ನೀವ್ ಮಾಡಿಂ; ಆಂ ಮಾಳ್ಪೆಂ, ಆವ್ ಮಾಡುವಂ.

ನಿಷೇಧಕ್ಕೆ – ಆವಂ ಮಾಡಂ, ಅವರ್ ಮಾಡರ್, ಅದು ಮಾಡದು; ನೀಂ ಮಾಡೆ, ನೀವ್ ಮಾಡರಿ, ಆಂ ಮಾಡೆ, ಆವ್ ಮಾಡೆವು

॥ ವಿಚಾರಂ ॥ ಇರು ಧಾತುವು ಪ್ರಶ್ನೆಯಲ್ಲಿ ಬೇರೆ ರೂಪವಾಗುವುದು.

ಉದಾಹರಣಂ :

ತನುಭವನೆಲ್ಲಿದನೆಲ್ಲಿದ ।
ನಿನಿವಾತಿನ ನೀರನೆಲ್ಲಿದಂ ಮೆಲ್ನಗೆಯಿಂ ।
ಪಿನಸೊಬಗನೆಲ್ಲಿದಂ ಚೆ।
ಲ್ವಿನಕಣಿಯೆಲ್ಲಿದನೊ ಮನ್ಮನೋಂಬುಜಹಂಸಂ ॥

77. ಪ್ರಯೋಗಗಳು ಯಾವುವು ವಿವರಿಸು?

ಅಕರ್ಮಕವೆಂದು, ಸಕರ್ಮಕವೆಂದು, ದ್ವಿಕರ್ಮಕವೆಂದು, ಕರ್ಮಣಿಯೆಂದು, ದ್ವಿಕರ್ಮಕಕರ್ಮಣಿಯೆಂದು, ಭಾವೆಯೆಂದು ಆರುತೆರನಾಗಿರುವುದು.

ಉದಾಹರಣಂ : **ಅಕರ್ಮಕಕ್ಕೆ** = ರಾಯಂ ರಂಜಿಸಿದಂ.

ಸಕರ್ಮಕಕ್ಕೆ – ರಾಯಂ ನೆಲನಂ ಪೊರೆದಂ.

ಕರ್ಮಕಕ್ಕೆ – ಗೋವಳಂ ಗೋವಂ ಪಾಲಂ ಕರೆದಂ

ಕರ್ಮಣಿಗೆ – ಕಬ್ಬಿಗನಿಂ ಕಬ್ಬಮಾಗಲ್ಪಟ್ಟುದು.

ದ್ವಿಕರ್ಮಕ ಕರ್ಮಣಿಗೆ – ಗೋವಳನಿಂದಾವುಪಾಲ್ ಕರೆಯಲ್ಪಟ್ಟುದು

ಭಾವೆಗೆ – ಅರಸನಿಂದಾದುದು, (ಎನ್ನಿಂದಾಗಲಿ)

॥ **ವಿಚಾರಂ** ॥ ಒಬ್ಬನಮುಖದಿಂದೊಂದು ಕಾರ್ಯಮಂ ಮಾಡಿಸಿದೊಡೆ ಪ್ರೇರಕವೆಂಬುದು.

ಉದಾಹರಣಂ : : ಅರಸಂ ಅರಸಿಯಿಂ ಕುಲಮಂ ಬೆಳೆಯಿಸಿದಂ.

78, ಇವುಗಳ ಪದಸಂಘಟಣೆಯನ್ನು ವಿವರಿಸು?

ಕರ್ತೃಪದ ವಿಶೇಷಣಗಳೆಲ್ಲಾ ಅದಕ್ಕೆ ಪೂರ್ವದಲ್ಲಿಯೂ, ಕರ್ಮಪದ ವಿಶೇಷಣಗಳೆಲ್ಲ ಅದಕ್ಕೆ ಪೂರ್ವದಲ್ಲಿಯೂ ಕ್ರಿಯಾಪದ ವಿಶೇಷಣಗಳೆಲ್ಲ ಅದಕ್ಕೆ ಪೂರ್ವದಲ್ಲಿಯೂ, ಉತ್ತರವಿಶೇಷಣಗಳು ವಿಶೇಷ್ಯಕ್ಕೆ ಉತ್ತರದಲ್ಲಿಯೂ ಬರುವುವು.

ಉದಾಹರಣಂ :

ಕರ್ತೃಪದಕ್ಕೆ – ಕಾನಕಂಕಳನಿನಾದಂ ಕಿಂಕಿಣೀ ಸಂಕುಳಂ ರಂಜಿತಮಾಗಿರ್ದುದು, ಇಲ್ಲಿ ಕಾನಕಂಕಳನಿನಾದಂ" ಎಂಬ ವಿಶೇಷಣಪದಗಳು ಕಿಂಕಿಣೀ ಸಂಖುಳಂ ಎಂಬ ಕರ್ತೃಪದಕ್ಕೆ ಪೂರ್ವದಲ್ಲಿರುವುವು.

ಕರ್ಮಪದಕ್ಕೆ – ಆನಂದಮಂ ವಿಜಿತಮಹಾನಂದನಮಂನಿರೀಕ್ಷಿಸಲ್ ನಡೆ! ಇಲ್ಲಿ ವಿಜಿತಮಹಾನಂದನಮಂ ಎಂಬ ವಿಶೇಷಪದವನ್ನು ಹೇಳಿ ಆನಂದಮಂ ಎಂಬ ವಿಶೇಷ ಪದವನ್ನು ಹೇಳಿಕೊಳ್ಳಬೇಕು.

ಉತ್ತರವಿಶೇಷಣಕ್ಕೆ – ಪುರವರಂ, ಕರಕಮಲಂ,

ಕ್ರಿಯಾಪದಕ್ಕೆ ಕ್ರಿಯಾನ್ಯೂನಗಳು ಅವ್ಯಯಾದಿಗಳೂ ವಿಶೇಷಣವಾಗಿ ಬರುವುವು.

ಉದಾಹರಣಂ : : ಮಾಡಲ್‌ಬಂದಂ, ಮಾಡಲ್ಕೆ ಪೋದಂ, ಮಾಡದಿರ್ದಂ, ನೋಡುತುಂ ಬಂದಂ, ಪಾಡುತ್ತುಂ ಬಂದುದು, ನೆಗೆಯುತ್ತೆ ಪೊಕ್ಕುದು. ನೋಡುವೊಲಿರ್ದಂ, ಮಾಡುವಂತಿರ್ದಂ, ಕೋಡುವಂತೆ ವೋಲಿತ್ತಂ,

ಇಂದ್ರಂಬೊಲಿರ್ದಂ , ಚಂದ್ರಂಬೋಲ್ ತೊಳಗಿದಂ, ಇಂತುಳಿದುವನೂಹಿಪುದು.

79. ಪದಗಳನ್ನು ಪ್ರಯೋಗಿಸುವದರಲ್ಲಿ ವಿಶೇಷವೇನು ವಿವರಿಸು?

ಸಾಧಾರಣವಾಗಿ ವ್ಯಾಕರಣ, ಉಪಮಾನ, ಕೋಶ, ಆಪ್ತವಾಕ್ಯ, ಲೋಕವ್ಯವಹಾರ ಮೊದಲಾದವುಗಳಿಂ ಪದಾರ್ಥಮಂ ತಿಳಿವುದು ಶಕ್ಯಾರ್ಥವೆಂದು, ಈ ಶಕ್ಯಾರ್ಥಕ್ಕೆ ಬೇರೊಂದರ್ಥವಾದೊಡೆ – ಲಕ್ಷ್ಯಾರ್ಥವೆಂದು ಎರಡು ತೆರನಾಗಿರುವುದು.

80. ಶಕ್ಯಾರ್ಥವನ್ನು ವಿವರಿಸು?

ಇದು ಸಾಧಾರಣವಾದ ಪದಗಳು ಪೇಳುವ ರೂಢವೆಂದು, ವಿಶೇಷಪದಗಳಂ ಪೇಳುವ ಯೋಗವೆಂದು ಪದದವಯವಾರ್ಥದೊಳ್, ರೂಢವಾದುದಂ ಪೇಳುವ ಯೋಗರೂಢವೆಂದು ಮೂರು ತೆರನಾಗಿರುವುದು

ರೂಢಕ್ಕೆ – ಕಳಸ, ಕನ್ನಡಿ, ನುಡಿ, ಕೊಡೆ,

ಯೋಗಕ್ಕೆ – ಮಡಿವಳಂ, ದೂಸಿಗಂ, ಆಟವಿಕಂ,

ಯೋಗರೂಢಕ್ಕೆ – ಅಮರ್ದುಣಿ, ಬಂಡುಣಿ, ಅಲರಿಚ

81. ಲಕ್ಷ್ಯಾರ್ಥವನ್ನು ವಿವರಿಸು ?

ಇದು ಹೇಳಿದರ್ಥವು ಪ್ರಸಿದ್ಧಿಯಲ್ಲದೆ ಬೇರೊಂದು ನಿಜಾರ್ಥವಾದೊಡೆ ಜಹಲ್ಲಕ್ಷಣೆಯೆಂದು, ಪೇಳಿದರ್ಥವು ಮತ್ತೊಂದು ಸಹಾಯದಿಂ ಪಟಣೆಯಾದರೆ ಅಜಹಲ್ಲಕ್ಷಣೆಯೆಂದು, ವಿಶೇಷಣಾರ್ಥವು, ವಿಶೇಷ್ಯಾರ್ಥ ಕಾಲದೇಶ ವಯಸ್ಸುಗಳಿಂ ವ್ಯತ್ಯಾಸವಾದೊಡಂ ವಿಶೇಷ್ಯಾರ್ಥಸಾಧನೆಯಾದೊಡೆ ಜಹದ ಜಹಲ್ಲಕ್ಷಣೆಯೆಂದು ಮೂರು ತೆರನಾಗಿರುವುದು.

ಉದಾಹರಣಂ :

ಜಹಲ್ಲಕ್ಷಣೆಗೆ – ನೆಲಂ ತಿಳಿದುದು : ಇಲ್ಲಿ ಅಚೇತನವಾದ ನೆಲವು ತಿಳಿವುದು. ಅಸಂಗತವಾಗಿ ನೆಲದೊಳಿರ್ದ ಜನಗಳು ತಿಳಿದರೆಂಬುದು.

ಅಜಹಲ್ಲಕ್ಷಣೆಗೆ – ಕತ್ತಿಗಳ್ ಕಡಿದುವು: ಇಲ್ಲಿ ಕತ್ತಿಗಳು ಸ್ವತಃ ಕಡಿಯದೆ ಅವಂ ಹಿಡಿದಿರುವರ ಸಹಾಯದಿಂ ಕಡಿದುವೆಂಬುದು.

ಜಹದ ಜಹಲ್ಲಕ್ಷಣೆಗೆ – ಆತನೇ ಈ ಭೀಷ್ಮನು. ಇಲ್ಲಿ ಪೂರ್ವಕಾಲದಿ ಬಾಲ್ಯದಲ್ಲಿ ಪಟ್ಟಣದಲ್ಲಿದ್ದ ಭೀಷ್ಮನಂ ವೃದ್ಧನಾಗಿ ಯೀಗ ಯುದ್ಧದಲ್ಲಿರುವ ಭೀಷ್ಮನಂ ಪೇಳಿ, ವಿಶೇಷ್ಯಾರ್ಥಮಂ ಸಾಧಿಸಿರುವುದೆಂಬುದು.

ಈ ಲಕ್ಷಣಗಳಲ್ಲಿ ಸದೃಶಾರ್ಥವಂ ಕೊಡುವ ಸಾದೃಶ್ಯದಲ್ಲಿ ಸಾರೂಪ್ಯವೆಂದು,

ಸಾಧರ್ಮ್ಯವೆಂದು ಸಾಮಾನ್ಯವೆಂದು ಮೂದೆರನಾಗಿರುವುದು.

ಸಾರೂಪಕ್ಕೆ – ಇವಂ ಚಂದ್ರಂ, ಅವಂ ರಕ್ಕಸಂ.

ಸಾಧರ್ಮ್ಯಕ್ಕೆ – ನಿಷಂಗಂನೀರದದಂತೆಶರಧರಂ.

ಸಾಮಾನ್ಯಕ್ಕೆ – ಆಧರಮಣಿ, ನಗೆ ಬೆಳ್ದಿಂಗಳ್ : ಇಲ್ಲಿ ಅಧರವೆಂಬ ಮಣಿ, ನಗೆಯೆಂಬ ಬೆಳ್ದಿಂಗಳೆಂದು ಮಾಳ್ಪುದು.

ಉಳಿದುದಂ ಕಾವ್ಯಮುಖದಿನೂಹಿಪುದು.

ಸಂಪೂರ್ಣಂ

ಉಪೋದ್ಘಾತವು.

ಶ್ರೀಮತ್ಸಮಸ್ತ ಸುರಾಸುರ ಮೌಳಿಮಕುಟಘಟಿತ ಮಣಿ ರಶ್ಮಿ ಚಿತ್ರಿತಪಾದ ಪಂಕೇಜಾ
ತೆನಿಸುವಾದಿ ಶಿವನುಂ, ಭಕ್ತ್ಯ ಭಾವಬಂಕಲ್ಪ್ಯ ಹೃದಯಾಂತರದಿಂದ ಕಾರಾಗಾರದೊಳ್ ಸ್ಥಿರಮಾ
ಗಿ ಬೆಳಗುತ್ತ, ತಚ್ಛಿಷ್ಯನಪ್ಪ ವಿಶ್ವಸುತ್ತಂ, ಸುಖವಡೆದು. ಶಿಸ್ತುಪ್ಪರೀ ಸುಖವಾಸ, (ಚಿಂ
ಗಮಂತ್ರಿಸಂ) ತಾಂ ಸಮಸ್ತ ಕರ್ನಾಟಕ ಕವಿಗಳ್ಗೆ ಸಹಾಯವಾಗಿ ಅತ್ಯಂತೋಪದ ಯುಕ್ತ
ವಾಗಿರ್ಪ, (ಶಬ್ದಾಗರ ಕೈಪಿಡಿ) ಎಂಬಭಿಧಾನಮಿಟ್ಟೊಂದು, ಪದಗನ್ನಡವನೆಂಟು ಪೇಳ್ದ
ಮದು ವಿಷಗ, ಪ್ರಸಿದ್ಧಿಯಂ ಪೊಂದಿ, ಕರ್ಣಾಟಕಕಥಾದಿಯೊಳ್ಪು ಖ್ಯಾತವಾದ (ರಾಜಶೇ
ಖರವಿಳಾಸ, ಗಿರಿಜಾಕಲ್ಯಾಣ, ಪೈಮಘೇಂದ್ರವಿಜಯ, ಕಬ್ಬಿಗರಕಾವ, ಪಂಪರಾಮಾಯ
ಣ, ಪಂಪಭಾರತ, ರಾಮಾಯಣ, ಭಾರತ; ಜೈಮಿನಿಭಾರತ) ಇಂತಪ್ಪ ಪ್ರಾಚೀನ ಗ್ರಂಥಂಗಳ
ರ್ಥಮರಿಯಲು, ಸಹಾಯವಾಗಿರ್ಪುದು. ಇಂತಪ್ಪ ನಿಘಂಟು, ಮೂಲಮಾತ್ರವಿಷ್ಟ್ಯವಿಂದಿ
ರದೊಳ್ ಪ್ರಯೋಗಿಸಿರ್ಪ ಗೂಢಾರ್ಥಗಳುಳ್ಳ ಪಳಗನ್ನಡ ಶಬ್ದಂಗಳು, ಸಾಧಾರಣವಾದ
ಜನಂಗಳ್ಗೆ, ಗೋಚರವಾಗದಿರ್ಪುದರಿಂದದಕ್ಕಂ ಸರ್ವಜನಮೊಪ್ಪಲ್ ದೊರವಿಗೆ, ಪಂಡಿತರ
ಸಹಾಯಮುಮನೇಕ ಪಳಗನ್ನಡ ನಿಘಂಟುಗಳ ಸಹಾಯಮುಂ ಪಡೆದಿರ್ಪ (ಶಿಷ್ಟೇಷ್ಟ ಚ
ಕೋರಚಂದ್ರಿಕ) ಎಂಬ ಟೀಕಾಸಹಿತಂ ಓದಿಸಲ್ಕೆ ಮನಂದಂದು ಪ್ರೇರಣೆ ಮಾಳ್ಪುದರಲ್ಲಿ,
ಮುಂದಿಲ್ಲ ಮೂಲಗ್ರಂಥಂಗಳ್ಗೆ ವ್ಯತ್ಯಾಸಮಿಲ್ಲದಂತೆ, ಅನೇಕ ಪ್ರತಿಗಳಂ ಶೋಧಿಸಿನೋಡಿ,
ಪ್ರತಿಪದಮಂ ಬೇರ್ಪಡಿಸಿ, ಸಮಾಸಮಾಗುವ ಸ್ಥಳದೊಳ್, ಪದಗಳು ನಿಲ್ಲುವರೀತಿಯುಂ ಪೇ
ಳ್ದು, ಸಂಧಿ ಪದಗಳಂ ಬಿಂಗಡಿಸಿ, ಸಾಧ್ಯವಾದವಂಗಳ್ಗೆ ಧಾತುಗಳಂ ಬರೆದು ಪ್ರಕಟಿಸಿರ್ಪೆನ
ಸರ್ವಜನರಂಗೀಕರಿಸುವದರೊಳ್ಬೇಡುತಿರ್ಪೆನಲ್ಲದರೊಳಕ್ಕೇನಾದೊಡಂ, ವ್ಯತ್ಯಾಸ ಮುದ್ರಣ
ದಂ, ಸುಜನರ್ಕಳ್ ತಿದ್ದಿಕೊಡಾಸುಮತಿಯುದಯದಿಂದವರೋಂದಿಸೆಂದು ಬಿನ್ನೈಪ,

ಬೆಂಗಳೂರು ತಾಲೂಕ್ ಲಾಲ್‌ಬಾಗ್ ಉದ್ಯಾನದಲ್ಲಿ.

28—5—85. ಸರ್ಕಾರ ಪಾಠಶಾಲಾ ಸಹಾಯ ಬೋಧಕ.

ಕೇಸರಭಟ್ಟದ ಹೊನ್ನಪ್ಪ.

ಅನುಬಂಧ

ಅನುಬಂಧ ೧

ಹೆಸರುಘಟ್ಟದ ಹೊನ್ನಪ್ಪನವರು

–ಡಾ. ಬಿ. ನಂಜುಂಡಸ್ವಾಮಿ

ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನ ಹೆಸರುಘಟ್ಟದ ಹೊನ್ನಪ್ಪನವರ ಬಗ್ಗೆ ನನಗೆ ಬಹಳ ಕುತೂಹಲ. ಅವರ ಜೀವನ, ಸಾಧನೆ ಬಗ್ಗೆ ಸಂಶೋಧನಾತ್ಮಕ ಲೇಖನವನ್ನು ಬರೆದು ೧೫.೨.೨೦೦೩ ಭಾನುವಾರ ನಡೆದ ನೆಲಮಂಗಲ ತಾಲ್ಲೂಕು ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆಗೆ ''ತ್ಯಾಮಗೊಂಡ್ಲು ಕನ್ನಡ ಶಾಲಾ ಮುಖ್ಯೋಪಾಧ್ಯಾಯರಾಗಿದ್ದ ಹೆಸರುಘಟ್ಟದ ಹೊನ್ನಪ್ಪನವರ ಕನ್ನಡ ಸೇವೆ'' ಎಂಬ ಹೆಸರಿನ ಲೇಖನ ನೀಡಿದೆ. ಸ್ಮರಣ ಸಂಚಿಕೆಯ ಸಂಪಾದಕರಾದ ಡಾ. ಹೆಚ್.ಎಸ್. ಗೋಪಾಲರಾವ್ ಅವರ ಅರಿಶಿನಕುಂಟೆ ಮನೆಗೆ ಹೋಗಿ ಲೇಖನವನ್ನು ನೇರವಾಗಿ ಕೊಟ್ಟೆ. ಎರಡು ಮೂರು ದಿವಸಗಳ ನಂತರ ಡಾ. ಹೆಚ್.ಎಸ್. ಗೋಪಾಲರಾವ್ ಅವರು ಫೋನ್ ಮಾಡಿ ''ತ್ಯಾಮಗೊಂಡ್ಲುನಲ್ಲಿ ೧೮೯೦ರ ಸುಮಾರಿನಲ್ಲಿ ಕನ್ನಡ ಶಾಲೆ ಇರಲಿಲ್ಲವಂತೆ, ಮತ್ತೆ ಹೆಸರಘಟ್ಟದ ಹೊನ್ನಪ್ಪನವರು ತ್ಯಾಮಗೊಂಡ್ಲುವಿನಲ್ಲಿ ಮುಖ್ಯೋಪಾಧ್ಯಾಯರಾಗಿದ್ದರು ಎಂದು ಸ್ಪಷ್ಟ ಮಾಡುವ ಯಾವುದಾದರೂ ದಾಖಲೆ ಇದೆಯಾ ನಿಮ್ಮಲ್ಲಿ ಎಂದು ನನ್ನನ್ನು ಕೇಳಿದರು. ಇದೇ ವಿಷಯದ ಬಗ್ಗೆ ಡಾ. ಎಂ. ಚಿದಾನಂದಮೂರ್ತಿ, ಶ್ರೀ ಎಸ್. ಶಿವಣ್ಣ, ಶ್ರೀ ಸಿದ್ಧಗಂಗಯ್ಯ ಕಂಬಾಳು ಅವರನ್ನು ಈ ಬಗ್ಗೆ ವಿಚಾರಿಸಿದರು. ನಾನು ಟಿಪ್ಪಣಿ ಮಾಡಿಕೊಂಡ ಪುಸ್ತಕ ಮಾತ್ರ ನನ್ನ ಹತ್ತಿರ ಇತ್ತು. ಸಂಶೋಧನೆ ಮುಂದುವರೆಸಿ ಹಲವರನ್ನು ವಿಚಾರಿಸಿ ನನ್ನ ಸಂಗ್ರಹದಲ್ಲಿ ಇದ್ದ ''ಸಟೀಕ ರಾಜಶೇಖರ ವಿಳಾಸಂ'' ೧೮೯೦ರಲ್ಲಿ ಮುದ್ರಣದ ಈ ಪುಸ್ತಕದ ಮುಖಪುಟದಲ್ಲಿ ''ತ್ಯಾಮಗೊಂಡ್ಲು ತಾಲ್ಲೂಕ್ ಬ್ರಾಂಚ್ ಸ್ಕೂಲ್ ಹೆಡ್ ಮಾಸ್ಟರ್ ಹೆಸರಘಟ್ಟದ ಹೊನ್ನಪ್ಪನವರಿಂದ ವಿರಚಿಸಲ್ಪಟ್ಟ ಟೀಕಿನೊಡನೆ" ಎಂದು ಸ್ಪಷ್ಟವಾಗಿ ಮುದ್ರಿತವಾದ ಮುಖಪುಟವನ್ನು ಜೆರಾಕ್ಸೊಡನೆ ಡಾ. ಹೆಚ್.ಎಸ್. ಗೋಪಾಲರಾಯರಿಗೆ ತೋರಿಸಿದೆ. ತದನಂತರ ನನ್ನ ಲೇಖನ ಮಂಗಳಗಂಗ ಸ್ಮರಣ ಸಂಚಿಕೆಯಲ್ಲಿ ಮುದ್ರಣವಾಯಿತು.

ನನಗೆ 'ಹೆಸರಘಟ್ಟದ ಹೊನ್ನಪ್ಪನವರ' ವಂಶಸ್ಥರನ್ನು ಮಾತನಾಡಿಸಬೇಕು ಎಂದು ಕುತೂಹಲ. ೨೦೦೨ ನವೆಂಬರ್ ದೀಪಾವಳಿ ಹಬ್ಬದ ದಿವಸ ಹೆಸರುಘಟ್ಟಕ್ಕೆ ಹೋದೆ. ಬೆಂಗಳೂರಿನ ಇನ್ನೊಂದು ರೂಪದಲ್ಲಿ ಇರುವ ಗ್ರಾಮದಲ್ಲಿ ಒಂದು ಗಂಟೆ ಹುಡುಕಿದರೂ ಯಾವ ವಿಧವಾದ ಮಾಹಿತಿಯೂ ಲಭ್ಯವಾಗಲಿಲ್ಲ. ಕೊನೆಗೆ ಶಿವಗಂಗೆ ಗಂಗಾಧರೇಶ್ವರ – ಹೊನ್ನಾದೇವಿ ಭಕ್ತರ ಮನೆ ಹುಡುಕಿದೆ. ಸುಮಾರು ಹನ್ನೊಂದು

ಗಂಟೆಗೆ ನಮ್ಮ ಬಂಧುಗಳ ಮನೆ ಸಿಕ್ಕಿತು. ಅವರ ಸಹಾಯದಿಂದ ಹೆಸರುಘಟ್ಟವನ್ನು ಜಾಲಾಡಿದಾಗ ಗೊತ್ತಾದದ್ದು ಹೆಸರುಘಟ್ಟದ ಹೊನ್ನಪ್ಪನವರು ಜೀವಂತ ಇದ್ದಾಗ ಕಟ್ಟಿದ ಮನೆ ಅವರ ಮೊಮ್ಮಕ್ಕಳ ಕಾಲದಲ್ಲಿ ಮಾರಾಟ ಮಾಡಿ ಹೆಸರುಘಟ್ಟದ ಹತ್ತಿರದ ಗೋಪಾಲಪುರದಲ್ಲಿ ನೆಲೆಸಿದ್ದಾರೆ ಎಂದು. ಗೋಪಾಲಪುರದ ತೋಟದ ಮನೆಗೆ ಹೋದೆ. ಹೆಸರುಘಟ್ಟದ ಹೊನ್ನಪ್ಪನವರ ಮೊಮ್ಮಗ ನಿವೃತ್ತ ಇಂಜಿನಿಯರ್ ಹೆಚ್. ಜಿ. ಬಸವರಾಜು, ಅವರ ಧರ್ಮಪತ್ನಿ ಮತ್ತು ಮಕ್ಕಳು ಮೊಮ್ಮಗಳು ಮನೆಯಲ್ಲಿ ಇದ್ದರು. ನನ್ನನ್ನು ನೋಡಿ ಅವರಿಗೂ ಸಂತೋಷವಾಯಿತು. ನಿವೃತ್ತ ಇಂಜಿನಿಯರ್ ಬಸವರಾಜು, ಅವರ ಧರ್ಮಪತ್ನಿ ತವರುಮನೆ ಗುಬ್ಬಿ. ಅವರ ಪರಿಚಯ ನನಗೆ ಇತ್ತು. ನನ್ನ ಪ್ರಕಟಿತ ಲೇಖನದ ಜೆರಾಕ್ಸ್ ಪ್ರತಿಯನ್ನು ಅವರಿಗೆ ಕೊಟ್ಟೆ, ತುಂಬಾ ಸಂತೋಷಪಟ್ಟರು, ಅವರು ಹೇಳಿದ ವಿಷಯ, ನನ್ನ ತಂದೆಯ ಹೆಸರು ಗಂಗಪ್ಪ ಎಂದು. ಅವರು ಸರ್ಕಾರಿ ನೌಕರಿಯಲ್ಲಿ ಇದ್ದರು. ನಮ್ಮ ಅಜ್ಜಿ ೧೯೫೨ರ ತನಕ ಬದುಕಿದ್ದರು. ನನ್ನ ತಂದೆ ೧೮೯೩ ಅಗಸ್ಟ್ ತಿಂಗಳಲ್ಲಿ ಹುಟ್ಟಿದ್ದಾರೆ. ನಮ್ಮ ತಾತ ಶಿವೈಕ್ಯರಾದದ್ದು ೧೮೯೪ ಮಾರ್ಚ್ ತಿಂಗಳಲ್ಲಿ, ಶಿವರಾತ್ರಿ ಹಬ್ಬದ ಮಾನೆಯ ದಿವಸ ಅವರ ಆರಾಧನೆಯನ್ನು ಈಗಲೂ ಈ ಭಾಗದ ಪ್ರಸಿದ್ಧ ತೋಟಸಾಗರದ ಬಸವೇಶ್ವರ ದೇವಸ್ಥಾನದಲ್ಲಿ ಮಾಡುತ್ತೇವೆ. ನನ್ನ ತಮ್ಮ ಹೊನ್ನಬಸವರಾಜು ಎಂದು ಅವನು ಬೆಂಗಳೂರು ಮಲ್ಲೇಶ್ವರಂ ರೈಲ್ವೆ ಸ್ಟೇಷನ್ನಿನ ಎದುರಿನ ಮನೆಯಲ್ಲಿ ಇದ್ದಾನೆ. ನನ್ನ ತಂದೆ ಒಳ್ಳೆಯ ಜ್ಯೋತಿಷ ವಿದ್ವಾಂಸರು. ನನ್ನ ತಮ್ಮ ಸಹ ಚೆನ್ನಾಗಿ ಜ್ಯೋತಿಷ ಅಧ್ಯಯನ ಮಾಡಿದ್ದಾನೆ. ನಮ್ಮ ಅಜ್ಜಿ ಅನೇಕ ವಿಷಯಗಳನ್ನು ಹೇಳುತ್ತಾ ಇದ್ದರು. ಆದರೆ ನಾನು ಆಸಕ್ತಿಯಿಂದ ಸರಿಯಾಗಿ ದಾಖಲು ಮಾಡಿಕೊಳ್ಳಲಿಲ್ಲ ಎಂದು ಹೇಳಿದರು.

ಬೆಂಗಳೂರಿನಲ್ಲಿ ಹೆಸರುಘಟ್ಟದ ಹೊನ್ನಬಸವರಾಜು ಅವರನ್ನು ಅವರ ಧರ್ಮಪತ್ನಿಯನ್ನು ಭೇಟಿಯಾದೆ. ಹೆಚ್ಚಿನ ಮಾಹಿತಿ·ಲಭ್ಯವಾಗಲಿಲ್ಲ. ಅವರ ಜೊತೆ ಗಂಗಪ್ಪನವರ ಎರಡನೇ ಹೆಂಡತಿಯ ತಂಗಿ ಸುಮಾರು ತೊಂಬತ್ತು ವರ್ಷ ವೃದ್ಧೆ ಇದ್ದರು. ಅವರಲ್ಲೂ ಅಂತಹ ಮಾಹಿತಿ ಲಭ್ಯವಾಗಲಿಲ್ಲ. ನಮ್ಮ ಮನೆಯಲ್ಲಿರುವ ಹಳೆಯ ಕಡತ ನೋಡಿ ನಿಮಗೆ ತಿಳಿಸುತ್ತೇನೆ ಎಂದು ಹೇಳಿದರು. ಆಮೇಲೆ ಮೂರು ನಾಲ್ಕು ಸಾರಿ ಭೇಟಿಯಾದೆ. ಯಾವ ವಿಧವಾದ ಸರ್ಕಾರಿ ಕಾಗದ ಪತ್ರಗಳು ಅಥವಾ ಬೇರೆ ಕಾಗದ ಪತ್ರಗಳು ಲಭ್ಯವಾಗಲಿಲ್ಲ. ಹೆಸರುಘಟ್ಟದ ಹೊನ್ನಪ್ಪನವರ ಸಾಹಿತ್ಯ ಸೇವೆ ಪ್ರಾರಂಭದಲ್ಲಿ ೧೮೮೪ರಲ್ಲಿ. ನಮಗೆ ಲಭ್ಯವಿರುವ ಮಾಹಿತಿ ಪ್ರಕಾರ ಅವರ ಕಡೆಯ ಪುಸ್ತಕ ಮುದ್ರಣವಾಗಿರುವುದು ೧೮೯೦ರಲ್ಲಿ, ಅವರು ಶಿವೈಕ್ಯರಾದದ್ದು ೧೮೯೪ ಮಾರ್ಚ್ ತಿಂಗಳಲ್ಲಿ. ವಿದ್ಯಾಭ್ಯಾಸ ಮುಗಿಸಿ ಕೆಲಸಕ್ಕೆ ಸೇರಿದಾಗ ಹದಿನೆಂಟು ವರ್ಷ ಎಂದು ಇಟ್ಟುಕೊಂಡು ಮದುವೆ ನಂತರ ಮಕ್ಕಳು ಆಗುವುದು ನಿಧಾನವಾಯಿತು ಎಂದುಕೊಂಡರೂ ಅವರು ಶಿವೈಕ್ಯರಾದಾಗ ಸುಮಾರು ೨೮ ವರ್ಷವಿರಬಹುದು. ಸುಮಾರು ೧೮೬೬ರಲ್ಲಿ ಜನಿಸಿರಬಹುದು, ಸುಮಾರು ೧೮೮೪ರಲ್ಲಿ ಅವರಿಗೆ

ಹದಿನೆಂಟು ವರ್ಷ. ಲಿಂಗೈಕ್ಯರಾದಾಗ ಸುಮಾರು ೨೮ ವರ್ಷವಿರಬಹುದು. ಇಷ್ಟು ಕಿರಿದಾದ ವಯಸ್ಸಿಗೆ ಅಪರಿಮಿತವಾದ ಸಾಧನೆ ಮಾಡಿದ ಹೆಸರುಘಟ್ಟದ ಹೊನ್ನಪ್ಪನವರ ಬಗ್ಗೆ ವಿವರವಾದ ಮಾಹಿತಿ ಲಭ್ಯವಿಲ್ಲ. ಶಿವೈಕ್ಯರಾದಾಗ ಲೇಖನ ಅಂದಿನ ದಿನಮಾನದ ವಾರಪತ್ರಿಕೆ ಅಥವಾ ಮಾಸಪತ್ರಿಕೆಯಲ್ಲಿ ಬಂದಿರಬಹುದು. ಈಗ ನಮಗೆ ಅಂತಹ ಯಾವ ವಿಧವಾದ ಗಟ್ಟಿಯಾದ ಮಾಹಿತಿ ಲಭ್ಯವಿಲ್ಲ. ಸುಮಾರು ೧೯೭೦ರ ಕಾಲಮಾನದವರೆಗೆ ಅವರ ವಿದ್ಯಾರ್ಥಿಗಳು ಮತ್ತು ಅವರನ್ನು ನೋಡಿದ ಬಂಧು ಮಿತ್ರರನ್ನು ನಾವು ಮಾತನಾಡಿಸಬಹುದಾಗಿತ್ತು. ಸಮಕಾಲೀನ ಕಿರಿಯ ವಿದ್ವಾಂಸರು ಇಂತಹ ಪ್ರಯತ್ನ ಮಾಡದೇ ಇರುವುದರಿಂದ ಎಲ್ಲವೂ ಶೂನ್ಯವಾಗಿ ಹೋಗಿದೆ. ನನ್ನ ಪ್ರಶ್ನೆ ಇಷ್ಟೆ: ಹೆಸರುಘಟ್ಟದ ಗ್ರಾಮಾಂತರ ಪ್ರದೇಶದಲ್ಲಿ ಜನಿಸಿದ ಹೊನ್ನಪ್ಪರಿಗೆ ವಿದ್ಯೆ ಕಲಿಸಿದ ಗುರು ಯಾರು ? ಯಾವ ಪಾಠಶಾಲೆಯಲ್ಲಿ ತಯಾರಾದರು? ಅವರ ಕಲಿತ ವಿದ್ಯೆ ಯಾವ ಮಟ್ಟದ್ದು ? ಈ ಎಲ್ಲಾ ಪ್ರಶ್ನೆಗಳಿಗೆ ಈಗ ನಮ್ಮಲ್ಲಿ ಉತ್ತರವಿಲ್ಲ, ಹೆಸರುಘಟ್ಟದ ಹೊನ್ನಪ್ಪನವರ ಬದುಕು ಅಷ್ಟು ದೀರ್ಘವಾದುದಲ್ಲ. ಹೆಸರುಘಟ್ಟದಲ್ಲಿ ಮನೆ ನಿರ್ಮಾಣ ಮಾಡಿದರಂತೆ, ಅದರಲ್ಲಿ ಕೆಲವೇ ವರ್ಷ ವಾಸವಾಗಿದ್ದರೂ ಈ ಎಲ್ಲಾ ಮಾಹಿತಿ ಈಗ ಯಾರಿಗೂ ಗೊತ್ತಿಲ್ಲ.

ಗ್ರಂಥ ಸಂಪಾದನೆ, ವ್ಯಾಕರಣ, ನಿಘಂಟು, ಟೀಕೆ, ಹೀಗೆ ಕನ್ನಡ ಶಾಸ್ತ್ರ ಸಾಹಿತ್ಯದ ಭಾಷಾ ಪ್ರೌಢಿಮೆಗೆ ದುಡಿದ ಹೆಸರುಘಟ್ಟದ ಹೊನ್ನಪ್ಪನವರ ಬಗ್ಗೆ ಆಸ್ಥಾನ ವಿದ್ವಾನ್ ಪಂಡಿತರತ್ನ ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು ಶರಣ ಸಾಹಿತ್ಯ ಸಂಪುಟ ೨೮, ಸಂಚಿಕೆ ೧ ಏಪ್ರಿಲ್ ೧೯೬೫ರ ಸಂಚಿಕೆಯಲ್ಲಿ ''ಕನ್ನಡ ಉದ್ಧಾರಕರು'' ಲೇಖನದಲ್ಲಿ ಹೆಸರುಘಟ್ಟದ ಹೊನ್ನಪ್ಪನವರ ಬಗ್ಗೆ ಮಾಹಿತಿ ನೀಡಿದ್ದಾರೆ. ಆದರೆ ಹೊನ್ನಪ್ಪನವರ ಇತಿವೃತ್ತದ ಬಗ್ಗೆ ಹೆಚ್ಚಿನ ವಿಷಯ ಲಭ್ಯವಾಗಿಲ್ಲ.

ಹೆಸರುಘಟ್ಟದ ಹೊನ್ನಪ್ಪನವರು ಶಾಲಾ ಅಧ್ಯಾಪಕರಾಗಿ ಬೆಂಗಳೂರು ಲಾಲ್‌ಬಾಗ್ ಉಪ್ಪಾರಹಳ್ಳಿಯಲ್ಲಿ ದುಡಿದು ನಂತರ ಬೆಂಗಳೂರು ಜಿಲ್ಲಾ ತ್ಯಾಮಗೊಂಡ್ಲಿನಲ್ಲಿ ಕನ್ನಡ ಶಾಲೆಯ ಮುಖ್ಯೋಪಾಧ್ಯಾಯರಾಗಿ (೧೮೯೦ರಲ್ಲಿ) ಸೇವೆ ಸಲ್ಲಿಸಿರುವುದು ಸ್ಪಷ್ಟವಾಗಿದೆ. ೧೮೯೪ರಲ್ಲಿ ನಿಧನ ಹೊಂದಿದ್ದಾರೆ. ಆಗ ಅವರಿಗೆ ಸುಮಾರು ೨೮ ವರ್ಷ ವಯಸ್ಸು (ಈ ಹಿಂದೆ ನಾನು ಐವತ್ತು ವರ್ಷವಿರಬಹುದು ಎಂದು ಊಹಿಸಿದ್ದೆ).

ವಿರಕ್ತ ತೋಂಟದಾರ್ಯ (ಸು.೧೬೧೬) ವಿರಚಿತ ಸಟೀಕಾ ಕರ್ಣಾಟಕ ಶಬ್ದಮಂಜರಿ ಪುಸ್ತಕದ ಪ್ರತಿ ಪುಟದಲ್ಲಿ 'ಸಟೀಕಾ ಕರ್ನಾಟ ಶಬ್ದಮಂಜರಿ' ಎಂದು ಮುದ್ರಣವಾಗಿದೆ. ಕೃತಿಯ ಮುಖಪುಟದಲ್ಲಿ ಕರ್ಣಾಟಕ ಭಾಷಾಭ್ಯಾಸಿಗಳಿಗತ್ಯಂತೋಪಯುಕ್ತಮಾಗಿ ತೋಂಟದಾರ್ಯರಿಂದ ವಿರಚಿತವಾದ ಈ ನಿಘಂಟು ಬೆಂಗಳೂರು ತಾಲ್ಲೂಕು ವುಪ್ಪಾರಹಳ್ಳಿ ಸ್ಕೂಲ್‌ಟೀಚರ್ ಹೆಸರುಘಟ್ಟದ ಹೊನ್ನಪ್ಪನಿಂದ ವಿಭುದಾನಂದಿನೀಯೆಂಬ ಟೀಕು ವಿರಚಿಸಲ್ಪಟ್ಟು ಬೆಂಗಳೂರು ಬುಕ್ ಡಿಪೋ ಏಜಂಟ್ ವಾಜಪೇಯಿ ಕೃಷ್ಣಯ್ಯನವರಿಗೆ ಈ ಹಕ್ಕನ್ನು ಕೊಡಲ್ಪಟ್ಟಿರುತ್ತವೆ. ಬೆಂಗಳೂರು ಬುಕ್ ಡಿಪೋ

ಮುದ್ರಾಕ್ಷರ ಶಾಲೆಯಲ್ಲಿ ೧೮೮೪ರಲ್ಲಿ ಮುದ್ರಣವಾಯಿತು. ಈ ಕೃತಿಗೆ ಪ್ರಾರಂಭದಲ್ಲಿ ಲೇಖಕರ ಮಾತು, ಪ್ರಕಾಶಕರ ಮಾತು ಯಾವುದು ಇಲ್ಲ, ನೇರವಾಗಿ ಟೀಕನ್ನು ಪ್ರಾರಂಭಿಸಿದ್ದಾರೆ. ಕೃತಿಯ ದ್ವಿತೀಯ ಮುದ್ರಣ ೧೮೯೫ರಲ್ಲಿ, ತೃತೀಯ ಮುದ್ರಣ ಮೈಸೂರು ಡಿ.ವಿ.ಕೆ. ಮೂರ್ತಿ ಪ್ರಕಟಿಸಿದ ಪ್ರೊ. ಎನ್. ಬಸವಾರಾಧ್ಯರು ೧೯೭೬ರಲ್ಲಿ ಸಂಪಾದಿಸಿದ ''ಹಳಗನ್ನಡ ನಿಘಂಟು'' ಪುಟ (೩೦೪-೩೫೪) ರಲ್ಲಿ ಮುದ್ರಣವಾಗಿದೆ. ಇತ್ತೀಚೆಗೆ ೨೦೦೯ ನಂತರ ಮತ್ತೆ ಡಿ.ವಿ.ಕೆ. ಮೂರ್ತಿಯವರು ಪ್ರಕಟಿಸಿದ ''ಹಳಗನ್ನಡ ನಿಘಂಟು'' ಮರುಮುದ್ರಣವಾಗಿದೆ. ಹೆಸರುಘಟ್ಟದ ಹೊನ್ನಪ್ಪನವರು ಮೂಲಕೃತಿಯಲ್ಲಿ ಇರುವ ೧೨೦ ಪದ್ಯಗಳಿಗೂ ಟೀಕೆ ಬರೆದಿದ್ದಾರೆ. ಮೂಲ ಪದ್ಯವನ್ನು ಅದರ ಕೆಳಗೆ ಟೀಕೆಯನ್ನು ಕೊಟ್ಟಿದ್ದಾರೆ. ೭೮ ಪುಟದ ಈ ಟೀಕಾಕೃತಿಯ ಕಡೆಯಲ್ಲಿ 'ಸಟೀಕಾ ಶಬ್ದಮಂಜರಿ ಸಂಪೂರ್ಣವು' 'ಶ್ರೀಶಿವಾಯ ನಮಃ' ಎಂದಿದೆ.

''ನಾನಾರ್ಥ ಕಂದಪದ್ಯ'' ರ್ಣಾಟಕ ಭಾಷಾಭ್ಯಾಸಿಗಳಿಗತ್ಯಂತೋಪಯುಕ್ತವಾಗಿ ಶ್ರೀಮಚ್ಚನ್ನ ಕವೀಂದ್ರರಿಂ ವಿರಚಿತವಾದ ನಾನಾರ್ಥ ಕಂದಪದ್ಯವೆಂಬ ಈ ನಿಘಂಟು ಬೆಂಗಳೂರು ತಾಲ್ಲೂಕು ಉಪ್ಪಾರಹಳ್ಳಿ ಸ್ಕೂಲ್ ಹೆಡ್‌ಮಾಸ್ಟರ್ ಶೇಷಪ್ಪನವರ ಸಹಾಯದೊಡನೆ ಡಿಟೋ ಸ್ಕೂಲ್ ಟೀಚರ್ ಹೆಸರುಘಟ್ಟದ ಹೊನ್ನಪ್ಪನಿಂದ ವಿದ್ವದ್ರಂಜನೀಯೆಂಬ ಟೀಕು ವಿರಚಿಸಲ್ಪಟ್ಟು, ಬೆಂಗಳೂರು ಬುಕ್ ಡಿಪೋ ಏಜೆಂಟ್ ವಾಜಪೇಯಿ ಕೃಷ್ಣಯ್ಯನವರಿಗೆ ಈ ಹಕ್ಕನ್ನು ಕೊಡಲ್ಪಟ್ಟಿರುತ್ತದೆ. ಬೆಂಗಳೂರು ಬುಕ್ ಡಿಪೋ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಲ್ಪಟ್ಟಿತು ೧೮೮೪ನೇ ಇಸವಿಯಲ್ಲಿ.

'ನಾನಾರ್ಥ ಕಂದಪದ್ಯ'.ಕೃತಿಯನ್ನು ರಚಿಸಿದ ಚನ್ನಕವಿ ಇದ್ದ ಕಾಲ ಸುಮಾರು ೧೬೦೦, ಬ್ರಾಹ್ಮಣಕವಿ, ಭಾರದ್ವಾಜ ಗೋತ್ರದವನು, ದ್ರಾವಿಡನು, ''ನಾನಾರ್ಥಕಂದ'' ಇದು ಸಂಸ್ಕೃತ ಶಬ್ದಗಳ ನಾನಾರ್ಥಗಳನ್ನು ತಿಳಿಸುವ ನಿಘಂಟು. ಇದರಲ್ಲಿ ೧೬೦ ಕಂದಗಳಿವೆ. ಗ್ರಂಥದ ಪ್ರಾರಂಭದಲ್ಲಿ ಚೆನ್ನಿಗರಾಯನ ಸ್ತುತಿ ಇದೆ. ಬಳಿಕ ಕವಿ ವಿನಾಯಕ, ವಿಷ್ಣು, ಬ್ರಹ್ಮ, ಈಶ್ವರ ಮತ್ತು ಸರಸ್ವತಿಯನ್ನು ಸ್ತುತಿಸಿದ್ದಾನೆ. ಈ ಗ್ರಂಥಕ್ಕೆ ಒಂದು ಪುರಾತನ ವ್ಯಾಖ್ಯಾನವೂ ಅಥವಾ ಟೀಕೆಯೂ ಇದೆ ಎಂದು ಕವಿ ಚರಿತ್ರೆಕಾರರು ಕೃತಿಯ ಬಗ್ಗೆ ಎರಡನೇ ಸಂಪುಟದಲ್ಲಿ ವಿವರಣೆ ನೀಡಿದ್ದಾರೆ.

ಕೃತಿಯ ಪ್ರಾರಂಭದಲ್ಲಿ ಹೆಸರುಘಟ್ಟದ ಹೊನ್ನಪ್ಪನವರು ಪದ್ಯರೂಪದಲ್ಲಿ ಮತ್ತು ಗದ್ಯರೂಪದಲ್ಲಿ ಕೃತಜ್ಞತೆಯನ್ನು ಹೇಳಿದ್ದಾರೆ. ಗದ್ಯಭಾಗವನ್ನು ಮಾತ್ರ ಯಥಾವತ್ತಾಗಿ ನೀಡಲಾಗಿದೆ. ಪ್ರಾಚೀನ ಕನ್ನಡ ಕವಿಗಳ ರೀತಿ ಕನ್ನಡ ಪದ್ಯಗಳನ್ನು ವೃತ್ತದಲ್ಲಿ ರಚಿಸಿರುವುದು ನೋಡಿದರೆ ಇವರಿಗೆ ಕವಿತಾಶಕ್ತಿ ಸಹ ತುಂಬಾ ಚೆನ್ನಾಗಿತ್ತು.

''ಶ್ರೀಮಚ್ಚನ್ನ ಕವೀಂದ್ರರಿಂ ವಿರಚಿತವಾದ ನಾನಾರ್ಥ ಕಂದಪದ್ಯವೆಂಬ ನಿಘಂಟು, ಸಾಧಾರಣವಾಗಿ ಕನ್ನಡದೋಳ್ ಪ್ರಖ್ಯಾತಿಯನ್ನು ಹೊಂದಿರುವ ಭಾರತ, ಜೈಮಿನಿ, ಭಾಗವತ ರಾಮಾಯಣ, ವೃಷಭೇಂದ್ರ ವಿಜಯ, ರಾಜಶೇಖರ ವಿಳಾಸ, ಶಬರ ಶಂಕರ ವಿಳಾಸ, ಗಿರಿಜಾ ಕಲ್ಯಾಣ, ಬಸವಪುರಾಣ, ಚನ್ನಬಸವಪೌರಾಣ

ಮುಂತಾದ ಪ್ರಾಚೀನ ಗ್ರಂಥಗಳಲ್ಲಿ ಬಹಳವಾಗಿ ಪ್ರಯೋಗಿಸಿರುವ ಗೂಢಾರ್ಥಗಳಿಗೂ ಮತ್ತು ನಾನಾರ್ಥಗಳಿಗೂ ಸಹಾ ಸಾಧಕವಾಗಿದ್ದಾಗ್ಯೂ ಈ ಗ್ರಂಥವು ಸಾಧಾರಣವಾಗಿ ಎಲ್ಲರಿಗೂ ದೊರೆಯಲು ಸಾಧ್ಯವಲ್ಲದ್ದರಿಂದ ಇಂಥಾ ಉತ್ತಮವಾದ ನಿಘಂಟನ್ನು ಬಹಳ ಶ್ರಮೆಯಿಂದ ತಂದು ಅದರಲ್ಲಿ ಲೇಖಕ ಜನಿತ ದೋಷಗಳಂ ಪರಿಹರಿಸಿ ಮೂಲಪ್ರತಿಗೆ ವ್ಯತ್ಯಾಸವಾಗದಂತೆ ಶೋಧಿಸಿದಾಗ್ಯೂ ಇದರಲ್ಲಿ ಅನೇಕ ಗೂಢಾರ್ಥಗಳಿರುವುದರಿಂದ ಟೀಕು ಮಾಡಲುಪಕ್ರಮಿಸಿ ಅನೇಕ ಸಂಸ್ಕೃತ ನಿಘಂಟುಗಳ ಸಹಾಯದಿಂದಲೂ ಇಲ್ಲಿನ ಹೆಡ್‌ಮಾಸ್ಟರ್ ಶೇಷಪ್ಪನವರ ಸಹಾಯದಿಂದಲೂ ಚನ್ನಾಗಿ ಪರಿಶೋಧಿಸಿ ಬೆಂಗಳೂರು ಬುಕ್ ಡಿಪೊ ಏಜಂಟ್ ಮ.ವಾ.(ವಾಜಪೇಯಿ) ಕೃಷ್ಣಶಾಸ್ತ್ರಿಗಳಿಗೋಸ್ಕರವಾಗಿ ಟೀಕನ್ನು ಬರೆದಿರುತ್ತೇನೆಯಾಗಿ ಈ ನಿಘಂಟನ್ನು ಸಮಸ್ತರೂ ಅಂಗೀಕರಿಸಬೇಕೆಂದು ಬೇಡುವ ಬೆಂಗಳೂರು ತಾಲ್ಲೂಕ್ ಉಪ್ಪಾರಹಳ್ಳಿ ಸ್ಕೂಲ್ ಪ್ಯೂಪಲ್ ಟೀಚರ್ ಹೆಸರುಘಟ್ಟದ ಹೊನ್ನಪ್ಪಾ.

''ನಾನಾರ್ಥ ಕಂದ ಪದ್ಯ'' ಕೃತಿಯ ಹಸ್ತಪ್ರತಿಗಳು ಮದ್ರಾಸ್ ಪ್ರಾಚ್ಯ ಗ್ರಂಥಗಳ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ, ಹೈದರಾಬಾದು ಉಸ್ಮಾನಿಯ ವಿಶ್ವವಿದ್ಯಾನಿಲಯ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಗದಗ, ಹುಬ್ಬಳ್ಳಿ ಮೂರು ಸಾವಿರ ಮಠದ ಗ್ರಂಥ ಭಂಡಾರದಲ್ಲಿ ಇದೆ. ಆದರೆ ನಮಗೆ ೧೬೦ ಕಂದ ಪದ್ಯಗಳು ಇರುವಂತಹ ಒಂದೇ ಒಂದು ಹಸ್ತಪ್ರತಿಯೂ ಲಭ್ಯವಾಗಿಲ್ಲ. ತಿಳಿದಿರುವ ಮಾಹಿತಿ ಪ್ರಕಾರ ಹೆಸರುಘಟ್ಟದ ಹೊನ್ನಪ್ಪನವರಿಂದ ಸಂಪಾದಿತವಾಗಿ ಪ್ರಕಟವಾದ ಕೃತಿಯಿಂದ ನಮಗೆ ಸಂಪೂರ್ಣವಾದ ಕೃತಿ ಲಭ್ಯವಾಗಿರುವುದು. ಅಂದಿನ ದಿನಮಾನದಲ್ಲಿ ''ನಾನಾರ್ಥ ಕಂದದ'' ಹಸ್ತಪ್ರತಿಯನ್ನು ಪಡೆಯಲು ಬಹಳ ಶ್ರಮಪಟ್ಟಿರುವುದನ್ನು ಅವರೇ ಹೇಳಿಕೊಂಡಿದ್ದಾರೆ. ''ನಾನಾರ್ಥ ರತ್ನಾಕರ'' ಅಂದಿನ ದಿನ ಕವಿಚರಿತೆಯ ಸರಿಯಾದ ಮಾಹಿತಿ ಲಭ್ಯವಿಲ್ಲದೆ ಇದ್ದುದರಿಂದ ಈ ನಿಘಂಟು ಕರ್ತೃ 'ನಾಗವರ್ಮ' ಎಂದು ಊಹಿಸಿ ಕೃತಿಯ ಶಿರೋಭಾಗದಲ್ಲಿ ಸ್ಪಷ್ಟವಾಗಿ ಬರೆದು ಈ ಕೃತಿಗೆ ಟೀಕೆಯನ್ನು ಬರೆದವರು ಹೆಸರುಘಟ್ಟದ ಹೊನ್ನಪ್ಪನವರು. ೧೮೮೫ರಲ್ಲಿ ಪ್ರಕಟಿಸಿದವರು ಬೆಂಗಳೂರಿನಲ್ಲಿರುವ ತೋವಿನಕೆರೆ ರಾಯಣ್ಣ ವಾಗ್ಮಿಯವರಿಂದ. ಈ ನಿಘಂಟಿನ ಬಗ್ಗೆ ಪ್ರೊ. ಎನ್. ಬಸವಾರಾಧ್ಯರು ಹಳಗನ್ನಡ ನಿಘಂಟು ಪೀಠಿಕೆ ಪುಟ ೧೦ರಲ್ಲಿ ಈ ಮಾತುಗಳನ್ನು ಹೇಳಿದ್ದಾರೆ. 'ನಾನಾರ್ಥ ರತ್ನಾಕರ'' ಈ ನಿಘಂಟಿನ ಕರ್ತೃ ದೇವೋತ್ತಮ. ಈತನ ಕಾಲ ಸುಮಾರು ೧೬೦೦ ಇದರಲ್ಲಿ ೧೪೯ ವೃತ್ತಗಳಿವೆ. ಸಂಸ್ಕೃತ ಶಬ್ದಗಳ ನಾನಾರ್ಥಗಳನ್ನು ಇದರಲ್ಲಿ ವಿವರಿಸಿದೆ. ಈ ನಿಘಂಟಿಗೆ ತೋವಿನಕೆರೆ ರಾಯಣ್ಣವಾಗ್ಮಿ ಎಂಬುವನು ಟೀಕನ್ನು ಬರೆದಿದ್ದಾನೆ'' ಎಂದಿದ್ದಾರೆ. ಮುದ್ರಿತ ಪುಸ್ತಕದ ಅವಲೋಕನದಿಂದ ಟೀಕನ್ನು ಬರೆದವರು ಹೆಸರುಘಟ್ಟದ ಹೊನ್ನಪ್ಪನವರು, ಪ್ರಕಾಶಕರು ರಾಯಣ್ಣ ವಾಗ್ಮಿಗಳು ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಕೃತಿಯ ಅಂತ್ಯದಲ್ಲಿ ಈ ಗದ್ಯವಿದೆ.

ಇದು ಭಗವದರ್ಹತ್ಪರಮೇಶ್ವರ ಚಾರುಚರಣಾರ
ವಿಂದ ದ್ವಂದ್ವ ಮಕರಂದ ಮತ್ತ ಮಧುಕರಾಯಮಾಣ
ವಿಭುದಜನಮನಃ ಪದ್ಮಿನೀ ರಾಜಹಂಸ ಶ್ರೀಮ
ತ್ಕವಿರಾಜಹಂಸ ನಾಗವರ್ಮ ವಿರಚಿತಂ
ಪರಿಸಮಾಪ್ತಂ ಮಂಗಳಮಹಾ

ವಿದ್ಯಾಭ್ಯಾಸಿಗಳಿಗತ್ಯಂತೋಪಯುಕ್ತವಾಗಿ, ಹೆಸರುಘಟ್ಟದ ಹೊನ್ನಪ್ಪನವರಿಂದ ಟೀಕು ವಿರಚಿಸಲ್ಪಟ್ಟು ೧೮೮೫ರಲ್ಲಿ ಪ್ರಕಟಿತವಾಗಿರುವ ಈ ಪುಸ್ತಕದಲ್ಲಿ ೯೦ ಪುಟವಿದ್ದು, ಪುಸ್ತಕದ ಮೊದಲಲ್ಲಿ ''ಪದಸೂಚೀ ಪತ್ರಿಕಾ'' ಮುದ್ರಿಸಿದ್ದಾರೆ. ಶಬ್ದಗಳು ಮತ್ತು ಪದಸಂಖ್ಯೆ ಮೂರು ಸಾಲಿನಲ್ಲಿ ೭ ಪುಟದಷ್ಟು ಕೊಟ್ಟಿದ್ದಾರೆ. ಪುಸ್ತಕಕ್ಕೆ ಗ್ರಂಥಕರ್ತೃವಾಗಲಿ, ಪ್ರಕಾಶಕರಾಗಲಿ ಮುನ್ನುಡಿ ಸೂಚನಾ ಗದ್ಯ ಯಾವುದೂ ಇಲ್ಲ. ಪುಸ್ತಕ ೨೦ನೇ ಸೆಪ್ಟಂಬರ್ ಸನ್ ೧೮೮೫ರಲ್ಲಿ ಮುದ್ರಣವಾದದ್ದು, ಪ್ರಕಾಶಕರ ಸೀಲು ಹಾಕಿರುವ ಪುಟದಲ್ಲಿ ಈ ದಿನಾಂಕವನ್ನು ನಮೂದಿಸಲಾಗಿದೆ. ಸೀಲಿನಲ್ಲಿ 'ಬೆಂಗಳೂರಲ್ಲಿ ಯಿರುವ ತೋಪಿನಕೆರೆ ಯಿಂದ್ರ ವರ್ಗದ ರಾಯಂಣ'' ಜೈನರಲ್ಲಿ ಪೌರೋಹಿತರನ್ನು ಇಂದ್ರರು ಎಂದು ಕರೆಯುತ್ತಾರೆ.

ಕಬ್ಬಿಗರ ಕೈಪಿಡಿ ಈ ಕೃತಿಯನ್ನು ರಚಿಸಿದವರು ನುಗ್ಗೇನಹಳ್ಳಿಯ ಲಿಂಗಮಂತ್ರಿ. ಈ ನಿಘಂಟು ವಾರ್ಧಕ ಷಟ್ಪದಿಯಲ್ಲಿದೆ. ಈತನ ಕಾಲ ಸುಮಾರು ೧೫೩೦, ಕಬ್ಬಿಗರ ಕೈಪಿಡಿಯಲ್ಲಿ ೧೦೧ ಪದ್ಯಗಳಿವೆ. ಹಳಗನ್ನಡ ಶಬ್ದಗಳಿಗೆ ನಿಘಂಟಿನಲ್ಲಿ ಅರ್ಥಗಳನ್ನು ವಿವರಿಸಲಾಗಿದೆ. ಪ್ರಕಟಿತ ಕೃತಿಯ ಮುಖಪುಟದಲ್ಲಿ ಶ್ರೀ ಶಿವಾಯ ನಮಃ, ಸಟೀಕಾ ಕಬ್ಬಿಗರ ಕೈಪಿಡಿ, ಲಿಂಗಮಂತ್ರಿಪನೆಂಬ ಕವೀಶ್ವರನಿಂ ವಿರಚಿತಮಾಗಿ ಕರ್ನಾಟಕ ವಿದ್ಯಾಭ್ಯಾಸಿಗಳತ್ಯಯೋಪಯುಕ್ತಮಾದ ಈ ನಿಘಂಟು, ಬೆಂಗಳೂರು ತಾಲ್ಲೂಕು ಉಪ್ಪಾರಹಳ್ಳಿ ಸ್ಕೂಲ್ ಟೀಚರ್ ಹೆಸರುಘಟ್ಟದ ಹೊನ್ನಪ್ಪನಿಂ ವಿಬುಧ 'ಚಕೋರ ಚಂದ್ರಿಕೆಯೆಂಬ' ಟೀಕು ವಿರಚಿಸಲ್ಪಟ್ಟು ಬೆಂಗಳೂರು ಬುಕ್ ಡಿಪೋ ಏಜಂಟ್ ವಾಜಪೇಯಿ ಕೃಷ್ಣಯ್ಯನವರಿಂದ ಪ್ರಕಟಿಸಲ್ಪಟ್ಟಿರುತ್ತೆ. ಮೊದಲನೇ ಛಾಪೆ ೧೦೦೦ ಪ್ರತಿಗಳು. ಬೆಂಗಳೂರು ವಿಚಾರ ದರ್ಪಣ ಮುದ್ರಾಕ್ಷರ ಶಾಲೆಯೊಳ್ ಮುದ್ರಿಸಲ್ಪಟ್ಟಿತು. ಆರವತ್ತೆಂಟು ಪುಟದ ಈ ಪುಸ್ತಕಕ್ಕೆ ಹೆಸರುಘಟ್ಟದ ಹೊನ್ನಪ್ಪನವರು ಒಂದು ಪುಟ ಉಪೋದ್ಘಾತವನ್ನು ಹಳಗನ್ನಡ ಭಾಷೆಯಲ್ಲಿ ಬರೆದಿದ್ದು ಅದನ್ನು ಯಥಾವತ್ತಾಗಿ ಕೊಡಲಾಗಿದೆ.

ಕರ್ನಾಟ ಕಲ್ಪದ್ರುಮಂ ಕರ್ಣಾಟ ಭಾಷಾಭ್ಯಾಸಿಗಳಿಗತ್ಯಂತೋಪಯೋಕ್ತಮಾಗಿ ಟ್ರಾನ್‌ಸ್ಲೇಟರ್ ಮ.ರಾ. ರಾಮಶಾಸ್ತ್ರಿಗಳಿಂದ ಪ್ರಾರಂಭಿಸಲ್ಪಟ್ಟ ಈ ಪುಸ್ತಕವು ಬೆಂಗಳೂರು ತಾಲ್ಲೂಕು ಉಪ್ಪಾರಹಳ್ಳಿ ಸ್ಕೂಲ್ ಟೀಚರ್ ಹೆಸರುಘಟ್ಟ ಹೊನ್ನಪ್ಪನವರಿಂದ ಪೂರೈಸಲ್ಪಟ್ಟು ಬೆಂಗಳೂರು ಬುಕ್ ಡಿಪೋ ಟಿ. ಸುಬ್ಬರಾಯ ಶಾಸ್ತ್ರಿಗಳಿಂದಲು ಮ. ಚಿಕ್ಕಗಿರಿಯಪ್ಪನವರಿಂದಲು ಸಹಾ ಪ್ರಕಟಗೊಳಿಸಲ್ಪಟ್ಟಿತು. ೧ನೇ ಛಾಪೆ ೧೦೦೦ ಪ್ರತಿಗಳು.

ಕ್ರಯ ೩-೪-೦ ಈ ಪುಸ್ತಕ ಮುದ್ರಣವಾದದ್ದು ೧೮೮೫ರಲ್ಲಿ (Bangalore ; Printed at the Luckshmy Vilasa Press,,). ಐತಿಹಾಸಿಕ ಮಹತ್ತ್ವವುಳ್ಳ ಒಂದು ಪುಟ "ಸೂಚನೆ" ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದೆ. ಗ್ರಂಥಕರ್ತರಾದ ಹೆಸರುಘಟ್ಟದ ಹೊನ್ನಪ್ಪನವರು ಬರೆದ ಲೇಖಕರ ಮಾತನ್ನು ಯಥಾವತ್ತಾಗಿ ಮುದ್ರಿಸಲಾಗಿದೆ. ಬೆಂಗಳೂರು ನಗರವನ್ನು ಕಲ್ಯಾಣನಗರಿ ಎಂದು ಕರೆಯುತ್ತಾ ಇದ್ದರು. ಲೇಖಕರು ೧೦.೫.೧೮೮೫ರಲ್ಲಿ ಬರೆದ ಈ ಗದ್ಯದಲ್ಲಿ "ಕಲ್ಯಾಣಪುರಿಯೋಳ್ ವಾಸಮಾಗಿರ್ಪ"... ಎಂದು ಬೆಂಗಳೂರನ್ನು ಕಲ್ಯಾಣಪುರಿ ಎಂದು ಸ್ಪಷ್ಟವಾಗಿ ಕರೆದಿದ್ದಾರೆ. ಮುಂದಿನ ಪುಟದಲ್ಲಿ "ಈ ಪುಸ್ತಕದಲ್ಲಿ ಪ್ರಯೋಗಿಸಿರುವ ಕೆಲ ಸಂಜ್ಞೆಗಳು" ಪು.ನಾ. ಪುಲ್ಲಿಂಗ, ನಾಮವಾಚಕ, ತ್ರಿ=ತ್ರಿಲಿಂಗಗಳು ಕ್ರಿ=ಕ್ರಿಯಾಪದ ವಿ=ವಿಶೇಷಣ ಕ್ರಿ.ಭೇ=ಕ್ರಿಯಾಭೇದ (ಸಂಪೂರ್ಣವಲ್ಲದ ಕ್ರಿಯಾಪದ) ಕ=ಕರ್ಣಾಟಕ ಶಬ್ದಮಂಜರಿ ಕಬ್ಬಿ=ಕಬ್ಬಿಗರ ಕೈಪಿಡಿ ಭಾ-ನಿ=ಭಾರತ ನಿಘಂಟು, ಜೈ-ಭಾ=ಜೈಮಿನಿಭಾರತ ರಾಮಾ=ರಾಮಾಯಣ (ತೊರವೆ) ಶ=ಶಬ್ದಮಣಿದರ್ಪಣ ಚ=ಚಂನಬಸವ ಪೌರಾಣ ಅನು=ಅನುಭವಾಮೃತವು ಹೀಗೆ ಹಲವು ಸಂಜ್ಞೆಗಳನ್ನು ಕೊಟ್ಟಿದ್ದಾರೆ. ಮುಂದೆ ೧೯ ಪುಟಗಳು ಶುದ್ಧಾಶುದ್ಧ ಪತ್ರಿಕೆ ಕೊಟ್ಟಿದ್ದಾರೆ ೨+೧೯+೪೧೨ ಪುಟದ ಪುಸ್ತಕಕ್ಕೆ ೧೯ ಪುಟ ಶುದ್ಧಾಶುದ್ಧ ಪುಟಗಳು ಸ್ವಲ್ಪ ಹೆಚ್ಚು ಎಂದು ನಮಗೆ ಈ ದಿನ ಅನ್ನಿಸುತ್ತದೆ. ಲೇಖಕರು ನೇರವಾಗಿ ಕರಡಚ್ಚು ನೋಡದೆ ಇರುವುದರಿಂದ ಇಂತಹ ತೊಂದರೆ ಉಂಟಾಗಿದೆ. ಇಂತಹ ಮಹತ್ವ ನಿಘಂಟುಗಳ ಬಗ್ಗೆ ತದನಂತರ ಕಾಲದಲ್ಲಿ ಪರಿಚಯಾತ್ಮಕ ಲೇಖನಗಳು ಬರೆಯಲಿಲ್ಲ. ಕರ್ನಾಟ ಕಲ್ಪದ್ರುಮಂ ನಿಘಂಟನ್ನು ರಚಿಸಲು ಪ್ರಾರಂಭಿಸಿದ ಎ. ರಾಮಶಾಸ್ತ್ರಿ ಸಾಹಿತ್ಯ ನೆಲೆ ಬಗ್ಗೆ ಡಾ. ಶ್ರೀನಿವಾಸ ಹಾವನೂರು ಅವರು "ಹೊಸಗನ್ನಡದ ಅರುಣೋದಯ" ಮಹಾಪ್ರಬಂಧದಲ್ಲಿ ಈ ಮಾತುಗಳನ್ನು ಹೇಳಿದ್ದಾರೆ. "ವೆಸ್ಲಿಯನ್ ಮಿಶನರಿಗಳ ಸಂಪರ್ಕದಲ್ಲಿದ್ದ ಎಂ. ರಾಮಸ್ವಾಮಿ ಶಾಸ್ತ್ರಿಯು ಕನ್ನಡ ವ್ಯಾಕರಣ, ಕೋಶಗಳನ್ನು ರಚಿಸಿದ (ಸು. ೧೮೫೪) ಆರಂಭಕಾರರಲ್ಲಿ ಒಬ್ಬನು. ಅವರ 'ವಾಗ್ವಿಧಾಯಿನಿ'ಯು ಅನೇಕ ವರ್ಷಗಳವರೆಗೆ ಪಠ್ಯವಾಗಿದ್ದಿತು. "ಕರ್ಣಾಟ ಕಲ್ಪದ್ರುಮಂ" ವೆಂಬ ಕೋಶರಚನೆಯಲ್ಲಿ ಹೆಸರುಘಟ್ಟದ ಹೊನ್ನಪ್ಪನು ಇವನಿಗೆ ಸಹಾಯಕನಾಗಿದ್ದನು. ಹೊನ್ನಪ್ಪನು ಒಂದು ವ್ಯಾಕರಣ ಪುಸ್ತಕವನ್ನು ಬರೆದದ್ದಲ್ಲದೇ (೧೮೯೦) ರಾಜಶೇಖರ ವಿಳಾಸದ ೫ ಆಶ್ವಾಸಗಳಿಗೆ ಟೀಕೆಯನ್ನು ರಚಿಸಿದ್ದಾನೆ" ಎಂದಿದ್ದಾರೆ. ಹೆಸರುಘಟ್ಟದ ಹೊನ್ನಪ್ಪನವರು ಬರೆದ ಸೂಚನಾ ಗದ್ಯವನ್ನು ಯಥಾವತ್ತಾಗಿ ಕೊಡಲಾಗಿದೆ.

ಹರಿಹರ ಮಹಾಕವಿಯ 'ಗಿರಿಜಾಕಲ್ಯಾಣ' (೧೮೮೬)

ಈಗ ದೊರಕಿರುವ ಮಾಹಿತಿ ಪ್ರಕಾರ ಹರಿಹರ ಕವಿಯು ಕೃತಿಯನ್ನು ಓಲೆಯಲ್ಲಿ ಅಧ್ಯಯನ ಮಾಡಿ ಪ್ರಥಮವಾಗಿ ಸಂಪಾದಿಸಿದ ಕೀರ್ತಿ ಹೆಸರುಘಟ್ಟದ ಹೊನ್ನಪ್ಪನವರದು. ಈ ಚಂಪೂಕಾವ್ಯವನ್ನು ಅದರ ಮಹತ್ವವನ್ನು ಮನಗಂಡು ೧೮೮೬ ರಲ್ಲಿ ಪ್ರಕಟಿಸಿದ ಪ್ರಕಾಶಕರು ಮಳವಳ್ಳಿ ಚಿಕ್ಕಗಿರಿಯಪ್ಪನವರು. ನನಗೆ ನೋಡಲು

ಲಭ್ಯವಾದ ಪುಸ್ತಕದ ಮುಖಪುಟ ನಷ್ಟವಾದ್ದರಿಂದ ಸಂಪೂರ್ಣ ವಿವರಣೆ ನೀಡಲು ಸಾಧ್ಯವಾಗುತ್ತಿಲ್ಲ. ಮುದ್ರಿತ ಪುಸ್ತಕ ಸುಮಾರು ೧೮೦ ಪುಟ ಇರಬಹುದು. ನಾನು ನೋಡಿದ ಪುಸ್ತಕದಲ್ಲಿ ಹತ್ತನೇ ಆಶ್ವಾಸದ ೯೮ ಪದ್ಯಗಳು ಮೊತ್ತ ಇದ್ದು ಇನ್ನು ಆರು ಪುಟ ಶಿಥಿಲವಾಗಿ ಹೊರಟುಹೋಗಿತ್ತು. ಹೆಸರುಘಟ್ಟದ ಹೊನ್ನಪ್ಪನವರು ''ಸೂಚನೆ'' ಎಂಬ ಶಿರೋನಾಮೆಯಲ್ಲಿ ೧೪ ಸಾಲು ಗದ್ಯವನ್ನು ಕೃತಿಯ ಆರಂಭದಲ್ಲಿ ನೀಡಿದಾರೆ. ಅದನ್ನು ಯಥಾವತ್ತಾಗಿ ನೀಡಲಾಗಿದೆ.

ಶ್ರೀ

ಶ್ರೀ ಶಿವಾಯ ನಮಃ

ಸೂಚನೆ

ಸ್ವಸ್ತಿ ಶ್ರೀಮದಖಿಲ ಸುರಾಸುರ ಮಕುಟ ಖಚಿತಾನಂತರತ್ನ ಶೋಭಾರಂಜಿತ ಶ್ರೀಮಚ್ಛಿವಶರಣ ಕಮಲ ಭೃಂಗಾಯಮಾನ ಸತ್ಕವೀಶ್ವರ ಹಂಪೆಯ ಹರಿಹರದೇವ ಭಕ್ತಿ ವಿರಚಿತಮಪ್ಪ ಗಿರಿಜಾ ಕಲ್ಯಾಣಮೆಂಬೀಯುತ್ತಮ ಪ್ರಬಂಧಂ ಸಕಲ ಭಕ್ತಜನಾಂಗೀ ಕೃತಮಪ್ಪುದರಿನನಂತಚಾತುರ್ಯ ಮಾಗಿಪ್ಪುದರಿನನವರತ ಪಠನಾಯೋಗ್ಯ ಮಾರ್ಗಿರ್ಪುದರಿಂ ವರಸಾಲಂಕೃತ ಚಾತುರ್ಯ ನಾನಾವೃತ್ತ ಛಂದೋಬದ್ಧಮಾಗಿ ರಸಿಕಜನಾಹ್ಲಾದಕರ ಮಾಗಿರ್ಪುದನಿದಮಾಂ ಪುರಾತನ ಕರ್ಣಾಟ ಪ್ರಬಂಧಗಳೊಳು ತ್ತಮವೆಂಬುದವರಿದತ್ಯಂತಾಸಕ್ತಿಯೊಳನೇಕ ಮೂಲ ಪ್ರತಿಗಳನತಿಪ್ರಯಾಸದಿನಾರ್ಜಿಸಿ ಮೂಲಪ್ರತಿಗೆ ವ್ಯತ್ಯಾಸಮಾಗದಪ್ಪಂತೆ ಪರಿಶೋಧಿಸಿ ಮಲುವಳ್ಳಿ ಚಿಕ್ಕಗಿರಿಯಪ್ಪ ನವರಿಗಿತ್ತುದರಿನವರಿಂ ಪ್ರಕಟಿಸಲ್ಪಟಿರ್ಪುದಿದಂ ಸರ್ವಜನರ್ಗಳಂಗೀಕರಿ ವುದರೊಳ್ಸಂದೇಹ ಮೊಣ್ಣಮಿಲ್ಲಮೆಂದು ತೋಷಿಸುತ್ತಿಪ್ಪ ಹೆಸರುಘಟ್ಟದ ಹೊನ್ನಪ್ಪ.

ಸಟೀಕ ರಾಜಶೇಖರ ವಿಳಾಸಂ (೧೮೯೦)

ಶ್ರೀ ಷಡಕ್ಷರಿದೇವ ಮಹಾಕವಿಗಳಿಂ ವಿರಚಿತಮಾದೀ ಕಾವ್ಯಂ ತ್ಯಾಮಗೊಂಡ್ಲು ತಾಲ್ಲೂಕ್ ಬ್ರಾಂಚ್ ಸ್ಕೂಲ್ ಹೆಡ್‌ಮಾಸ್ಟರ್ ಹೆಸರುಘಟ್ಟದ ಹೊನ್ನಪ್ಪನವರಿಂದ ವಿರಚಿಸಲ್ಪಟ್ಟ ಟೀಕಿನೊಡನೆ ಪ್ರಸಿದ್ಧಮಾಗಿರ್ಪ್ಪುದು (ಮೊದಲನೆಯ ಭಾಗಂ ೫ ಆಶ್ವಾಸಂಗಳ್ । ಮೊದಲನೆ ಛಾಪೆ ೧೦೦೦ ಪ್ರತಿಗಳ ವಿಚಾರದರ್ಪಣ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಲ್ಪಟ್ಟಿತು ೧೮೯೦ ನೇ ಇಸವಿಯಲ್ಲಿ ಪೀಠಿಕೆ ೧ ಪುಟ + ರಾಜಶೇಖರ ವಿಳಾಸ ಕಥಾಸಾರಂ (೪) ಪುಟ + ವಿಷಯ ಸೂಚಿಕೆ (೧) ಪುಟ + ಮೂಲಕೃತಿ ೫೫೮ ಪುಟ ಪೀಠಿಕೆಯಲ್ಲಿ ಹೆಸರುಘಟ್ಟದ ಹೊನ್ನಪ್ಪನವರು ಬರೆದ ಪೀಠಿಕೆಯನ್ನು ಯಥಾವತ್ತಾಗಿ ಕೊಡಲಾಗಿದೆ.

ಪೀಠಿಕೆ

ಶ್ರೀಮನ್ನಿಖಿಲ ಸುರಾಸರ ಮಕುಟತಟಘಟಿತ ಮಹಾಮುಣಿಗಣ ಕಿರಣ ಚಿತ್ರಿತ ಶ್ರೀಚರಣಾರವಿಂದ ಮಧುಕರೋಭಯಭಾಷಾ ವಿಶಾರದ ಶ್ರೀ ಷಡಕ್ಷರಿದೇವ

ಮಹಾಕವಿ ನಿರ್ಮಿತಮಪ್ಪ (ರಾಜಶೇಖರವಿಳಾಸವು) ಬಹುಪಂಡಿತ ಜನಾಂಗೀಕೃತವಾಗಿರ್ಪುದಲ್ಲದೆ ಮೈಸೂರು ದೇಶೀಯೋಪಾಧ್ಯಾಯ ಪರೀಕ್ಷೆಗಾಗಿ ಪರಿಭಾವಿಸಿರುವುದುಂದಿದಕ್ಕೆ ಪ್ರತಿಪದಾರ್ಥ, ತಾತ್ಪರ್ಯ ; ಪೂರ್ವೇತಿಹಾಸ, ಸ್ವಾರಸ್ಯ, ವಿಶೇಷ ವಿಚಾರ, ನಿಘಂಟು, ವಿಶಿಷ್ಟ ವ್ಯಾಕರಣಾಂಶ ಛಂದೋಲಕ್ಷಣಾಲಂಕಾರ ಪ್ರಭೇದ ಮೊದಲಾದುವುಗಳೊಡನೊಳ್ಗಗನ್ನಡದ ಟೀಕಂ ಬರೆದಿರುವನಲ್ಲದೆ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಕೇವಲಾನುಕೂಲವಾಗುವಂತೆ (ವ್ಯಾಕರಣ ಸಂಗ್ರಹ) ವೆಂಬುದನ್ನು ಬರೆದಿರುವೆನಿವಂ ವಿದ್ವಜ್ಜನವಂಗೀಕರಿಸಲಿ !

ಈ ಸಟೀಕ ರಾಜಶೇಖರವು ಪ್ರಿಂಟಾಗುವ ಕಾಲದಲ್ಲಿ ಪ್ರೂಫ್ ಕರೆಕ್‌ಷನ್ ಮಾಡಿದ ಬೆಂಗಳೂರು ಗರ್‌ನಮೆಂಟ್ ಕನ್ನಡ ಬಾಯಿಸ್ ಸ್ಕೂಲ್ ಎರಡನೇ ಅಸಿಸ್ಟೆಂಟ್ ಮಾಸ್ಟರ್ ಮಹಾರಾಜಶ್ರೀ ಕೆ. ನರಸಿಹ್ಮಯ್ಯನವರಿಗೆ ನಾನು ಕೃತಜ್ಞನಾಗಿದ್ದೇನೆ.

ಹೆ, ಹೊನ್ನಪ್ಪ ಹೆಡ್‌ಮಾಸ್ಟರ್ ತಾ॥ ಬ್ರಾಂಚ್, ಸ್ಕೂಲ್
ತ್ಯಾಮಗೊಂಡ್ಲು, ನೆಲಮಂಗಲ ತ್ತಾಲ್ಲೂಕ್
ಕ್ರಮದ ವಿವರ ಹಾಸಲ್ ಸಹಿತ

ಸಟೀಕ ರಾಜಶೇಖರ ವಿಳಾಸಂ	ಅವ್ವಲ್	೨-೨-೦ ರೂ
	ದುಯ್ಯಂ	೧-೧೨-೦
ವ್ಯಾಕರಣ ಸಂಗ್ರಹಂ		೦-೪-೬

ಮೊಬಲಗನ್ನು ಮಣಿಆರ್ಡರ್, ಲೇಬಿಲ್ ಮುಖಾಂತರ ಕಳುಹಿಸಬಹುದು. ಲೇಬಿಲ್‌ಗಾಗಿ ರೂಪಾಯಿ ೧ಕ್ಕೆ ಒಂದಾಗಿ ಹೆಚ್ಚಾಗಿ ಕಳುಹಿಸಬೇಕು. ವ್ಯಾಲ್ಯುಲೇಬಿಲ್ ಮೂಲಕ ತರಿಸಿಕೊಂಡಲ್ಲಿ ತಾನೇ ಛಾರ್ಜು ವಹಿಸಬೇಕು.

(ಷರಾ) ರಾಜಶೇಖರ ವಿಳಾಸವು ೩ ಭಾಗಗಳಾಗಿ ಟೀಕಿಸಿರುವುದು ಪ್ರತಿಯೊಂದು ಭಾಗಕ್ಕೂ ಮೇಲಿನಂತೆಯೇ ಕ್ರಯವೆಂದರಿವುದು.

'ರಾಜಶೇಖರ ವಿಳಾಸ' ಕೃತಿಗೆ ಸಂಪೂರ್ಣ ಟೀಕೆ ಬರೆದು ಭಾಗ ಭಾಗಗಳಾಗಿ ಮುದ್ರಣ ಮಾಡಿಸುವ ಆಸೆಯನ್ನು ಹೆಸರುಘಟ್ಟದ ಹೊನ್ನಪ್ಪನವರು ಹೊಂದಿದ್ದರು. ಬಿ. ಶಿವಮೂರ್ತಿ ಶಾಸ್ತ್ರಿಗಳು ಇವರು ರಾಜಶೇಖರ ವಿಳಾಸದ ಎಲ್ಲಾ ಅಶ್ವಾಸಗಳಿಗೂ ಟೀಕೆ ಬರೆದಂತೆ ಐತಿಹ್ಯವಿದೆ ಎಂದಿದ್ದಾರೆ. ಹಸ್ತಪ್ರತಿ ಬಗ್ಗೆ ಮಾಹಿತಿ ಇಲ್ಲ.

ವ್ಯಾಕರಣ ಸಂಗ್ರಹಂ (೧೮೯೦)

ನನಗೆ ನೋಡಲು ಲಭ್ಯವಾದ ಪುಸ್ತಕದಲ್ಲಿ ಮುಖಪುಟ ನಷ್ಟವಾಗಿದೆ. ಪುಸ್ತಕದ ಮೊದಲ ಪುಟದಲ್ಲಿ ಪುಸ್ತಕದ ಪರಿವಿಡಿ ಕೊಟ್ಟಿದ್ದಾರೆ. ೧ ಸಂಜ್ಞಾ ಪ್ರಕರಣ ೨ ಸಂಧಿ ಪ್ರಕರಣಂ ೩ ನಾಮ ಪ್ರಕರಣಂ ೪ ಸಮಾಸ ಪ್ರಕರಣಂ ೫ ತದ್ಧಿತ ಪ್ರಕರಣಂ ೬ ಆಖ್ಯಾತ ಪ್ರಕರಣಂ ೭ ಅಪಭ್ರಂಶ ಪ್ರಕರಣಂ ೮ ಅವ್ಯಯ ಪ್ರಕರಣಂ ೯ ಪ್ರಯೋಗ ವಾಕ್ಯಾನ್ವಯ ಪ್ರಕರಣಂ ೧೧೪ ಪುಟದ ಕಿರುಪುಸ್ತಕ ಶಬ್ದಮಣಿ ದರ್ಪಣ ತರದ ಅಧ್ಯಾಯಗಳಿವು.

ಸೂಚನೆ

"ಮೈಸೂರು ದೇಶಿಯೋಪಾಧ್ಯಾಯ ವಿದ್ಯಾರ್ಥಿಗಳ ಪರೀಕ್ಷಾ ಪ್ರಾರಂಭವಾದಂದಿನಿಂ ಕರ್ಣಾಟ ಭಾಷೋಪಯೋಗಂತದಭ್ಯಾಸಿಗಳ್ಗಾನಂದಕರ ಮಾಗಿರ್ಪುದದತ್ಯಂತಾನುಕೂಲಮಾಗಲನೇಕ ಪುರಾತನ ಗ್ರಂಥ ಪ್ರಯೋಗಾನುಸಾರಮಾಗಿ ವಿರಚಿತಮಪ್ಪ ವ್ಯಾಕರಣ ಸಂಗ್ರಹಮೆಂ ಪುಸ್ತಕಂ ನೋಡುಪಮಾಗಿ ರಾಜಿಪುದಿನರ್ಥಿಜನ"

ಇನ್ನೊಂದು ಮುದ್ರಿತಪ್ರತಿ ಸಂಪೂರ್ಣವಾಗಿ ನೋಡಲು ಅವಕಾಶವಾದಾಗ ಸೂಚನೆಯಲ್ಲಿ ಬಿಟ್ಟು ಹೋಗಿರುವ ಅಕ್ಷರಗಳು ಮತ್ತು ಮುಖಪುಟದ ವಿವರವನ್ನು ಪಡೆಯಬಹುದು. ೧೮೯೦ರಲ್ಲಿ ರಾಜಶೇಖರ ವಿಳಾಸದ ಟೀಕು ಮತ್ತು ವ್ಯಾಕರಣ ಸಂಗ್ರಹ ಪುಸ್ತಕ ಒಟ್ಟಿಗೆ ಒಂದರ ನಂತರ ಒಂದು ಮುದ್ರಣವಾಗಿರಬೇಕು. ಈಗ ನಮ್ಮೆಲ್ಲ ಪ್ರಶ್ನೆಗಳಿಗೆ ಉತ್ತರ ಹೇಳುವವರು ಇಲ್ಲ. ೧೮೯೦-೧೮೯೪ರವರೆಗೆ ನಾಲ್ಕು ವರ್ಷ ಯಾವ ಪುಸ್ತಕವು ಮುದ್ರಣವಾದ ವಿವರವಿಲ್ಲ, ಮದುವೆ ಮಾಡಿಕೊಂಡು, ಮನೆ ಕಟ್ಟಿರುವುದರಲ್ಲಿ ತುಂಬಾ ಕೆಲಸದ ಗಲಾಟೆಯಿಂದ ಯಾವ ಪುಸ್ತಕವು ಹೊರಬರಲಿಲ್ಲವೊ ಅಥವಾ ಹಸ್ತಪ್ರತಿ ಸಿದ್ಧವಾಗಿ ಮುದ್ರಣಾಲಯಕ್ಕೆ ಕೊಡಲು ಸಾಧ್ಯವಾಗಲಿಲ್ಲವೊ ಗೊತ್ತಿಲ್ಲ.

೨೬.೧೧.೨೦೦೨ನೇ ಭಾನುವಾರ ಹೆಸರುಘಟ್ಟಕ್ಕೆ ಹೋಗಿ ಕವಿಯ ಬಗ್ಗೆ ಮಾಹಿತಿ ಸಂಗ್ರಹಿಸಿದ್ದು. ಹೆಸರುಘಟ್ಟದ ನಿವಾಸಿ ನಮ್ಮ ಬಂಧುಗಳಾದ ಹೆಚ್.ಪಿ. ಫಾಲನೇತ್ರಪ್ಪ, ವೀರಭದ್ರೇಶ್ವರ ಬಸ್ ಮಾಲೀಕರು ಮತ್ತು ಅವರ ಮಗ ದಯಾನಂದ ಇವರ ಸಹಾಯದಿಂದ ಹೆಸರುಘಟ್ಟದ ಹೊನ್ನಪ್ಪನವರ ಬಂಧುಗಳಾದ ಹೆಚ್. ಪಿ. ರುದ್ರಸ್ವಾಮಿ ಜೊತೆಯಲ್ಲಿ ಹೆಸರುಘಟ್ಟದ ಹೊನ್ನಪ್ಪನವರ ಮೊಮ್ಮಗ ಹೆಚ್.ಜಿ. ಬಸವರಾಜು ಅವರನ್ನು ನೋಡಲು ಗೋಪಾಲಪುರಕ್ಕೆ ಹೋದರು. ಹೆಸರುಘಟ್ಟದ ಹೆಚ್.ಪಿ. ರುದ್ರಸ್ವಾಮಿ ಹೇಳಿದ ವಿಷಯ ''ಹೆಸರುಘಟ್ಟದ ಹೊನ್ನಪ್ಪನವರ ಮನೆ ಚಂದ್ರಮೌಳೀಶ್ವರ ದೇವಸ್ಥಾನ ರಸ್ತೆಯಲ್ಲಿ ಇತ್ತು, ದೊಡ್ಡಮನೆ ಅದನ್ನು ಬೀಳಿಸಿ ಬೇರೆ ಬೇರೆ ಮನೆ ಕಟ್ಟಿದ್ದಾರೆ. ಮೂವತ್ತು ವರ್ಷದ ಹಿಂದೆ ಸಹ ಜನ ''ಹೊನ್ನಪ್ಪನವರ'' ಮನೆ ಎಂದು ಕರೆಯುತ್ತಾ ಇದ್ದರು, ಎಂದು ತಿಳಿಸಿದರು ಇವರ ಮನೆಯಲ್ಲಿ ಒಂದು ಮರದ ಪೆಟ್ಟಿಗೆ ಇಟ್ಟಿದ್ದರಂತೆ ಅದನ್ನು ಸುಮಾರು ನಲವತ್ತು ವರ್ಷಗಳ ಮುಂಚೆ ಹೆಸರುಘಟ್ಟದ ಹೊನ್ನಪ್ಪನವರ ಮಗ ಗಂಗಪ್ಪನವರು ತರಿಸಿಕೊಂಡರಂತೆ.

ಗೋಪಾಲಪುರದ ತೋಟದ ಮನೆಯಲ್ಲಿ ವಾಸವಾಗಿರುವ ನಿವೃತ್ತ ಇಂಜಿನಿಯರ್ ಹೆಚ್.ಜಿ. ಬಸವರಾಜುರವರು ತಿಳಿದ ವಿಷಯವನ್ನು ತಿಳಿಸಿದರು. ನಮ್ಮ ತಾತ ನೀವು ಹುಡುಕಿಕೊಂಡು ಬಂದಿರುವ ''ಹೆಸರುಘಟ್ಟದ ಹೊನ್ನಪ್ಪ'' ನಮ್ಮ ಅಜ್ಜಿ ಹೆಸರು ''ಪುಟ್ಟ ಹುಚ್ಚಮ್ಮ'' ನಮ್ಮ ಅಜ್ಜಿ ನೆಲಮಂಗಲದ ಕಿಲ್ಲೇದಾರ ಮನೆತನದ ಹೆಣ್ಣುಮಗಳು. ೧೯೫೨ರಲ್ಲಿ ಶಿವೈಕ್ಯರಾದರು. ನನ್ನ ತಾಯಿ ಬೇಗ ಹೋದ್ದರಿಂದ ನನ್ನ ಸಾಕಿ ಸಲುಹಿದರು.

ನನ್ನ ತಂದೆ ಹೆಸರು ಹೆಚ್. ಗಂಗಪ್ಪನವರು ಅವರು ಹುಟ್ಟಿದ್ದು ೧೮.೮.೧೯೪೩ ಅವರು ಶಿವೈಕ್ಯರಾದದ್ದು ೮.೧೨.೧೯೭೬. ನಮ್ಮ ತಾತನವರು ಶಿವೈಕ್ಯರಾದದ್ದು ೧೯೪೪ ಶಿವರಾತ್ರಿ ಹಬ್ಬದ ದಿನ ಆಗ ನಮ್ಮ ತಂದೆಗೆ ಏಳು ತಿಂಗಳು. ನಮ್ಮ ತಂದೆ ಪ್ರತಿ ವರ್ಷ ತೋಟಗೆರೆ ಬಸವಣ್ಣನ ದೇವಸ್ಥಾನದಲ್ಲಿ ಅವರ ತಂದೆ ಹೆಸರಿನಲ್ಲಿ ಶಿವರಾತ್ರಿ ಹಬ್ಬದ ಮಾರನೇ ದಿನ ''ಪಾರಣೆ ದಿನ'' ಅನ್ನಸಂತರ್ಪಣೆ ಅಥವಾ ಸಾರ್ವಜನಿಕ ದಾಸೋಹವನ್ನು ಮಾಡುತ್ತಾ ಇದ್ದರು. ನಾವು ಮುಂದುವರೆಸಿಕೊಂಡು ಬಂದಿದ್ದೇವೆ.

ಹೆಚ್. ಗಂಗಪ್ಪನವರು ತಮ್ಮ ವಿದ್ಯಾಭ್ಯಾಸ ಮುಗಿಸಿ ಕಂದಾಯ ಇಲಾಖೆಯ ಶೇಕದಾರ ಆಗಿ ನಿವೃತ್ತರಾದರು. ಇವರ ಮೊದಲ ಪತ್ನಿ ಚೆನ್ನಮ್ಮ ಈಕೆ ಸಹ ನೆಲಮಂಗಲದ ಕಿಲ್ಲೇದಾರ ಮನೆತನದವರು. ಇವರ ಸುಪುತ್ರರೆ ಹೆಚ್.ಕೆ. ಬಸವರಾಜುರವರು. ಇವರಿಗೆ ಗಂಡು ಮಕ್ಕಳು ಹೆಣ್ಣು ಮಕ್ಕಳು ಎಲ್ಲಾ ಇದ್ದು ಹೆಸರುಘಟ್ಟದ ಹೊನ್ನಪ್ಪನವರ ಸಂತತಿ ಬೆಳೆದಿದೆ.

ಹೆಚ್. ಗಂಗಪ್ಪನವರ ಮೊದಲನೇ ಪತ್ನಿ ಲಿಂಗೈಕ್ಯರಾದ ಮೇಲೆ ಎರಡನೇ ಮದುವೆ ''ಹೆಸರುಘಟ್ಟದ ಚೆನ್ನಮ್ಮ'' ಎಂಬ ಕನ್ಯೆಯ ಜೊತೆ ವಿವಾಹವಾಯಿತು ಇವರಿಗೆ ಇಬ್ಬರು ಮಕ್ಕಳಾದ ಮೊದಲನೆಯವರು ಸ್ವರ್ಣ ಬಸವರಾಜು, ಎರಡನೆಯವರು ಸ್ವರ್ಣ ಹೊನ್ನಾಂಬ. ಇತ್ತೀಚೆಗೆ ಸ್ವರ್ಣಬಸವರಾಜು ಮತ್ತು ಅವರ ಪತ್ನಿ ಶಿವೈಕ್ಯರಾಗಿದ್ದಾರೆ. ಹೆಸರುಘಟ್ಟದ ಹೊನ್ನಪ್ಪನವರ ಧರ್ಮಪತ್ನಿ ''ಪುಟ್ಟಹುಚ್ಚಮ್ಮ''ನವರು ಬದುಕಿದ್ದಾಗ ಪ್ರಯತ್ನಪಟ್ಟು ಮಾಹಿತಿ ಸಂಗ್ರಹ ಮಾಡಿದ್ದರೆ ಅನೇಕ ವಿಷಯಗಳು ತಿಳಿದು ಬರುತ್ತಾ ಇತ್ತು. ಹೆಸರುಘಟ್ಟದ ಗ್ರಾಮಸ್ಥರಿಗಾಗಲಿ ಅಥವಾ ಬಂಧುಗಳಿಗಾಗಲಿ ಹೆಚ್ಚಿನ ವಿಷಯ ತಿಳಿದಿಲ್ಲ.

ಗ್ರಾಮಾಂತರ ಪ್ರದೇಶದಲ್ಲಿ ಜನಿಸಿ ವಿದ್ಯಾಭ್ಯಾಸ ಮುಗಿಸಿ, ಪ್ರೈಮರಿ ಶಾಲಾ ಅಧ್ಯಾಪಕರಾಗಿ ಅಪೂರ್ವವಾದ ಸಾಧನೆ ಮಾಡಿದ ಗಟ್ಟಿಯಾದ ವಿದ್ವಾಂಸನ ಬಗ್ಗೆ ಸಮಕಾಲೀನರು ಬರೆದ ಯಾವ ವಿಧವಾದ ಲೇಖನವು ಲಭ್ಯವಾಗಿಲ್ಲ. ಹೆಸರುಘಟ್ಟದ ಹೊನ್ನಪ್ಪನವರ ಕಾಲಮಾನದ ವಾರಪತ್ರಿಕೆ, ಮಾಸಪತ್ರಿಕೆಯಲ್ಲಿ ವಿಶೇಷವಾದ ಲೇಖನ ಪ್ರಕಟವಾಗಿರಬಹುದು ಅಂತಹ ಲೇಖನವನ್ನು ಯುವ ವಿದ್ವಾಂಸರ ಹುಡುಕಬೇಕು. ಕವಿ ಸಂಪಾದಿಸಿ ಪ್ರಕಟಿಸಿದ ಎಲ್ಲಾ ಕೃತಿಗಳನ್ನು ಸಂಪುಟಗಳನ್ನು ಯಥಾವತ್ತಾಗಿ ಹೊರತರಬೇಕು. ತುಂಬಾ ಚಿಕ್ಕ ವಯಸ್ಸಿನಲ್ಲಿ ಬಹು ದೊಡ್ಡ ಸಾಧನೆ ಮಾಡಿ, ಅನೇಕ ಪುಸ್ತಕಗಳನ್ನು ಕನ್ನಡಮ್ಮನ ಮಡಿಲಿಗೆ ತುಂಬಿದ ಲಿಂ. ಹೆಸರುಘಟ್ಟದ ಹೊನ್ನಪ್ಪನವರ ಜೀವನ ಸಾಧನೆ ಬಗ್ಗೆ ಬರೆದದ್ದು ನನ್ನ ಜೀವನದ ಸೌಭಾಗ್ಯ.

ಶ್ರೀ

ಶ್ರೀ ಶಿವಾಯನಮಃ.

ಸಟೀಕಾಕಬ್ಬಿಗರಕೈಪಿಡಿ.

ಲಿಂಗಮಂತ್ರಿಯೆಂಬ ಕವೀಶ್ವರನಿಂ ವಿರಚಿತವಾಗಿ

ಕರ್ಣಾಟಕ ವಿದ್ಯಾಭ್ಯಾಸಿಗಳಿಗತ್ಯಂತೋಪಯುಕ್ತವಾದ

ಈ ನಿಘಂಟು

ಬೆಂಗಳೂರು ತಾಲ್ಲೂಕು ಉಪ್ಪಾರಹಳ್ಳಿ ಸ್ಕೂಲ್

ಟೀಚರ ಹೆಸರಘಟ್ಟದ ಹೊನ್ನಪ್ಪನಿಂ ವಿಬುಧ

ಚಕೋರ ಚಂದ್ರಿಕೆಯೆಂಬ ಟೀಕು

ವಿರಚಿಸಲ್ಪಟ್ಟು,

ಬೆಂಗಳೂರು ಬುಕ್ ಡಿಪೋ ಏಜಂಟ

ವಾಜಪೇಯ ಕೃಷ್ಣಯ್ಯನವರಿಂದ

ಪ್ರಕಟಿಸಲ್ಪಟ್ಟಿರುತ್ತೆ.

ಮೊದಲನೆ ಭಾಗ, ೧೦೦೦ ಪ್ರತಿಗಳು.

ಬೆಂಗಳೂರು:

ಮೈಸೂರು ಸರ್ಕಾರ ಮುದ್ರಾಕ್ಷರಶಾಲೆಯೊಳ್ ಮುದ್ರಿಸಲ್ಪಟ್ಟಿತು.

1885.

ಕಬ್ಬಿಗರ ಕೈಪಿಡಿ

ಕರ್ನಾಟ ಕಲ್ಪದ್ರುಮಂ

ಕರ್ಣಾಟಭಾಷಾಭ್ಯಾಸಿಗಳಿಗತ್ಯಂತೋಪಯುಕ್ತವಾಗಿ

ಟ್ರಾನ್ಸ್ಲೇಟರ್ ಮ॥ರಾ॥ ರಾಮಸ್ವಾಮಿ ಶಾಸ್ತ್ರಿಗಳಿಂದ

ಪ್ರಾರಂಭಿಸಲ್ಪಟ್ಟ

ಈಪುಸ್ತಕವು ಬೆಂಗಳೂರುತಾಲ್ಲೂಕು ಉತ್ತರಹಳ್ಳಿವಾಸ್ತವ್ಯ ಲೇಖಕರ

ಮ॥ ಪೊನ್ನಪ್ಪನವರಿಂದಪೂರೈಸಲ್ಪಟ್ಟು.

ಬೆಂಗಳೂರು ಬಿ॥ ಪಿ॥ ಪ್ರೊ॥ ಜಿ॥ ಸುಬ್ಬರಾಯ

ಶಾಸ್ತ್ರಿಗಳಿಂದಲು

ಮ॥ ಚಿಕ್ಕಗಿರಿಯಪ್ಪನವರಿಂದಲು

ಸಹಾ ಪ್ರಕಟಗೊಳಿಸಲ್ಪಟ್ಟಿತು.

೧ನೇ ಛಾಪಿ-೧೦೦೦-ಪ್ರತಿಗಳು

BANGALORE:

PRINTED AT THE LUCKSHMY VILASA PRESS,

1885.

ಕ್ರಯ ರೂ. ೩-೪-೦ [prise Rs.3—4—0

ಕರ್ನಾಟ ಕಲ್ಪದ್ರುಮಂ


ಶ್ರೀರಸ್ತು.

ಸಟೀಕಾ ನಾನಾರ್ಥ ಕಂದಪದ್ಯ.

ಕರ್ಣಾಟಕಭಾಷಾಭ್ಯಾಸಿಗಳಿಗತ್ಯಂತೋಪಯುಕ್ತವಾಗಿ
ಶ್ರೀಮುಕ್ಕಣ್ಣ ಕವೀಂದ್ರನಿಂ ವಿರಚಿತವಾದ ನಾನಾರ್ಥ
ಕಂದಪದ್ಯವೆಂಬ ಈ ನಿಘಂಟು,
ಬೆಂಗಳೂರು ತಾಲ್ಲೂಕು ಉದ್ಯಾರಹಳ್ಳಿ ಸ್ಕೂಲ್ ಹೆಡ್
ಮಾಸ್ಟರ್ ಶೇಷಪ್ಪನವರ ಸಹಾಯದೊಡನೆ ಡಿಪ್ಟೀ
ಸ್ಕೂಲ್‌ಟೀಚರ್ ಹೆಸರಘಟ್ಟದ ಹೊನ್ನಪ್ಪನಿಂದ
ವಿದ್ವದ್ರಂಜನೀಯೆಂಬ ಟೀಕು ವಿರಚಿಸಲ್ಪಟ್ಟು,
ಬೆಂಗಳೂರು ಬುಕ್‌ಡಿಪೋ ಏಜಂಟ್
ವಾಜಪೇಯ ಕೃಷ್ಣಯ್ಯನವರಿಗೆ ಈ ಹಕ್ಕನ್ನು
ಕೊಡಲ್ಪಟ್ಟಿರುತ್ತೆ.

ಬೆಂಗಳೂರು ಬುಕ್‌ಡಿಪೋ ಮುದ್ರಾಕ್ಷರಶಾಲೆಯಲ್ಲಿ
ಮುದ್ರಿಸಲ್ಪಟ್ಟಿತು.
೧೮೮೪.

ಸಟೀಕಾ ನಾನಾರ್ಥ ಕಂದಪದ್ಯ


ಶ್ರೀರಸ್ತು.

ಮಹಾಕವಿಯಾದ ನಾಗವರ್ಮನಿಂ ವಿರಚಿತವಾದ

ನಾನಾರ್ಥರತ್ನಾಕರವೆಂಬ

ಈ ನಿಘಂಟು.

ವಿದ್ಯಾಭ್ಯಾಸಿಗಳಿಗತ್ಯಂತೋಪಯುಕ್ತವಾಗಿ,

[illegible] ಟೀಕು ವಿರಚಿಸಲ್ಪಟ್ಟು,

[illegible]

[illegible] ಶಾಸ್ತ್ರಿಯವರಿಂದ

ಪ್ರಕಟಿಸಲ್ಪಟ್ಟಿತು.

([illegible])

[illegible] ಮುದ್ರಾಕ್ಷರ ಶಾಲೆ[illegible]

ಮುದ್ರಿಸಲ್ಪಟ್ಟಿತು.

[illegible]

[illegible]

ನಾನಾರ್ಥ ರತ್ನಾಕರಂ

ಶ್ರೀ

ಶ್ರೀ ಷಡಕ್ಷರಾತ್ಮಕಾಯನಮಃ.

ಸಟೀಕ ರಾಜಶೇಖರ ವಿಳಾಸಂ.

ಶ್ರೀ ಷಡಕ್ಷರದೇವ ಮಹಾಕವಿಗಳಿಂ ವಿರಚಿತಮಾದೀಕಾವ್ಯಂ

ಶ್ಯಾಮೆಗೊಂಡ್ಲು ತಾಲ್ಲೂಕ್ 'ಬ್ರಾಂಚ್ ಸ್ಕೂಲ್'

ಹೆಡ್ ಮಾಸ್ಟರ್ ಹೆಸರಪಟ್ಟ

ಪೊನ್ನಪ್ಪನವರಿಂದ ವಿರಚಿಸಲ್ಪಟ್ಟ ಟೀಕಿನೊಡನೆ

ಪ್ರಸಿದ್ಧ ಮಾಗಿರ್ಪುದು.

(ಮೊದಲನೆಯಭಾಗಂ ೫ ಆಶ್ವಾಸಂಗಳ್)

ಮೊದಲನೆಯ ಛಾಪ ೧,೦೦೦ ಪ್ರತಿ.

ಬೆಂಗಳೂರು

ವಿಚಾರ ದರ್ಪಣ ಮುದ್ರಾಕ್ಷರಶಾಲೆಯಲ್ಲಿ

ಮುದ್ರಿಸಲ್ಪಟ್ಟಿತು.

1890.

ಸಟೀಕಾ ರಾಜಶೇಖರವಿಳಾಸಂ

ಗ್ರಾಮಾಂತರ ಪ್ರದೇಶದಲ್ಲಿ ಜನಿಸಿ ವಿದ್ಯಾಭ್ಯಾಸ ಮುಗಿಸಿ, ಪ್ರೈಮರಿ ಶಾಲಾ ಅಧ್ಯಾಪಕರಾಗಿ ಅಪೂರ್ವವಾದ ಸಾಧನೆ ಮಾಡಿದ ಗಟ್ಟಿಯಾದ ವಿದ್ವಾಂಸನ ಬಗ್ಗೆ ಸಮಕಾಲೀನರು ಬರೆದ ಯಾವ ವಿಧವಾದ ಲೇಖನವು ಲಭ್ಯವಾಗಿಲ್ಲ. ಹೆಸರುಘಟ್ಟದ ಹೊನ್ನಪ್ಪನವರ ಕಾಲಮಾನದ ವಾರಪತ್ರಿಕೆ, ಮಾಸಪತ್ರಿಕೆಯಲ್ಲಿ ವಿಶೇಷವಾದ ಲೇಖನ ಪ್ರಕಟವಾಗಿರಬಹುದು ಅಂತಹ ಲೇಖನವನ್ನು ಯುವ ವಿದ್ವಾಂಸರ ಹುಡುಕಬೇಕು. ಕವಿ ಸಂಪಾದಿಸಿ ಪ್ರಕಟಿಸಿದ ಎಲ್ಲಾ ಕೃತಿಗಳನ್ನು ಸಂಪುಟಗಳನ್ನು ಯಥಾವತ್ತಾಗಿ ಹೊರತರಬೇಕು. ತುಂಬಾ ಚಿಕ್ಕ ವಯಸ್ಸಿನಲ್ಲಿ ಬಹು ದೊಡ್ಡ ಸಾಧನೆ ಮಾಡಿ, ಅನೇಕ ಪುಸ್ತಕಗಳನ್ನು ಕನ್ನಡಮ್ಮನ ಮಡಿಲಿಗೆ ತುಂಬಿದ ಅಂ. ಹೆಸರುಘಟ್ಟದ ಹೊನ್ನಪ್ಪನವರ ಜೀವನ ಸಾಧನೆ ಬಗ್ಗೆ ಬರೆದದ್ದು ನನ್ನ ಜೀವನದ ಸೌಭಾಗ್ಯ.

- ಡಾ. ನಂಜುಂಡಸ್ವಾಮಿ

